epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237
ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ
KARNATAKA MALLA, MUMBAI
ಸಂಪುಟ : 35 ಸಂಚಿಕೆ : 242 ಸೋಮವಾರ 05-10-2026 ಬೆಲೆ : ₹ 6 ಪುಟಗಳು - 10
ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಚುನಾವಣೆ ಬಹಿಷ್ಕಾರ ಕುರಿತ ರಾಜ್‌ಠಾಕ್ರೆ ಕರೆಗೆ ಪೃಥ್ವಿರಾಜ್ ಚವಾಣ್ ವಿರೋಧ



ಮುಂದಿನ ತಲೆಮಾರಿಗೆ ಸ್ಫೂರ್ತಿಯಾದ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಶೌರ್ಯಗಾಥೆ

ನಿಯತ್ತಿನ ಜನರೊಡನೆ ಅತ್ಯಂತ ಪ್ರಾಮಾಣಿಕನಾಗಿರು.
ನಟಿಸುವ ಜನರೊಡನೆ ಅತ್ಯುತ್ತಮ ನಟನಾಗಿರು.

3 ವಿಧಾನಪರಿಷತ್ ಚುನಾವಣೆ: ಬಿಜೆಪಿಯಿಂದ 3 ಸ್ಥಾನಗಳಿಗೆ ಅಭ್ಯರ್ಥಿಗಳ ಘೋಷಣೆ

ಏಷ್ಯನ್ ಗೇಮ್ಸ್‌ಗೆ ವರ್ಣರಂಜಿತ ತೆರೆ; 85 ಪದಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದ ಭಾರತ 5

ಎಷ್ಟೇ ಸಿನಿಮಾ ನೋಡಿದರೂ ತಂದೆ ತರ ಹೀರೋ ಸಿಗಲ್ಲ.
ಎಷ್ಟೇ ದೇವಸ್ಥಾನ ಸುತ್ತಿದರೂ ತಾಯಿ ತರ ದೇವತೆ ಸಿಗಲ್ಲ.

# ಜ್ಞಾನೇಶ್ ಕುಮಾರ್ ಬಿಜೆಪಿಯ 'ಅಸ್ತ್ರ' ; ಉದ್ಧವ್ ಆರೋಪ
# ಮಹಾರಾಷ್ಟ್ರದ ಎಸ್‌ಐಆರ್ ಪ್ರಕ್ರಿಯೆ ರದ್ದು : ರಾಜ್‌ಠಾಕ್ರೆ ಆಗ್ರಹ

## ಮುಂಬಯಿನಲ್ಲಿ ಠಾಕ್ರೆ ಸೋದರಸಂಬಂಧಿಗಳ ನೇತೃತ್ವದಲ್ಲಿ ಬೃಹತ್ ಜನಮೋರ್ಚಾ ; ಕಾಂಗ್ರೆಸ್,ಎನ್‌ಸಿಪಿ(ಎಸ್‌ಪಿ) ನಾಯಕರು ಭಾಗಿ





**ಮುಂಬಯಿ,ಅ.4 - ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ವಿರುದ್ಧ ಶಿವಸೇನೆ (ಯುಬಿಟಿ) ಮತ್ತು ಮಹಾರಾಷ್ಟ್ರ ನವನಿರ್ಮಾಣ ಸೇನೆ (ಮನಸೇ) ನೇತೃತ್ವದಲ್ಲಿ ನಗರದಲ್ಲಿ ಇಂದು ಬೃಹತ್ ಜನಮೋರ್ಚಾ ನಡೆದಿದ್ದು, ಈ ಸಂದರ್ಭ ಮಾತನಾಡಿದ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಸಿಇಸಿ ಆಡಳಿತಾರೂಢ ಬಿಜೆಪಿಯ 'ಅಸ್ತ್ರ'ದಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿದರೆ, ಮನಸೇ ಅಧ್ಯಕ್ಷ ರಾಜ್‌ಠಾಕ್ರೆ ಅವರು,ಮಹಾರಾಷ್ಟ್ರದ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಆಗ್ರಹಿಸಿದರು.**





ಸಿಇಸಿ ವಿರುದ್ಧ ಮುಂಬಯಿನಲ್ಲಿ ಠಾಕ್ರೆ ಸೋದರಸಂಬಂಧಿಗಳ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೋರ್ಚಾದಲ್ಲಿ ಸಾವಿರಾರು ಜನರು ಪಾಲ್ಗೊಂಡು,ಇದು ಬೃಹತ್ ರ್‍ಯಾಲಿಯಲ್ಲಿ ಅಂತ್ಯಗೊಂಡಿತು. ಈ ರ್‍ಯಾಲಿಯಲ್ಲಿ ಕಾಂಗ್ರೆಸ್ ನಾಯಕರಾದ ಬಾಳಾಸಾಹೇಬ್ ಥೋರಟ್ ಮತ್ತು ವಿಜಯ್ ವಡೆಟ್ಟಿವಾರ್ ಹಾಗೂ ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ)ಯ ಜಯಂತ್ ಪಾಟೀಲ್, ಶಶಿಕಾಂತ್ ಶಿಂಧೆ, ಜಿತೇಂದ್ರ ಅವ್ಹಾಡ್ ಮತ್ತು ಅನಿಲ್ ದೇಶ್‌ಮುಖ್ ಭಾಗವಹಿಸಿದ್ದರು. ಜನಮೋರ್ಚಾವು ಮೆಟ್ರೋ ಸಿನಿಮಾದಿಂದ ಆರಂಭವಾಗಿ, ದಕ್ಷಿಣ ಮುಂಬಯಿನಲ್ಲಿರುವ ಬೃಹನ್‌ಮುಂಬಯಿ ಮಹಾನಗರ ಪಾಲಿಕೆಯ (ಬಿಎಂಸಿ) ಪ್ರಧಾನ ಕಚೇರಿಯವರೆಗೆ ಸಾಗಿತು.

ಪ್ರತಿಭಟನಾಕಾರರಿಗೆ ಬೆಂಬಲ ವ್ಯಕ್ತಪಡಿಸಿದ 'ಕಾಕ್ರೋಚ್ ಜನತಾ ಪಾರ್ಟಿ' (ಸಿಜೆಪಿ)ಯ ಸಂಸ್ಥಾಪಕ ಅಭಿಜೀತ್ ದೀಪ್ಕೆ,ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಾಗಿ ನಗರದ ಜನರು ಮತ್ತೆ ಬೀದಿಗಿಳಿದಿದ್ದಾರೆ.ಇದು ನಿರ್ಣಾಯಕ ಸಮಯವಾಗಿದೆ. ಎಲ್ಲಾ ಭಾರತೀಯರು ಒಗ್ಗೂಡಬೇಕೆಂದು ಕರೆ ನೀಡಿದರು. ಸಿಜೆಪಿ ನಾಯಕರು ಶುಕ್ರವಾರ ಮುಂಬಯಿನಲ್ಲಿ ಸಿಇಸಿ ವಿರುದ್ಧ 'ಜೈಲ್ ಭರೋ ಆಂದೋಲನ' ನಡೆಸಿದ್ದರು.

'ವಿರಾಟ್ ಗರ್ಜನಾ ಮೋರ್ಚಾ' (ಬೃಹತ್ ಗರ್ಜನೆಯ ಮೋರ್ಚಾ) ಎಂದು ಕರೆಯಲಾದ ಈ ಪ್ರತಿಭಟನೆಯಲ್ಲಿ ಭಾಗವಹಿಸಿದವರು, ಎಸ್‌ಐಆರ್ ಪ್ರಕ್ರಿಯೆಯಲ್ಲಿನ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಸಿಇಸಿ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ತೆಗೆದುಹಾಕಬೇಕು ಅಥವಾ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಮೋರ್ಚಾದಲ್ಲಿ ಪಕ್ಷದ ಧ್ವಜಗಳಿಗೆ ಅವಕಾಶವಿರಲಿಲ್ಲ ಮತ್ತು ಭಾಗವಹಿಸುವವರು ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ಮಾತ್ರ ಹಿಡಿಯುವಂತೆ ಸೂಚಿಸಲಾಗಿತ್ತು. ದೇಶದಲ್ಲಿ ಮುಂದಿನ ಚುನಾವಣೆಗಳನ್ನು ಕಾಗದದ ಮತಪತ್ರದ (ಪೇಪರ್‌ಬ್ಯಾಲೆಟ್) ಮೂಲಕ ನಡೆಸಬೇಕೆಂದು ರಾಜ್ ಠಾಕ್ರೆ ಆಗ್ರಹಿಸಿದರಲ್ಲದೆ, ಮಹಾರಾಷ್ಟ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆಯೂ ಒತ್ತಾಯಿಸಿದರು.

ಮತದಾರರ ಪಟ್ಟಿಯಿಂದ ಬಾಂಗ್ಲಾದೇಶಿಗಳನ್ನು ಹೊರಗಿಡಲು ಎಸ್‌ಐಆರ್ ನಡೆಸಲಾಗಿದ್ದರೆ, ದೇಶದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಎಷ್ಟು ಬಾಂಗ್ಲಾದೇಶಿಗಳನ್ನು ಸರಕಾರ ಪತ್ತೆಹಚ್ಚಿದೆ? ಎಂದು ಉದ್ಧವ್ ಠಾಕ್ರೆ ಪ್ರಶ್ನಿಸಿದರು.

'ಜ್ಞಾನೇಶ್ ಕುಮಾರ್ ಬಿಜೆಪಿಯ ಅಸ್ತ್ರವಾಗಿದ್ದಾರೆ' ಎಂದು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಆರೋಪಿಸಿದರು.

3ನೇ ಪುಟಕ್ಕೆ

# ಜಿಎಸ್‌ಟಿ ನಿಯಮದಲ್ಲಿ ದೊಡ್ಡ ಸುಧಾರಣೆಗೆ ಸಿದ್ಧತೆ; ತೆರಿಗೆ ಅಧಿಕಾರಿಗಳ ಬಂಧನ ಅಧಿಕಾರ ರದ್ದು ಸಾಧ್ಯತೆ

**ಹೊಸದಿಲ್ಲಿ,ಅ.4 - ಸರಕಾರದ 'ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳ' ಭಾಗವಾಗಿ,ಜಿಎಸ್‌ಟಿ ಜಾರಿಗೆ ಸಂಬಂಧಿಸಿದ ನಿಯಮಗಳಲ್ಲಿ ವ್ಯಾಪಕ ಬದಲಾವಣೆಗಳನ್ನು ತರುವ ಪ್ರಸ್ತಾವನೆಯನ್ನು ಜಿಎಸ್‌ಟಿ ಮಂಡಳಿಯು ಈ ವಾರ ಪರಿಗಣಿಸುವ ಸಾಧ್ಯತೆಯಿದ್ದು, ಈ ಪ್ರಸ್ತಾವನೆಯು ತೆರಿಗೆ ಅಧಿಕಾರಿಗಳ ಬಂಧನ ಅಧಿಕಾರವನ್ನು ಹಿಂಪಡೆಯುವ ಮತ್ತು ಯಾವುದೇ ಬಂಧನಕ್ಕೆ ನ್ಯಾಯಾಲಯದ ಆದೇಶವನ್ನು ಕಡ್ಡಾಯಗೊಳಿಸುವ ಅಂಶಗಳನ್ನು ಒಳಗೊಂಡಿದೆ ಎಂದು ಮೂಲಗಳು ತಿಳಿಸಿವೆ.**

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕುರಿತಾದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಾದ ಜಿಎಸ್‌ಟಿ ಮಂಡಳಿಯು, ಅ.7 ರಂದು ನಡೆಯಲಿರುವ ಸಭೆಯಲ್ಲಿ ಕಾನೂನು ಕ್ರಮಗಳಿಗೆ ಸಂಬಂಧಿಸಿದ ಸುಧಾರಣೆಗಳ ಪ್ಯಾಕೇಜ್‌ನ್ನು ಪರಿಗಣಿಸುವ ಸಾಧ್ಯತೆಯಿದೆ. ಇದರಲ್ಲಿ ಅಪರಾಧಗಳಿಗೆ ಕ್ರಿಮಿನಲ್ ಮೊಕದ್ದಮೆ ಹೂಡಲು ಇರುವ ಕನಿಷ್ಠ ಮಿತಿಯನ್ನು 5 ಕೋಟಿ ರೂ.ಗೆ ಏರಿಸುವ ಪ್ರಸ್ತಾವನೆಯೂ ಸೇರಿದೆ. ವರ್ಗೀಕರಣ, ಮೌಲ್ಯಮಾಪನ ಅಥವಾ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಕುರಿತಾದ ಸಾಮಾನ್ಯ ವಿವಾದಗಳಿಗೆ ಈ ಕಾನೂನು ಕ್ರಮದ ನಿಬಂಧನೆಗಳು ಅನ್ವಯವಾಗದಂತೆ ಅವುಗಳ ವ್ಯಾಪ್ತಿಯನ್ನು ಸೀಮಿತಗೊಳಿಸಲು ಈ ಪ್ರಸ್ತಾವನೆಗಳು ಉದ್ದೇಶಿಸಿವೆ. ಇಂತಹ ವಿವಾದಗಳಲ್ಲಿ ಒಂದೇ ವಹಿವಾಟಿನ ಬಗ್ಗೆ ವ್ಯವಹಾರಗಳು ಮತ್ತು ತೆರಿಗೆ ಅಧಿಕಾರಿಗಳು ಭಿನ್ನವಾದ ವ್ಯಾಖ್ಯಾನಗಳನ್ನು ಹೊಂದಿರಬಹುದು ಎಂದು ಮೂಲಗಳು ತಿಳಿಸಿವೆ.

2025ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ತರಲಾದ ಪ್ರಮುಖ ದರ ತರ್ಕಬದ್ಧಗೊಳಿಸುವಿಕೆಯ ಬಳಿಕ ಜಾರಿಗೆ ಸಂಬಂಧಿಸಿದ ಈ ಪ್ರಸ್ತಾವಿತ ಬದಲಾವಣೆಗಳು ಸರಕಾರದ 'ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣಾ ಕಾರ್ಯಸೂಚಿ'ಯ ಭಾಗವಾಗಿವೆ. ಆ ಹಿಂದಿನ ಪರಿಷ್ಕರಣೆಯು ಜಿಎಸ್‌ಟಿ ರಚನೆಯನ್ನು ಸರಳೀಕರಿಸಿತ್ತು. ಇದರಲ್ಲಿ ಶೇ. 5 ರಷ್ಟು 'ಮೆರಿಟ್ ದರ' (ಅಗತ್ಯ ವಸ್ತುಗಳಿಗೆ) ಮತ್ತು ಶೇ. 18 ರಷ್ಟು 'ಪ್ರಮಾಣಿತ ದರ'ವನ್ನು ನಿಗದಿಪಡಿಸಲಾಗಿತ್ತು ಹಾಗೂ ಆಯ್ದ ಐಷಾರಾಮಿ ಮತ್ತು ಹಾನಿಕಾರಕ ಸರಕುಗಳಿಗೆ ಶೇ. 40 ರಷ್ಟು ದರವನ್ನು ವಿಧಿಸಲಾಗಿತ್ತು.

ಮುಂದಿನ ಹಂತವು ಆಡಳಿತವನ್ನು ಸರಳೀಕರಿಸುವುದು, ಅನುಸರಣಾ ವೆಚ್ಚಗಳನ್ನು ಕಡಿಮೆ ಮಾಡುವುದು ಮತ್ತು ಜಾರಿ ಪ್ರಕ್ರಿಯೆಯನ್ನು ಹೆಚ್ಚು ಸಮಂಜಸವಾಗಿಸುವುದರ ಮೇಲೆ ಕೇಂದ್ರೀಕರಿಸುವ ನಿರೀಕ್ಷೆಯಿದೆ.

ಪರಿಗಣನೆಯಲ್ಲಿರುವ ವಿಶಾಲವಾದ ಪ್ಯಾಕೇಜ್‌ನಲ್ಲಿ ಸುಲಭ ನೋಂದಣಿ, ತ್ವರಿತ ಮರುಪಾವತಿ, ಸರಳೀಕೃತ ಇನ್‌ಪುಟ್-ಟ್ಯಾಕ್ಸ್-ಕ್ರೆಡಿಟ್ ಕಾರ್ಯವಿಧಾನಗಳು ಹಾಗೂ ಕಾರಣ ಕೇಳುವ ಸೂಚನೆಗಳು ಮತ್ತು ದಂಡಗಳಿಗೆ ಸಂಬಂಧಿಸಿದ ಬದಲಾವಣೆಗಳು ಸೇರಿವೆ ಎಂದು ಮೂಲಗಳು ತಿಳಿಸಿವೆ.

ಜಾರಿ ಪ್ರಕ್ರಿಯೆಗೆ ಸಂಬಂಧಿಸಿದ ಈ ಪ್ರಸ್ತಾವನೆಯ ಕೇಂದ್ರಬಿಂದುವು 'ಕೇಂದ್ರೀಯ ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 69' ಆಗಿದೆ. ಶಾಸನಬದ್ಧ ಷರತ್ತುಗಳು ಪೂರೈಸಲ್ಪಟ್ಟಾಗ ಮತ್ತು ನಿರ್ದಿಷ್ಟ ಅಪರಾಧಗಳು ನಡೆದಿವೆ ಎಂದು ನಂಬಲು ಕಾರಣವಿದ್ದಾಗ, ಒಬ್ಬ ವ್ಯಕ್ತಿಯನ್ನು ಬಂಧಿಸಲು ಅಧಿಕಾರಿಯನ್ನು ನೇಮಿಸಲು ಈ ಸೆಕ್ಷನ್ ಆಯುಕ್ತರಿಗೆ ಅಧಿಕಾರ ನೀಡುತ್ತದೆ. ಪ್ರಸ್ತಾವಿತ ಬದಲಾವಣೆಗಳು ತೆರಿಗೆ ಅಧಿಕಾರಿಗಳಿಂದ ಈ ಅಧಿಕಾರವನ್ನು ತೆಗೆದುಹಾಕುತ್ತವೆ. ಬದಲಾಗಿ, ಯಾವುದೇ ಬಂಧನಕ್ಕೆ ನ್ಯಾಯಾಂಗದ ಅನುಮೋದನೆ ಅಗತ್ಯವಿರುತ್ತದೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತಾವಿತ ಬದಲಾವಣೆಗಳು ತೆರಿಗೆ ವಸೂಲಿ ಮಾಡುವ ಅಥವಾ ಆರ್ಥಿಕ ದಂಡ ವಿಧಿಸುವ ಸರಕಾರದ ಅಧಿಕಾರವನ್ನು ಮೊಟಕುಗೊಳಿಸುವುದಿಲ್ಲ. ನಿಗದಿತ ತೆರಿಗೆ, ಬಡ್ಡಿ ಮತ್ತು ದಂಡವನ್ನು ಪಾವತಿಸುವ ಮೂಲಕ ಅಪರಾಧ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಲು 'ಕಾಂಪೌಂಡಿಂಗ್' (ಒಪ್ಪಂದದ ಮೂಲಕ ಇತ್ಯರ್ಥ) ಅವಕಾಶ ನೀಡುತ್ತದೆ. ತೆರಿಗೆಯನ್ನು ಕಡಿಮೆ ಪಾವತಿಸಿದ ಅಥವಾ 'ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್'ನ್ನು ತಪ್ಪಾಗಿ ಪಡೆದ ತೆರಿಗೆದಾರರು ಎಂದಿನಂತೆ ವಸೂಲಿ ಪ್ರಕ್ರಿಯೆಗಳು ಮತ್ತು ಇತರ ಕಾನೂನುಬದ್ಧ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

# ಪಂಚ ರಾಜ್ಯಗಳ ಚುನಾವಣೆಗೆ ಸಿದ್ಧತೆ ಚುರುಕುಗೊಳಿಸಲು ಉಪ ಚುನಾವಣಾ ಆಯುಕ್ತರ ನಿಯೋಗದಿಂದ ಭೇಟಿ

**ಹೊಸದಿಲ್ಲಿ,ಅ.4 - ಚುನಾವಣೆ ನಡೆಯಲಿರುವ 5 ರಾಜ್ಯಗಳಲ್ಲಿ ಕ್ಷೇತ್ರ ಮಟ್ಟದಲ್ಲಿ ಚುನಾವಣಾ ಸಿದ್ಧತೆಗಳನ್ನು ಪರಿಶೀಲಿಸಲು, ಉಪ ಚುನಾವಣಾ ಆಯುಕ್ತರ ನೇತೃತ್ವದಲ್ಲಿ ಚುನಾವಣಾ ಆಯೋಗದ ಹಿರಿಯ ಅಧಿಕಾರಿಗಳು ಈ ವಾರದಿಂದಲೇ ಈ ರಾಜ್ಯಗಳಿಗೆ ಭೇಟಿ ನೀಡಲಿದ್ದಾರೆ.**

ಈ ವಾರ ಚುನಾವಣಾ ಆಯೋಗದ ತಂಡಗಳು ಗೋವಾಗೆ ಭೇಟಿ ನೀಡಲಿವೆ ಮತ್ತು ಬಳಿಕದ ವಾರ ಉತ್ತರಾಖಂಡಕ್ಕೆ ಭೇಟಿ ನೀಡಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಂಬರುವ ವಾರಗಳಲ್ಲಿ ಆಯೋಗದ ಅಧಿಕಾರಿಗಳು ಪಂಜಾಬ್ ಮತ್ತು ಮಣಿಪುರಕ್ಕೂ ಭೇಟಿ ನೀಡಲಿದ್ದಾರೆ.

ಉತ್ತರಪ್ರದೇಶಕ್ಕೆ ಆಯೋಗದ ಅಧಿಕಾರಿಗಳು ಯಾವಾಗ ಭೇಟಿ ನೀಡಲಿದ್ದಾರೆ ಎಂಬುದರ ಕುರಿತು ಇನ್ನೂ ಯಾವುದೇ ಮಾಹಿತಿ ಲಭ್ಯವಿಲ್ಲ.

ಸಾಮಾನ್ಯವಾಗಿ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಆಯುಕ್ತರನ್ನು ಒಳಗೊಂಡ 'ಪೂರ್ಣ ಆಯೋಗ'ವು ಚುನಾವಣಾ ವೇಳಾಪಟ್ಟಿಯನ್ನು ಘೋಷಿಸುವ ಮುನ್ನವೇ ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಭೇಟಿ ನೀಡುತ್ತದೆ.

403 ಸದಸ್ಯ ಬಲದ ಉತ್ತರಪ್ರದೇಶ ವಿಧಾನಸಭೆಯ ಅವಧಿಯು ಮುಂದಿನ ವರ್ಷ ಮೇ 22 ರಂದು ಕೊನೆಗೊಳ್ಳಲಿದ್ದರೆ, ಮಣಿಪುರ (60 ಸದಸ್ಯರು), ಗೋವಾ (40 ಸದಸ್ಯರು), ಪಂಜಾಬ್ (117 ಸದಸ್ಯರು) ಮತ್ತು ಉತ್ತರಾಖಂಡ (70 ಸದಸ್ಯರು) ವಿಧಾನಸಭೆಗಳ ಅವಧಿಯು 2027ರ ಮಾರ್ಚ್‌ನಲ್ಲಿ ವಿವಿಧ ದಿನಾಂಕಗಳಂದು ಕೊನೆಗೊಳ್ಳಲಿದೆ.

'ಜನತಾ ಪ್ರಾತಿನಿಧ್ಯ ಕಾಯ್ದೆ, 1950'ರ ನಿಬಂಧನೆಗಳ ಪ್ರಕಾರ, ಆಯಾ ವಿಧಾನಸಭೆಗಳ ಅವಧಿ ಮುಗಿಯುವ 6 ತಿಂಗಳ ಮುಂಚಿತವಾಗಿಯೇ ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗಕ್ಕೆ ಅವಕಾಶವಿದೆ.

ಚುನಾವಣಾ ಸಿದ್ಧತೆಯ ಭಾಗವಾಗಿ, ಉತ್ತರಪ್ರದೇಶ ಮತ್ತು ಗೋವಾ ರಾಜ್ಯಗಳು ಮತದಾನದಲ್ಲಿ ಬಳಸಲಾಗುವ ಎಲೆಕ್ಟ್ರಾನಿಕ್ ಮತಯಂತ್ರಗಳು (ಇವಿಎಂ) ಮತ್ತು ಪೇಪರ್‌ಟ್ರೈಲ್ ಯೂನಿಟ್‌ಗಳ 'ಮೊದಲ ಹಂತದ ಪರಿಶೀಲನೆ'ಯನ್ನು ಆರಂಭಿಸಿವೆ.

ಎಫ್‌ಎಲ್‌ಸಿ ಪ್ರಕ್ರಿಯೆ ಸಂದರ್ಭ ಈ ಉಪಕರಣಗಳನ್ನು ತಯಾರಿಸುವ ಸಾರ್ವಜನಿಕ ವಲಯದ ಉದ್ಯಮಗಳಾದ ಬಿಇಎಲ್ ಮತ್ತು ಇಸಿಐಎಲ್‌ನ ಎಂಜಿನಿಯರ್‌ಗಳು ಯಾಂತ್ರಿಕ ದೋಷಗಳಿಗಾಗಿ ಮತಯಂತ್ರಗಳು ಮತ್ತು ಪೇಪರ್‌ಟ್ರೈಲ್ ಯಂತ್ರಗಳನ್ನು ಪರಿಶೀಲಿಸುತ್ತಾರೆ. ದೋಷಪೂರಿತ ಯಂತ್ರಗಳನ್ನು ದುರಸ್ತಿ ಅಥವಾ ಬದಲಾವಣೆಗಾಗಿ ತಯಾರಕರಿಗೆ ಹಿಂತಿರುಗಿಸಲಾಗುತ್ತದೆ.

ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಈ ಯಂತ್ರಗಳನ್ನು ಪರೀಕ್ಷಿಸಲು 'ಅಣಕು ಮತದಾನ'ವನ್ನೂ ನಡೆಸಲಾಗುತ್ತದೆ.ಎಫ್‌ಎಲ್‌ಸಿ ಪ್ರಕ್ರಿಯೆಯು ಚುನಾವಣಾ ಸಿದ್ಧತೆಯ ಪ್ರಮುಖ ಭಾಗವಾಗಿದೆ.

# ಗುಜರಾತ್ : ರೈಲು ನಿಲ್ದಾಣದಿಂದ ಲೂಟಿ ಮಾಡಿದ 4 ಕೋಟಿ ರೂ. ಮೌಲ್ಯದ ಚಿನ್ನದ ಸಹಿತ 4 ಆರೋಪಿಗಳ ಬಂಧನ

**ಅಹ್ಮದಾಬಾದ್, ಅ.4- ಗುಜರಾತಿನ ಖೇಡ ಜಿಲ್ಲೆಯ ರೈಲ್ವೇ ನಿಲ್ದಾಣವೊಂದರಿಂದ ಕಳ್ಳತನ ಮಾಡಲಾದ 4 ಕೋಟಿ ರೂ. ಬೆಲೆಬಾಳುವ 2.9 ಕೆಜಿ ಚಿನ್ನವನ್ನು ಕೆಲವೇ ಗಂಟೆಗಳಲ್ಲಿ ವಶಪಡಿಸಿಕೊಂಡರುವ ಪೊಲೀಸರು ನಾಲ್ವರನ್ನು ಬಂಧಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.**

ಅಹ್ಮದಾಬಾದ್ ಗ್ರಾಮೀಣ ಪೊಲೀಸರು ಮತ್ತು ಸರಕಾರಿ ರೈಲ್ವೇ ಪೊಲೀಸ್ ( ಜಿಆರ್‌ಪಿ) ಜಂಟಿ ತಂಡಗಳು ಕಾರ್ಯಾಚರಣೆ ನಡೆಸಿದ್ದು, ಶನಿವಾರ ಸಂಜೆ ಕೆಲವೇ ಗಂಟೆಗಳಲ್ಲಿ ವಿರಾಮ ಗ್ರಾಮದ ಬಳಿಯಲ್ಲಿ ಆರೋಪಿಗಳನ್ನು ಬಂಧಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಜ್ಯುವೆಲ್ಲರ್‌ವೊಂದರ ಸಿಬ್ಬಂದಿಯು ಚಿನ್ನದ ಜತೆಯಲ್ಲಿ ಕೊಲ್ಕತ್ತಾದಿಂದ ನಡಿಯಾಡ್ ರೈಲ್ವೇನಿಲ್ದಾಣಕ್ಕೆ ಶನಿವಾರ ಸಂಜೆ ಗಂಟೆ 5ರ ವೇಳೆಗೆ ಬಂದಿಳಿದಾಗ ದರೋಡೆಕೋರರ ಗ್ಯಾಂಗ್ ಆತನಿಂದ ಚಿನ್ನವನ್ನು ಕಿತ್ತುಕೊಂಡು ಪರಾರಿಯಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ, ಅದೃಷ್ಟವಶಾತ್ ದರೋಡೆಕೋರರನ್ನು ಬೆನ್ನಟ್ಟಿದ್ದ ಜ್ಯುವೆಲ್ಲರ್ ಸಿಬ್ಬಂದಿ ದರೋಡೆಕೋರರು ಪರಾರಿಯಾದ ವಾಹನದ ಛಾಯಾಚಿತ್ರವನ್ನು ತೆಗೆಯಲು ಯಶಸ್ವಿಯಾಗಿದ್ದರು ಎಂದು ಅಧಿಕಾರಿ ತಿಳಿಸಿದ್ದಾರೆ.

ಖೇಡ ಸರಕಾರಿ ರೈಲ್ವೇ ಪೊಲೀಸ್ ( ಜಿಆರ್‌ಪಿ) ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ್ದು ತಕ್ಷಣವೇ ರಾಜ್ಯ ನಿಯಂತ್ರಣ ಕೊಠಡಿಗೆ ಮಹಾತಿ ನೀಡಿ ಶಂಕಿತರು ಪರಾರಿಯಾಗುತ್ತಿದ್ದ ಕಾರು ಮತ್ತು ಅದರಲ್ಲಿದ್ದವನ್ನು ಬಂಧಿಸಲು ಸೂಚಿಸಲಾಗಿತ್ತು ಎಂದು ಅಧಿಕಾರಿ ತಿಳಿಸಿದ್ದಾರೆ.

ಎಚ್ಚರಿಕೆ ಸಂದೇಶ ಪಡೆಯುತ್ತಲೇ ರಾತ್ರಿ ಗಂಟೆ 7.30ರ ವೇಳೆಗೆ ಅಹ್ಮದಾಬಾದ್ ಗ್ರಾಮೀಣ ಪೊಲೀಸರು ವಾಹನದ ನೋಂದಾವಣಿ ವಿವರಗಳು ಮತ್ತು ಮೊಬೈಲ್ ಫೋನ್ ಗ್ರಾಹಕ ವಿವರ ದಾಖಲೆ ( ಎಸ್‌ಡಿಆರ್) ಡೇಟಾ ಆಧಾರದಲ್ಲಿ ಕಾರು ತೆರಳುತ್ತಿದ್ದ ಮಾರ್ಗಗಳ ಮಾಹಿತಿಯನ್ನು ಕಲೆ ಹಾಕಿದ್ದು , ಶಂಕಿತರು ಬನಾಸ್ಕಾಂತ ಕಡೆಗೆ ತೆರಳುತ್ತಿರುವ ಮಾಹಿತಿ ನೀಡಿದ್ದರು.

ಸ್ಥಳೀಯ ಮಾಹಿತಿ ನೆಟ್‌ವರ್ಕ್‌ನ ಖಚಿತ ಮಾಹಿತಿ ಆಧಾರದಲ್ಲಿ ಪೊಲೀಸರು ದರೋಡೆಕೋರರು ಪರಾರಿಯಾಗಿದ್ದ ಕಾರನ್ನು ಅಹ್ಮದಾಬಾದ್ ಜಿಲ್ಲೆಯ ವಿರಾಮ ಗ್ರಾಮದಲ್ಲಿ ಪತ್ತೆಹಚ್ಚಿದ್ದು, ಆ ಕಾರನ್ನು ನಂಬರ್ ಪ್ಲೇಟ್ ಇಲ್ಲದ ವಾಹನವೊಂದು ಹಿಂಬಾಲಿಸುತ್ತಿತ್ತೆಂದು ಖಚಿತ ಪಡಿಸಿಕೊಂಡರು.

3ನೇ ಪುಟಕ್ಕೆ

# ತಿರುವನಂತಪುರಂ : ಶ್ರೀಲೇಖ ರಾಜೀನಾಮೆ ನೀಡಿಲ್ಲ ಕೌನ್ಸಿಲರ್ ಆಗಿ ಮುಂದುವರಿಯುತ್ತಾರೆ : ಬಿಜೆಪಿ

**ತಿರುವನಂತಪುರಂ, ಅ. 4- ಮಾಜಿ ಡಿಜಿಪಿ ಆರ್. ಶ್ರೀಲೇಖ ಅವರು ತಿರುವನಂತಪುರಂ ಮಹಾನಗರ ಪಾಲಿಕೆ ಸದಸ್ಯತ್ವಕ್ಕೆ ನೀಡಿರುವ ರಾಜೀನಾಮೆಯನ್ನು ಅಂಗೀಕರಿಸಲು ಬಿಜೆಪಿ ನಿರಾಕರಿಸಿದ್ದು, ಶ್ರೀಲೇಖ ಅವರು ಕಾರ್ಪೊರೇಟರ್ ಆಗಿ ಮುಂದುವರಿಯಲಿದ್ದಾರೆಂದು ಮೇಯರ್ ವಿ. ವಿ. ರಾಜೇಶ್ ಮತ್ತು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಸ್. ಸುರೇಶ್ ಹೇಳಿದ್ದಾರೆ.**

ಶ್ರೀಲೇಖ ಅವರು ಅವರ ವಾರ್ಡ್ ನಿವಾಸಿಗಳ ವಾಟ್ಸ್ಆ್ಯಪ್ ಗುಂಪೊಂದರಲ್ಲಿ ತಾನು ಕೌನ್ಸಿಲರ್ ಸ್ಥಾನದ ರಾಜೀನಾಮೆ ಪತ್ರವನ್ನು ಮೇಯರ್ ರಾಜೇಶ್ ಅವರಿಗೆ ನೀಡಿದ್ದು, ಅಕ್ಟೋಬರ್ 5ರಂದು ಜಿಲ್ಲಾಧಿಕಾರಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸುತ್ತೇನೆ ಎಂದು ಸಂದೇಶವನ್ನು ಪೋಸ್ಟ್ ಮಾಡಿದ್ದರು.

ಸುದ್ದಿಗಾರರ ಜತೆಗೆ ಈ ಮೊದಲು ಮಾತನಾಡುತ್ತಿದ್ದ ಮೇಯರ್ ರಾಜೇಶ್ ಅವರು, ಸೆಪ್ಟೆಂಬರ್ 30ರಂದು ಶ್ರೀಲೇಖ ಅವರ ರಾಜೀನಾಮೆ ಪತ್ರ ತನಗೆ ಬಂದಿದೆ. ಆದರೆ ತಾನು ಅದನ್ನು ಮಹಾನಗರ ಪಾಲಿಕೆಯ ಕಾರ್ಯದರ್ಶಿಗೆ ಕಳುಹಿಸಿಲ್ಲ. ರಾಜೀನಾಮೆ ಅಂಗೀಕರಿಸುವ ಅಧಿಕಾರ ಇರುವುದು ಮಹಾನಗರ ಪಾಲಿಕೆಯ ಕಾರ್ಯದರ್ಶಿಗೆ ಎಂದು ಹೇಳಿದ್ದಾರೆ.

ರಾಜೀನಾಮೆ ಪತ್ರದಲ್ಲಿ ಶ್ರೀಲೇಖ ಅವರು ವೈಯಕ್ತಿಕ ಕಾರಣಗಳನ್ನು ಪ್ರಸ್ತಾವಿಸಿದ್ದರು ಎಂದು ರಾಜೇಶ್ ಹೇಳಿದ್ದರು. ಆದರೆ ರವಿವಾರ ಸುದ್ದಿಗಾರರ ಜತೆಗೆ ಮಾತನಾಡುತ್ತಿದ್ದ ಅವರು, ಅಂತಹ ರಾಜೀನಾಮೆ ಪತ್ರವೇ ಇಲ್ಲ. ಅವರು ರಾಜೀನಾಮೆ ನೀಡಿದ್ದಾರೆಂದು ನಿಮಗೆ ಹೇಳಿದ್ದು ಯಾರು?

3ನೇ ಪುಟಕ್ಕೆ

# ಥಾಣೆ:ಇಂಟಿಗ್ರಲ್ ರಿಂಗ್ ಮೆಟ್ರೋ ಮಾರ್ಗ ವಿನ್ಯಾಸ ವಿರೋಧಿಸಿ ಸ್ಥಳೀಯರಿಂದ ಮಾನವ ಸರಪಳಿ ರಚಿಸಿ ಪ್ರತಿಭಟನೆ

**ಥಾಣೆ,ಅ.4 - ಥಾಣೆ ಇಂಟಿಗ್ರಲ್ ರಿಂಗ್ ಮೆಟ್ರೋ (ಟಿಐಆರ್‌ಎಂ) ಯೋಜನೆಯ ಪ್ರಸ್ತಾವಿತ ಮಾರ್ಗ ವಿನ್ಯಾಸವನ್ನು ವಿರೋಧಿಸಿ ರವಿವಾರ ಹಲವರು ಶಾಂತಿಯುತ ಪ್ರತಿಭಟನಾ ಮೋರ್ಚಾ ನಡೆಸಿದ ಜತೆಗೆ ಮಾನವ ಸರಪಳಿಗಳನ್ನು ರಚಿಸಿದರು.**





ಯಾವುದೇ ಬದಲಾಯಿಸಲಾಗದ ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು, ಪ್ರಸ್ತುತ ಯೋಜನೆಗಳನ್ನು ಪರಿಶೀಲಿಸುವಂತೆ ಹಾಗೂ ಬಾಧಿತ ಸ್ಥಳೀಯ ಸಮುದಾಯಗಳೊಂದಿಗೆ ಸಮಾಲೋಚನೆ ನಡೆಸುವಂತೆ ಪ್ರತಿಭಟನಾಕಾರರು ಪಾಲಿಕೆ ಮತ್ತು ಮೆಟ್ರೋ ಅಧಿಕಾರಿಗಳನ್ನು ಒತ್ತಾಯಿಸಿದರು. ಹಿರಾನಂದಾನಿ ಎಸ್ಟೇಟ್‌ನಲ್ಲಿ ವಿವಿಧ ವಸತಿ ಸಂಕೀರ್ಣಗಳ 250ಕ್ಕೂ ಹೆಚ್ಚು ನಿವಾಸಿಗಳು ಶಾಂತಿಯುತ ಮೋರ್ಚಾದಲ್ಲಿ ಪಾಲ್ಗೊಂಡರು ಮತ್ತು ಮಾನವ ಸರಪಳಿಯನ್ನು ರಚಿಸಿದರು.

ಸಾರ್ವಜನಿಕ ಸಾರಿಗೆ ಮತ್ತು ನಗರ ಅಭಿವೃದ್ಧಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸುವಂತೆಯೇ, ನಿವಾಸಿಗಳು ಸಂಚಾರ ದಟ್ಟಣೆ, ಹಸಿರು ವಲಯದ ನಷ್ಟ, ಶಾಲೆಗಳ ಬಳಿ ಪಾದಚಾರಿಗಳ ಸುರಕ್ಷತೆ ಮತ್ತು ಸಮುದಾಯದ ದೈನಂದಿನ ಜೀವನಕ್ಕೆ ಉಂಟಾಗುವ ಅಡಚಣೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.

'ರಸ್ತೆಗಳ ಮುಂಭಾಗದಲ್ಲಿ ಪ್ರಸ್ತಾಪಿಸಲಾದ ರಿಂಗ್ ಮೆಟ್ರೋ ನಿವಾಸಿಗಳಿಗೆ ಸಾಕಷ್ಟು ಅನಾನುಕೂಲತೆಯನ್ನು ಉಂಟುಮಾಡುತ್ತದೆ.ಇದು ಪ್ರಸ್ತುತ ಇರುವ ಹಸಿರು ವಲಯಕ್ಕೆ ಹಾನಿ ಮಾಡುವುದಲ್ಲದೆ, ಭದ್ರತೆ ಮತ್ತು ಸುರಕ್ಷತೆಯ ಸಮಸ್ಯೆಗಳನ್ನೂ ಸೃಷ್ಟಿಸುತ್ತದೆ. ಪ್ರಸ್ತುತ ನಿರ್ಮಾಣವಾಗುತ್ತಿರುವ ಕೋಸ್ಟಲ್ ರೋಡ್‌ನ ಪಕ್ಕದಲ್ಲಿದ್ದ ಮೂಲ ಮಾರ್ಗಕ್ಕೆ ಇದನ್ನು ಮರುಹೊಂದಿಸಬೇಕೆಂದು ನಾವು ವಿನಂತಿಸುತ್ತಿದ್ದೇವೆ' ಎಂದು ಪ್ರತಿಭಟನಾಕಾರರೊಬ್ಬರು ಹೇಳಿದರು.

# ದಿಲ್ಲಿ : ಪೊಲೀಸರಿಂದ ಮೂವರು ಪತ್ರಕರ್ತೆಯರ ಮೇಲೆ ಲೈಂಗಿಕ ದೌರ್ಜನ್ಯ; ಕ್ರೈಮ್ ಬ್ರಾಂಚ್‌ನಿಂದ ತನಿಖೆ

**ಹೊಸದಿಲ್ಲಿ, ಅ. 4- ದಿಲ್ಲಿಯ ಜಂತರ್ ಮಂತರ್‌ನಲ್ಲಿ ಅಕ್ಟೋಬರ್ 3ರಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧದ ಪ್ರತಿಭಟನೆ ಸಂದರ್ಭದಲ್ಲಿ ಪೊಲೀಸರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಮೂವರು ಪತ್ರಕರ್ತೆಯರು ಆಪಾದಿಸಿದ್ದು, ಅದನ್ನು ಅನುಸರಿಸಿ ಅವರ ದೂರುಗಳನ್ನು ದಿಲ್ಲಿ ಪೊಲೀಸರು ನಿಷ್ಪಕ್ಷಪಾತದ ತನಿಖೆಗಾಗಿ ಕ್ರೈಮ್ ಬ್ರಾಂಚಿಗೆ ವರ್ಗಾಯಿಸಿದ್ದಾರೆಂದು ಅಧಿಕಾರಿಯೊಬ್ಬರು ರವಿವಾರ ತಿಳಿಸಿದ್ದಾರೆ.**

ಸಹಾಯಕ ಪೊಲೀಸ್ ಕಮಿಷನರ್ ಒಬ್ಬ ತನ್ನ ಮೇಲೆ ಲೈಂಗಿಕ ದಾಳಿ ನಡೆಸಿದ್ದಾನೆಂದು ಶನಿವಾರ ಪತ್ರಕರ್ತೆಯೊಬ್ಬರು ಹೇಳಿದ್ದರು.

ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ವೇಳೆ ಕಾನೂನು ಮತ್ತು ಶಿಸ್ತು ಕಾಪಾಡಲು ಪೊಲೀಸರನ್ನು ನಿಯುಕ್ತಿಗೊಳಿಸಲಾಗಿತ್ತು. ಆ ಸಂದರ್ಭದಲ್ಲಿ ಪೊಲೀಸರಿಂದ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಮಹಿಳಾ ಪತ್ರಕರ್ತರು ದೂರು ನೀಡಿದ್ದಾರೆಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೂರುಗಳನ್ನು ನಿಷ್ಪಕ್ಷಪಾತ ಮತ್ತು ಸರಿಯಾದ ರೀತಿಯಲ್ಲಿ ತನಿಖೆಗಾಗಿ ಜಿಲ್ಲಾ ಪೊಲೀಸರು ಕ್ರೈಮ್ ಬ್ರಾಂಚಿಗೆ ವರ್ಗಾಯಿಸಿರುವುದಾಗಿ ಅಧಿಕಾರಿ ಹೇಳಿದ್ದಾರೆ.

ದೂರುಗಳನ್ನು ಕ್ರೈಮ್ ಬ್ರಾಂಚ್ ಪರಿಶೀಲಿಸಲಿದೆ ಮತ್ತು ದೂರುದಾರರ ಹೇಳಿಕೆಗಳನ್ನು ಮತ್ತು ಸಂಬಂಧಪಟ್ಟ ಇತರರ ಹೇಳಿಕೆಗಳನ್ನು ದಾಖಲಿಸಿಕೊಂಡು ತನಿಖೆ ನಡೆಸಲಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

3ನೇ ಪುಟಕ್ಕೆ

Congratulations



Dr. Shwetha Prasanna Shetty
Congratulations on your Ph.D. in Mathematics from
Visvesvaraya Technological University (VTU), Belagavi
We are so very proud of you.
May your future be bright, your dreams soar high,
and every step you take lead you towards success and happiness.
ನಮ್ಮೆಲ್ಲರ ಆತ್ಮೀಯರಾಗಿದ್ದ ಪುಣೆ ಬಂಟರ ಸಂಘದ
ಉತ್ತರ ವಲಯದ ಕಾರ್ಯದರ್ಶಿ ಪ್ರಸನ್ನ ಶೆಟ್ಟಿಯವರ ಧರ್ಮಪತ್ನಿ
ಡಾ. ಶ್ವೇತ ಪ್ರಸನ್ನ ಶೆಟ್ಟಿಯವರು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ
ವಿದ್ಯಾಲಯದಿಂದ (VTU) ಗಣಿತಶಾಸ್ತ್ರದಲ್ಲಿ ಪಿಎಚ್‌ಡಿ (Ph.D.) ಪದವಿ
ಪಡೆದಿರುವ ಶುಭ ಸಂದರ್ಭದಲ್ಲಿ
ನಮ್ಮೆಲ್ಲರ ಆತ್ಮೀಯ ಅಭಿನಂದನೆಗಳು.

ಉದಯ ಸುಂದರ ಶೆಟ್ಟಿ
ದೆಂದೂರು
Dombivli - Mumbai

ರಮಾನಂದ ಎಸ್. ಶೆಟ್ಟಿ
ದೆಂದೂರು
Pune - Kharadi

ಪ್ರವೀಣ್ ಶೆಟ್ಟಿ
ಪೆರ್ಡೂರು
Pune - Kharadi

ವಿನಯ್ ಎಸ್. ಶೆಟ್ಟಿ
ಪೆರ್ಡೂರು
Pune - Kharadi

ನಾರಾಯಣ ಎನ್. ಶೆಟ್ಟಿ ಪೆರ್ಡೂರು ಹೊಲಿಂಜೆ

# ಜಯ ಸಿ. ಸುವರ್ಣ ಅಭಿಮಾನಿಗಳು ಮುಂಬಯಿ - ಯುವ ವಿಭಾಗದ ಆಶ್ರಯದಲ್ಲಿ 'ವೈಬ್ ಫೆಸ್ಟ್ 2026' ಸಮಾರೋಪ ; ಸಾಧಕರಿಗೆ ಸನ್ಮಾನ

# ಜಯ ಸುವರ್ಣರಿಗೆ ತಪ್ಪು ಮಾಡಿರುವ ಎಲ್ಲರನ್ನೂ ಕ್ಷಮಿಸಿ, ಒಟ್ಟಿಗೆ ಕರೆದೊಯ್ಯುತ್ತಿದ್ದ ಹೃದಯವಂತಿಕೆಯ ಗುಣವಿತ್ತು : ಶಾಸಕ ಉಮಾನಾಥ್ ಕೋಟ್ಯಾನ್


ಡಾ. ಪಿ. ವಿ. ಶೆಟ್ಟಿ ಅವರನ್ನು ಸನ್ಮಾನಿಸಿದಾಗ.


ಕ್ರಿಕೆಟ್ ಆಟಗಾರ ಮಾಸ್ಟರ್ ತನುಷ್ ಕೋಟ್ಯಾನ್ ಪರವಾಗಿ ಮಾತಾಪಿತರನ್ನು ಸನ್ಮಾನಿಸಿದಾಗ.


ಭಾಸ್ಕರ್ ಎಸ್. ಕೋಟ್ಯಾನ್ ಕೊಳಕೆ ಇರ್ವತ್ತೂರು ಇವರನ್ನು ಸನ್ಮಾನಿಸಿದಾಗ.


ಮಂಜುನಾಥ ಪೂಜಾರಿ ಮುದ್ರಾಡಿ ಅವರನ್ನು ಸನ್ಮಾನಿಸಿದಾಗ.


ಗೌರೇಶ್ ಕೋಟ್ಯಾನ್ ಅವರನ್ನು ಸನ್ಮಾನಿಸಿದಾಗ .


ಸದಾನಂದ ಎಸ್. ಪೂಜಾರಿ ಅವರನ್ನು ಸನ್ಮಾನಿಸಿದಾಗ .


ಮೋಹನ್ ಎಸ್ ಪೂಜಾರಿ ಅವರನ್ನು ಸನ್ಮಾನಿಸಿದಾಗ.

## ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಮಾಜದ ಹಿತಕ್ಕಾಗಿ ನಾವೆಲ್ಲರೂ ಒಂದಾಗಬೇಕಿದೆ : ಸಂಸದ ಕೋಟ ಶ್ರೀನಿವಾಸ ಪೂಜಾರಿ



ನಾರಾಯಣ ಗುರುಗಳ ಸಾಂಸ್ಕೃತಿಕ ಕ್ರಾಂತಿ ಹಾಗೂ ಕೋಟಿ-ಚೆನ್ನಯರ ಸ್ವಾಭಿಮಾನದ ಬದುಕು ನಮ್ಮ ಸಮಾಜಕ್ಕೆ ದೊಡ್ಡ ಪ್ರೇರಣೆಯಾಗಿದೆ. ಬರೀ ಮಾತುಗಳಿಗೆ ಸೀಮಿತವಾಗದೆ, ರಾಜಕೀಯ ಮತ್ತು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಮಾಜದ ಹಿತಕ್ಕಾಗಿ ನಾವೆಲ್ಲರೂ ಒಂದಾಗಬೇಕಿದೆ.

ಸಮಾಜದಲ್ಲಿ ರಕ್ತಕ್ರಾಂತಿಯಾಗದೆ ಪರಿವರ್ತನೆ ತಂದ ಶ್ರೀ ನಾರಾಯಣ ಗುರುಗಳು ಮತ್ತು ಸ್ವಾಭಿಮಾನಿ ಬದುಕಿಗೆ ಹೆಸರಾದ ಕೋಟಿ-ಚೆನ್ನಯರ ಆದರ್ಶಗಳು ನಮ್ಮ ಸಮಾಜಕ್ಕೆ ದೊಡ್ಡ ಶಕ್ತಿಯಾಗಿವೆ. ಬರೀ ಭಾಷಣಗಳಿಗೆ ಸೀಮಿತವಾಗದೆ, ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಮಾಜದ ಹಿತಕ್ಕಾಗಿ ನಾವೆಲ್ಲರೂ ಒಂದಾಗಬೇಕಿದೆ. ಜಯಸುವರ್ಣ ಅವರಂತೆ ತಪ್ಪುಗಳನ್ನು ತಿದ್ದಿಕೊಂಡು, ಹೊಸ ಆಲೋಚನೆಗಳೊಂದಿಗೆ ಒಗ್ಗಟ್ಟಿನಿಂದ ಬಲಿಷ್ಠ ಸಮಾಜವನ್ನು ಕಟ್ಟೋಣ ಎಂದು ನುಡಿದರು.

## ಜಯ ಸುವರ್ಣರು ಸ್ವಾರ್ಥವಿಲ್ಲದೆ ಸಮಾಜವನ್ನು, ಬ್ಯಾಂಕ್‌ನ್ನು ಬೆಳೆಸಿದವರು : ಸತೀಶ್ ಕುಂಪಲ



ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಸತೀಶ್ ಕುಂಪಲ ಮಾತನಾಡಿ, ಬಿಲ್ಲವ ಸಮಾಜದ ಪ್ರತಿಭಾವಂತ ಯುವ ಸಮುದಾಯವನ್ನು ಗೌರವಿಸಿ ಸನ್ಮಾಸಿದ ಈ ಕಾರ್ಯಕ್ರಮ ಅಭೂತಪೂರ್ವವಾಗಿದೆ. ದೇಶದ ಯಾವುದೇ ರಾಜ್ಯದ ಜನ ಮುಂಬೈ ನಗರದಲ್ಲಿದ್ದರೂ ಅವರಿಗೆ ಜಯ ಸುವರ್ಣರ ಬಗ್ಗೆ ತಿಳಿದಿರಬಹುದು ಎಂದು ನಾನು ನಂಬಿಕೊಂಡವನು. ಸ್ವಾರ್ಥವಿಲ್ಲದೆ ಸಮಾಜವನ್ನು ,ಬ್ಯಾಂಕನ್ನು ಬೆಳೆಸಿದವರು. ಮುಂದೆ ಭಾರತ್ ಬ್ಯಾಂಕು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನಷ್ಟು ಶಾಖೆಗಳನ್ನು ತೆರೆಯುವಂತಾಗಲಿ ಎಂದು ಶುಭ ಹಾರೈಸಿದರು.

## ಸಮಾಜದ ಒಗ್ಗಟ್ಟಿಗೆ ಕರೆಕೊಟ್ಟಾಗ ಸಾವಿರ ಸಾವಿರ ಸಂಖ್ಯೆಯಲ್ಲಿ ಒಗ್ಗಟ್ಟಾಗೋಣ ; ಸಮಾಜವನ್ನು ಬಲಿಷ್ಠ ಗೊಳಿಸೋಣ : ಸೂರ್ಯಕಾಂತ್ ಜಯ ಸುವರ್ಣ



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸೂರ್ಯಕಾಂತ್ ಜಯ ಸುವರ್ಣ ಮಾತನಾಡುತ್ತಾ, ನಮ್ಮೆಲ್ಲರ ಆತ್ಮೀಯತೆಯ ಕರೆಗೆ ಸಮಾಜ ಬಾಂಧವರು ಜಯ ಸುವರ್ಣರ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ, ನಂಬಿಕೆಗಳಿಂದಾಗಿ ಸಾವಿರ ಸಂಖ್ಯೆಯಲ್ಲಿ ಈ ಬಂಟರ ಭವನ ಕಿಕ್ಕಿರಿದು ತುಂಬಲು ಸಾಧ್ಯವಾಗಿದೆ. ನಾವೆಲ್ಲರೂ ಒಗ್ಗಟ್ಟು ಮತ್ತು ಶಿಸ್ತಿನಿಂದ ಸಮಾಜವನ್ನು ಒಗ್ಗಟ್ಟು ಮಾಡಬೇಕಾಗಿದೆ. ನಿಮ್ಮೆಲ್ಲರ ಪ್ರೀತಿಯ ಗೌರವಕ್ಕೆ ನಾನು ಸದಾ ಋಣಿಯಾಗಿದ್ದೇನೆ. ಯಾವುದೇ ಸಂದರ್ಭದಲ್ಲಿ ನಾವು ಸಮಾಜದ ಒಗ್ಗಟ್ಟಿಗೆ ಕರೆಕೊಟ್ಟಾಗ ಹೀಗೆ ಸಾವಿರ ಸಾವಿರ ಸಂಖ್ಯೆಯಲ್ಲಿ ಒಗ್ಗಟ್ಟಾಗೋಣ ಸಮಾಜವನ್ನು ಬಲಿಷ್ಠಗೊಳಿಸೋಣ ಎಂದರು.


ಹಾಕಿ ಆಟಗಾರ ಸುರಾಜ್ ಕರ್ಕೇರ ಅವರ ಪರವಾಗಿ ಮಾತಾಪಿತರನ್ನು ಸನ್ಮಾನಿಸಿದಾಗ


ರಕ್ಷಾ ಜೆ. ಕುಳಾಯಿ ಅವರನ್ನು ಸನ್ಮಾನಿಸಿದಾಗ .

## ಜಯ ಸುವರ್ಣರು ಕೇವಲ ಬಿಲ್ಲವ ಸಮಾಜಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ; ಇಡೀ ಮಾನವಕುಲಕ್ಕೆ, ಅಗತ್ಯವಾಗಿದ್ದವರು : ಪದ್ಮರಾಜ್ ಆರ್. ಪೂಜಾರಿ



ಕಾರ್ಯಕ್ರಮದ ಗೌರವ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಪದ್ಮರಾಜ್ ಆರ್. ಪೂಜಾರಿ ಮಾತನಾಡಿ, ನಮ್ಮ ಜೀವನ ನಾಲ್ಕು ದಿನದ್ದು. ಎಷ್ಟು ದಿನ ನಾವು ಇರುತ್ತೇವೋ, ಯಾವಾಗ ನಾವು ಹೀಗೆ ಹೋಗುತ್ತೇವೋ ಯಾರಿಗೆ ಗೊತ್ತು?. ಜೀವಿತವಿರುವಷ್ಟು ದಿನ ಎಲ್ಲರ ಪ್ರೀತಿಯನ್ನು ಸಂಪಾದಿಸೋಣ. ಜಯ ಸುವರ್ಣರು ಆ ಮಟ್ಟಿಗೆ ಜನರ ಪ್ರೀತಿಯನ್ನು ಸಂಪಾದನೆ ಮಾಡಿದ್ದರು ಎಂದರೆ, ನನಗೆ ಅವರ ಬಗ್ಗೆ ಗೊತ್ತಿತ್ತು. ನಾನು ಬಹಳಷ್ಟು ಬಾರಿ ಜಯ ಸುವರ್ಣರ ಜೊತೆಗೆ, ಅವರ ಮಕ್ಕಳ ಸ್ಥಾನದಲ್ಲಿದ್ದು ಅವರ ಜೊತೆಗಿದ್ದೆ. ಹಾಗಂದ ಮೇಲೆ ಅವರು ದೇವರ ಪಾದ ಸೇರಿದ ಮೇಲೆ, ಒಂದು ವರ್ಷ ಮುಗಿದು ನಾನು ಅವರ ಪುಣ್ಯತಿಥಿಗೆ ಇಲ್ಲಿಗೆ ಬಂದಾಗ, ಬಹುಶಃ ಬಿಲ್ಲವ ಸಮಾಜ ಮಾತ್ರವಲ್ಲದೆ ಬೇರೆ ಬೇರೆ ಸಮಾಜದವರೆಲ್ಲ ಸೇರಿ ಇಂತಹ ಒಂದು ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅದನ್ನು ನೋಡಿ ನನ್ನ ಕಣ್ಣಲ್ಲಿ ನೀರು ಬಂತು. ಜಯ ಸುವರ್ಣರ ಬಗ್ಗೆ ಬೇರೆ ಬೇರೆ ಸಮಾಜದವರು ಮಾತನಾಡುವುದನ್ನು ನೋಡಿದಾಗ, ಜಯ ಸುವರ್ಣರು ಕೇವಲ ಬಿಲ್ಲವ ಸಮಾಜಕ್ಕೆ ಮಾತ್ರ ಸೀಮಿತವಾಗಿರಲಿಲ್ಲ, ಇಡೀ ಮಾನವಕುಲಕ್ಕೆ, ನಮ್ಮ ಕರ್ನಾಟಕದಲ್ಲಿ ಅದಕ್ಕಿಂತ ವಿಶೇಷವಾಗಿ ಎಲ್ಲಾ ಜಾತಿ-ಧರ್ಮದವರಿಗೂ ಅನುಸರಿಸುವಂತಹ ವ್ಯಕ್ತಿತ್ವ ಜಯ ಸುವರ್ಣರದ್ದಾಗಿತ್ತು ಎಂದು ಹೇಳುವುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿಯಾಗಿದೆ ಎಂದು ನುಡಿದರು.

## ಜಯ ಸುವರ್ಣರ ಸೇವಾ ಕಾರ್ಯವನ್ನು ಉಳಿಸುವ ಕೆಲಸ ಅಗತ್ಯವಿದೆ : ಶಾಸಕ ಗುರ್ಮೆ ಸುರೇಶ್ ಶೆಟ್ಟಿ



ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕಾಪು ಕ್ಷೇತ್ರದ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ತನ್ನ ಅನಿಸಿಕೆಗಳನ್ನು ತಿಳಿಸುತ್ತಾ ಈ ಕಾರ್ಯಕ್ರಮವನ್ನು ನೋಡಿ ಹೃದಯ ತುಂಬಿ ಬಂದಿದೆ . ಸಾವಿರಾರು ಸಂಖ್ಯೆ ಯಲ್ಲಿ ಬಿಲ್ಲವ ಸಮಾಜ ಬಂಧುಗಳ ಒಗ್ಗಟ್ಟು ಕಂಡಾಗ ತುಳು ನಾಡಿನಲ್ಲಿದ್ದ ನೆನಪಾಯಿತು. ಜಯ ಸುವರ್ಣ ಅವರು ನನ್ನ ಊರಿನವರು. ಯಾವುದೇ ದೇವಸ್ಥಾನಗಳು , ಗರಡಿಗಳು, ದೈವಸ್ಥಾನಗಳು ಅಭಿವೃದ್ಧಿಗೆ ಸುವರ್ಣರು ದೊಡ್ಡ ಕೊಡುಗೆಯನ್ನು ನೀಡಿದವರು. ನಾನು ಬಹಳ ವರ್ಷಗಳಿಂದ ನನ್ನ ವಯಕ್ತಿಕ ಯಾವುದೇ ಕಾರ್ಯಕ್ರಮಗಳಿದ್ದರೂ ಅದಕ್ಕೆ ಮೊದಲು ಕರೆಯುವುದು ಜಯ ಸುವರ್ಣರವರನ್ನು. ಇಂದು ಸುವರ್ಣರ ನೆನಪನ್ನು ಅವರ ಪುತ್ರ ಸೂರ್ಯಕಾಂತ್ ಮತ್ತು ಅವರ ಕಂಡ ಶಾಶ್ವತವಾಗಿ ಮರಾಠಿ ಮಣ್ಣಿನಲ್ಲಿ ಉಳಿಸುವ ಕೆಲಸವನ್ನು ಮಾಡುತ್ತಿದ್ದು ಇದು ಅಗತ್ಯವಾಗಿತ್ತು. ಹಿರಿಯರನ್ನು ನೆನಪಿಸಿ ನಮ್ಮ ಭಾಷೆ , ಸಂಸ್ಕೃತಿಯನ್ನು ಉಳಿಸುವ ಕಾಯಕದಲ್ಲಿ ನಾವೆಲ್ಲರೂ ತೊಡಗುವ ಎಂದರು.

## ಬಂಟರ ಭವನದಲ್ಲಿ ದಾಖಲೆಯ ಜನಸಂಖ್ಯೆಯಲ್ಲಿ ಸೇರಿದ ಜಯ ಸುವರ್ಣರ ಅಭಿಮಾನಿಗಳು : ಪ್ರವೀಣ್ ಭೋಜ ಶೆಟ್ಟಿ



ಮುಂಬೈ ಬಂಟರ ಸಂಘದ ಅಧ್ಯಕ್ಷರಾದ ಪ್ರವೀಣ್ ಬಿ. ಶೆಟ್ಟಿ ಅವರು ಮಾತನಾಡಿ, ನನ್ನ ಮೂರು ವರ್ಷದ ಅಧ್ಯಕ್ಷತೆಯ ಕಾಲಾವಧಿಯಲ್ಲಿ ಬಂಟರ ಭವನದಲ್ಲಿ ಇಷ್ಟು ಸಾವಿರ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರಿಕೊಂಡಿರುವುದು ಎರಡನೇ ಬಾರಿ. ಇದು ಕೇವಲ ಬಿಲ್ಲವ ಸಮಾಜದ ಭಾಗ್ಯವಲ್ಲ ; ಎಲ್ಲಾ ಸಮಾಜದವರ ಭಾಗ್ಯವಾಗಿದೆ. ಸೂರ್ಯಕಾಂತ್ ಎಂದರೆ ಸೂರ್ಯನಂತೆ ಸಮಾಜಕ್ಕೆ ಪ್ರಕಾಶಮಾನವಾಗಲಿ. ನಾವೆಲ್ಲರೂ ಒಗ್ಗಟ್ಟಿನಿಂದ ಸಮಾಜವನ್ನು ಒಗ್ಗಟ್ಟು ಮಾಡುವಲ್ಲಿ ಶ್ರಮಿಸೋಣ ಎಂದು ಶುಭ ಹಾರೈಸಿದರು.

## ಸಾವಿರ ಸಂಖ್ಯೆಯಲ್ಲಿ ಸಮಾಜ ಬಾಂಧವರು ಸೇರಿಕೊಳ್ಳುವುದಕ್ಕೆ ನಾರಾಯಣ ಗುರುಗಳ ಮತ್ತು ಜಯ ಸುವರ್ಣರ ಆಶೀರ್ವಾದ ಕಾರಣ : ಡಾ.ಎಮ್ ಪ್ರವೀಣ್ ಭಟ್



ಮುಖ್ಯ ಅತಿಥಿ ಅಂತಾರಾಷ್ಟ್ರೀಯ ಜ್ಯೋತಿಷಿ ಡಾ. ಎಂ. ಜೆ. ಪ್ರವೀಣ್ ಭಟ್ ಮಾತನಾಡಿ, ಶ್ರೀ ನಾರಾಯಣ ಗುರುಗಳ ಆಶೀರ್ವಾದವಿದೆ , ಜಯ ಸುವರ್ಣರ ಆದರ್ಶ ಈ ಸಮಾಜಕ್ಕಿದೆ . ಆದ್ದರಿಂದ ಯುವಕರು ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿದ್ದಾರೆ. ಸೂರ್ಯಕಾಂತ್ ಜಯ ಸುವರ್ಣ ಅವರು ಇದನ್ನು ಸಮರ್ಥ ರೀತಿಯಲ್ಲಿ ಮುನ್ನಡೆಸಲಿ ಎಂದು ಶುಭ ಹಾರೈಸುತ್ತೇನೆ ಎಂದರು.



(ವರದಿ : ದಿನೇಶ್ ಕುಲಾಲ್ ,ಚಿತ್ರ : ಭಾಸ್ಕರ್‌ಕಾಂಚನ್)

ಮುಂಬಯಿ, ಅ.4- ಜಯ ಸಿ. ಸುವರ್ಣ ಅಭಿಮಾನಿಗಳು, ಮುಂಬೈ ಬಿಲ್ಲವರು ಹಾಗೂ ಶ್ರೀ ನಾರಾಯಣ ಗುರು ಭಜನಾ ಮಂಡಳಿ (ರಿ.) ಮುಂಬೈ ಇದರ ಜಂಟಿ ಆಶ್ರಯದಲ್ಲಿ ಜಯ ಸಿ. ಸುವರ್ಣ ಯುವ ಅಭಿಮಾನಿಗಳ ಅಧ್ಯಕ್ಷ ಗಣೇಶ್ ಡಿ. ಪೂಜಾರಿ ನೇತೃತ್ವದಲ್ಲಿ 'ವೈಬ್ ಫೆಸ್ಟ್ 2026' (ವಿವೈಬಿಇ ಫೆಸ್ಟ್ 2026- ವೈಬ್ರೆಂಟ್ ಯುವ ಆಫ್ ಬಿಲ್ಲವ ಫಾರ್ ಎಕ್ಸಲೆನ್ಸ್ ) ಈ ಬೃಹತ್ ಸಮಾವೇಶ ಮತ್ತು ಸಾಂಸ್ಕೃತಿಕ ವೈಭವವು ಅ. 2ರ ಶುಕ್ರವಾರದಂದು ಬೆಳಿಗ್ಗೆನಿಂದ ಸಂಜೆ ರವರೆಗೆ ಕುರ್ಲಾ (ಪೂರ್ವ) ದಲ್ಲಿರುವ ಬಂಟರ ಭವನದಲ್ಲಿ ನಡೆಯಿತು.

ಮಧ್ಯಾಹ್ನ ನಡೆದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮುಲ್ಕಿ ಮೂಡಬಿದ್ರಿ ಕ್ಷೇತ್ರದ ಶಾಸಕ ಉಮಾನಾಥ್ ಕೋಟ್ಯಾನ್ ಮಾತನಾಡುತ್ತಾ, ಜಯ ಸಿ. ಸುವರ್ಣರ ಆದರ್ಶ ಎಂಬ ಸಂಕಲ್ಪದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಏಕೆಂದರೆ ಜಯ ಸುವರ್ಣರು ಎಂದರೆ ಮೂಲ್ಕಿ, ಮೂಡುಬಿದಿರೆ, ಕುಡ್ಲ ಅಥವಾ ಉಡುಪಿಯಷ್ಟೇ ಅಲ್ಲ. ಮುಂಬಯಿಯಲ್ಲಂತೂ ಜಯ ಶೇಟ್ ಎಂದೇ ಪ್ರಸಿದ್ಧರಾದವರು. ಪ್ರತಿಯೊಬ್ಬರಿಗೂ ಜಯಣ್ಣ ಒಬ್ಬ ಶೇಟ್. ಮಹಾರಾಷ್ಟ್ರದಂತಹ ರಾಜ್ಯದಲ್ಲಿದ್ದು ಆ ಮಟ್ಟಕ್ಕೆ ಬೆಳೆಯುವುದು ಎಂದರೆ ಅದು ಸಾಮಾನ್ಯದ ಮಾತಲ್ಲ; ಅದಕ್ಕೆಲ್ಲ ಅವರ ಶ್ರಮ ಹಾಗೂ ಗೌರವವೇ ಕಾರಣ. ಎಷ್ಟೋ ಜನ ಉದ್ಯಮಿಗಳು ದೊಡ್ಡ ದೊಡ್ಡ ಮಟ್ಟಕ್ಕೆ ಬೆಳೆದಿದ್ದಾರೆ ಎಂದರೆ, ಅದಕ್ಕೆ ಭಾರತ್ ಬ್ಯಾಂಕ್ ಹಾಗೂ ಜಯ ಸುವರ್ಣರ ಬೆಂಬಲವೇ ಕಾರಣ. ಜಯ ಸಿ. ಸುವರ್ಣರು ಪ್ರತಿಯೊಬ್ಬರನ್ನೂ ಒಟ್ಟಿಗೆ ಕರೆದೊಯ್ಯುತ್ತಿದ್ದ ವ್ಯಕ್ತಿಯಾಗಿದ್ದರು. ಅವರ ದಾರಿಯಲ್ಲೇ ಸೂರ್ಯಕಾಂತ್ ಹಾಗೂ ಅವರ ತಂಡ ಸಾಗುತ್ತಿದೆ. ನನ್ನದೊಂದು ಮನವಿ ಏನೆಂದರೆ, ನಮ್ಮ ಬಂಟ್ಸ್ ಸಂಘವಾಗಲಿ, ಬಿಲ್ಲವ ಸಂಘವಾಗಲಿ ಅಥವಾ ಯಾವುದೇ ಸಂಘಟನೆಯಾಗಲಿ, ನಾವೆಲ್ಲರೂ ಹಿಂದೂಗಳು. ಆಯಾ ಸಮುದಾಯದ ಆರ್ಥಿಕ ಹಾಗೂ ಪ್ರತಿಭೆಗಳಿಗೆ ಸಹಕಾರ ನೀಡಿ, ಸಮಸ್ಯೆಗಳನ್ನು ಪರಿಹರಿಸಿ ಒಟ್ಟಾಗಿ ಬೆಳೆಯಲು ಸಂಘಟನೆಗಳು ಬೇಕು. ಮುಂಬೈನಲ್ಲಿದ್ದ ಜಯ ಸುವರ್ಣರು ತಮ್ಮ ಜೀವಮಾನವಿಡೀ ಎಲ್ಲರನ್ನೂ ಒಟ್ಟಿಗೆ ಕರೆದೊಯ್ದಿದ್ದಾರೆ. ಅವರ ಆದರ್ಶಗಳನ್ನು ಸೂರ್ಯಕಾಂತ್ ಮತ್ತು ಅವರ ತಂಡ ಮುನ್ನಡೆಸುತ್ತಿರುವುದು, ಎಲ್ಲರನ್ನೂ ಒಂದಾಗಿ ಕರೆದೊಯ್ಯುತ್ತಿರುವುದು ನಮಗೆಲ್ಲರಿಗೂ ತುಂಬಾ ಸಂತೋಷ ಹಾಗೂ ಖುಷಿಯ ವಿಷಯವಾಗಿದೆ. ಯಾರಾದರೂ ತಿಳಿಯದೇ ತಪ್ಪು ಮಾಡಿರಬಹುದು, ಜಯ ಸುವರ್ಣರು ಎಲ್ಲರನ್ನೂ ಕ್ಷಮಿಸಿ ಒಟ್ಟಿಗೆ ಕರೆದೊಯ್ಯುತ್ತಿದ್ದರು ಎಂಬುದು ನಮಗೆಲ್ಲರಿಗೂ ತಿಳಿದಿದೆ. ಆದ್ದರಿಂದ ಅವರ ಆದರ್ಶಗಳನ್ನು ಸೂರ್ಯಕಾಂತ್ ಮತ್ತು ಅವರ ತಂಡ ಸದಾ ಮುನ್ನಡೆಸಲಿ. ಸಣ್ಣಪುಟ್ಟ ತಪ್ಪುಗಳಿದ್ದರೆ ಮರೆತು, ಎಲ್ಲವನ್ನೂ ಸರಿಪಡಿಸಿಕೊಂಡು ಸಾಗಲಿ ಎಂದು ಹಾರೈಸುತ್ತೇನೆ ಎಂದರು.

ಕಾರ್ಯಕ್ರಮಕ್ಕೆ ಶುಭ ಆಶೀರ್ವಾದದ ನುಡಿಗಳನ್ನಾಡಿದ ಅಂತಾರಾಷ್ಟ್ರೀಯ ವಾಸ್ತು ತಜ್ಞ ಅಶೋಕ್ ಪುರೋಹಿತರು ಯುವ ಸಮುದಾಯ ಬೆಳೆಯಬೇಕೆನ್ನುವ ಉದ್ದೇಶದಿಂದ ರೂಪುಗೊಂಡಿರುವ ಈ ಕಾರ್ಯಕ್ರಮ ಭಜನೆಯ ಮೂಲಕ ಪ್ರಾರಂಭಗೊಂಡಿದ್ದು. ಜಯ ಸುವರ್ಣರಿಗೆ ಯುವ ಸಮಾಜ ಬೆಳೆಯಬೇಕೆಂಬ ಹಂಬಲವಿತ್ತು. ಇಂದು ನಡೆದ ಕಾರ್ಯಕ್ರಮ ಮತ್ತು ಜನಸಾಗರವನ್ನು ಕಂಡಾಗ ಜಯ ಸುವರ್ಣರಂತೆ ರಾಜಯೋಗದಲ್ಲಿರುವ ಸೂರ್ಯಕಾಂತ್ ಈ ಸಮಾಜವನ್ನು ಬಲಿಷ್ಠಗೊಳಿಸುವಂತಾಗಲಿ ಎಂದರು.

ದಿನಪೂರ್ತಿ ನಡೆದ ಕಾರ್ಯಕ್ರಮದಲ್ಲಿ ಸಾವಿರ ಸಂಖ್ಯೆಯಲ್ಲಿ ಸಮಾಜ ಬಾಂಧವರು. ಜಯ ಸುವರ್ಣರ ಯುವ ಅಭಿಮಾನಿಗಳು ಆಯೋಜಿಸಿರುವ ಕಾರ್ಯಕ್ರಮದಲ್ಲಿ ಬೆಳಿಗ್ಗೆನಿಂದಲೇ ಬಂಟರ ಭವನದಲ್ಲಿ ಸುಮಾರು 3 ಸಾವಿರಕ್ಕಿಂತಲೂ ಮಿಕ್ಕ ಸಮಾಜ ಬಾಂಧವರು ಬಹಳ ಉತ್ಸಾಹದಿಂದ ಪಾಲ್ಗೊಂಡು ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಕಾರ್ಯಕ್ರಮ ಅಚ್ಚುಕಟ್ಟಾಗುವಲ್ಲಿ ಜಯ ಸುವರ್ಣ ಸುವರ್ಣ ಸೇತು ತಂಡ ಸದಸ್ಯರು ಶ್ರಮಿಸಿದರು. ಮುಂಬೈಯ ಉಪನಗರದ ವಿವಿಧ ಭಾಗಗಳಿಂದ ಯುವ ಸಮುದಾಯದ ನೃತ್ಯ ಕಾರ್ಯಕ್ರಮಗಳು ಮಾನರಂಜಿಸಿದವು. ಹುಲಿ ವೇಷದ ನೃತ್ಯದ ಸಂದರ್ಭದಲ್ಲಿ ಸಮಾಜ ಬಾಂಧವರು ಸಡಗರದಿಂದ ನೃತ್ಯ ಮಾಡಿದರು.

ಚಾಂದಿವಲಿ ಕ್ಷೇತ್ರದ ಶಾಸಕರಾದ ದಿಲೀಪ್ ಬಿ. ಲಾಂಡೆ (ಮಾಮಾ) .ಉದ್ಯಮಿ ಮೇಘರಾಜ್ ಸೋಹನ್‌ಲಾಲ್ ಜೈನ್ .ಪುಣೆಯ ಉದ್ಯಮಿ ಸುಂದರ್‌ಪೂಜಾರಿ, ಏಷ್ಯಾಟಿಕ್ ಕ್ರೇನ್ ಸರ್ವೀಸಸ್ ನಿರ್ದೇಶಕರಾದ ಗಣೇಶ್ ಆರ್. ಪೂಜಾರಿ, ರಿಲಯನ್ಸ್ ಕ್ಯಾಂಪಾಕೋಲಾದ ಮಹಾರಾಷ್ಟ್ರ ಮತ್ತು ಗೋವಾ ಕಾರ್ಯಾಚರಣೆಯ ಮುಖ್ಯಸ್ಥರಾದ ರವಿಕಾಂತ್ ಅಮಿನ್, ಪವಾಯಿಯ ಉದ್ಯಮಿಗಳಾದ ಪ್ರದೀಪ್ ಪೂಜಾರಿ ಮತ್ತು ವೈಷ್ಣವಿ ಅಸಿಸ್ಟೆಂಟ್ ಸಿ ಎಮ್ ಡಿ ಮೋಹನ್ ಪೂಜಾರಿ, ಕ್ಯಾಪ್ಟನ್ ಸ್ವಿಚ್‌ಗೇರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಾಧ್ಯಕ್ಷರಾದ ಗೋಪಾಲ್ ಎಂ. ಪೂಜಾರಿ ಹಾಗೂ ಉದ್ಯಮಿ ಸೌಮ್ಯಾ ಸುಭಾಷ್ ಸುವರ್ಣ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಮುಂಬೈ ಬಂಟರ ಸಂಘದ ಮಾಜಿ ಅಧ್ಯಕ್ಷರಾದ ಡಾ. ಪಿ. ವಿ. ಶೆಟ್ಟಿ, ಕ್ರಿಕೆಟ್ ಆಟಗಾರ ಮಾಸ್ಟರ್‌ತನುಷ್ ಕೋಟ್ಯಾನ್ ಪರವಾಗಿ ಅವರ ಮಾತಾಪಿತರು, ಎಸ್‌ಸಿಡಿಸಿಸಿ ಬ್ಯಾಂಕ್ ಮಂಗಳೂರಿನ ನಿರ್ದೇಶಕರಾದ ಭಾಸ್ಕರ್‌ಎಸ್. ಕೋಟ್ಯಾನ್ ಕೊಳಕೆ ಇರ್ವತ್ತೂರು, ಕರ್ನಾಟಕ ಸರ್ಕಾರದ ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಂಜುನಾಥ ಪೂಜಾರಿ ಮುದ್ರಾಡಿ, ಆರ್‌ಬಿಐನ ಮಾಜಿ ಜನರಲ್ ಮ್ಯಾನೇಜರ್ ಹಾಗೂ ಭಾರತ್ ಬ್ಯಾಂಕ್‌ನ ನಿರ್ದೇಶಕರಾದ ಗೌರೇಶ್ ಕೋಟ್ಯಾನ್, ಬಿಲ್ಲವ ಬ್ರಿಗೇಡ್ (ರಿ.) ಸ್ಥಾಪಕರಾದ ಸದಾನಂದ ಎಸ್. ಪೂಜಾರಿ, ಬಿಎಮ್‌ಸಿ ಅಸೆಸ್‌ಮೆಂಟ್ ಡಿಪಾರ್ಟ್‌ಮೆಂಟ್ ಆ್ಯಂಡ್ ಸೂಪರಿಂಟೆಂಡೆಂಟ್ ಮೋಹನ್ ಪೂಜಾರಿ ಹಾಗೂ ಹಾಕಿ ಆಟಗಾರ ಸುರಾಜ್ ಕರ್ಕೇರ ಅವರ ಪರವಾಗಿ ಮಾತಾಪಿತರನ್ನು ಸನ್ಮಾನಿಸಲಾಯಿತು. ಹಾಗೂ ಇದರೊಂದಿಗೆ ಎಸ್‌ಎಸ್‌ಸಿ ಬೋರ್ಡ್ ಪರೀಕ್ಷೆಯಲ್ಲಿ ಶೇಕಡಾ 99.20 ಅಂಕಗಳನ್ನು ಗಳಿಸಿದ ಮೀರಾರೋಡ್‌ನ ಹೋಲಿ ಕ್ರಾಸ್ ಕಾನ್ವೆಂಟ್ ಶಾಲೆಯ ಟಾಪರ್ ಹಾಗೂ ಮಹಾರಾಷ್ಟ್ರ ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದ ರಕ್ಷಾ ಜೆ. ಕುಳಾಯಿ ಅವರನ್ನು ಸಹ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ 'ಅಚೀವರ್ಸ್ ಅವಾರ್ಡ' ಅಡಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಶೇಷವಾಗಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಭಾರತ್ ಬ್ಯಾಂಕ್‌ನ ಉಪ ಕಾರ್ಯಾಧ್ಯಕ್ಷ ಸೋಮನಾಥ್ ಅಮೀನ್, ಕಾರ್ಯದರ್ಶಿ ಗಣೇಶ್ ಎಸ್. ಪೂಜಾರಿ, ಜಯ ಸಿ. ಸುವರ್ಣ ಅಭಿಮಾನಿಗಳ ಗೌರವ ಕಾರ್ಯದರ್ಶಿ ಮೋಹನ್‌ದಾಸ್ ಜಿ. ಪೂಜಾರಿ, ಗೌರವ ಕೋಶಾಧಿಕಾರಿ ಶಿವರಾಮ ಎಸ್. ಪೂಜಾರಿ, ಶ್ರೀ ನಾರಾಯಣ ಗುರು ಭಜನಾ ಮಂಡಳಿ ಮುಂಬೈ ಅಧ್ಯಕ್ಷ ಅಶೋಕ್ ಕುಕ್ಯಾನ್ ಸಸಿಹಿತ್ಲು, ಗೌರವ ಪ್ರಧಾನ ಕಾರ್ಯದರ್ಶಿ ಕೇಶವ್ ಎಸ್. ಪೂಜಾರಿ ಹಾಗೂ ಗೌರವ ಪ್ರಧಾನ ಕೋಶಾಧಿಕಾರಿ ಸಬಿತಾ ಜಿ. ಪೂಜಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಪತ್ರಕರ್ತ ಹರೀಶ್ ಹೆಜಮಾಡಿ ನಿರೂಪಿಸಿದರು. ಸನ್ಮಾನಿತರ ಪರಿಚಯವನ್ನು ಧನಂಜಯ ಶಾಂತಿ, ಭಾಸ್ಕರ್ ಸುವರ್ಣ, ಸದಾಶಿವ ಕರ್ಕೇರ , ಶಶಿಧರ್‌ಬಂಗೇರ ಪರಿಚಯಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮವನ್ನು ಚಿನ್ಮಯ್ ಸಾಲ್ಯಾನ್ , ಅನುಷಾ ವಿನೋದ ಕರ್ಕೇರ, ಸಚಿನ್ ಪೂಜಾರಿ ಭಿವಂಡಿ, ಲತೇಶ್ ಪೂಜಾರಿ ನಿರೂಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಸಮಾಜ ಬಾಂಧವರಿಗೆ ಬೆಳಗಿನ ಉಪಾಹಾರ ಮಧ್ಯಾಹ್ನದ ಪ್ರೀತಿ ಭೋಜನ , ಸಂಜೆ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.


ಶಾಸಕರಾದ ದಿಲೀಪ್ ಬಿ. ಲಾಂಡೆ ಅವರನ್ನು ಸನ್ಮಾನಿಸಿದಾಗ


ಸೌಮ್ಯಾ ಸುಭಾಷ್ ಸುವರ್ಣ ಅವರನ್ನು ಗೌರವಿಸಿದಾಗ


ರವಿಕಾಂತ್ ಅಮಿನ್ ಅವರನ್ನು ಗೌರವಿಸಿದಾಗ


ಪ್ರದೀಪ್ ಪೂಜಾರಿ ಅವರನ್ನು ಗೌರವಿಸಿದಾಗ


ಗಣೇಶ್ ಆರ್. ಪೂಜಾರಿ ಅವರನ್ನು ಗೌರವಿಸಿದಾಗ


ಮೋಹನ್ ಪೂಜಾರಿ ಅವರನ್ನು ಗೌರವಿಸಿದಾಗ

# ವಿಧಾನಪರಿಷತ್ ಚುನಾವಣೆ: ಬಿಜೆಪಿಯಿಂದ 3 ಸ್ಥಾನಗಳಿಗೆ ಅಭ್ಯರ್ಥಿಗಳ ಘೋಷಣೆ

ಮುಂಬಯಿ,ಅ.4 - ಮಹಾರಾಷ್ಟ್ರದಲ್ಲಿ ನಡೆಯಲಿರುವ ವಿಧಾನ ಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಗಾಗಿ ಮೂರು ಸ್ಥಾನಗಳಿಗೆ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ.ಪಕ್ಷವು ಅ.4 ರಂದು ಮೂವರ ಹೆಸರುಗಳನ್ನು ಅನುಮೋದಿಸಿದ್ದು,ಪುಣೆಯ ಪದವೀಧರ ಕ್ಷೇತ್ರಕ್ಕೆ ಬಿಜೆಪಿ ಡಾ. ಸ್ಮಿತಾ ಯೋಗೇಶ್ ಜಾಧವ್ ಮತ್ತು ಪುಣೆ ಶಿಕ್ಷಕರ ಕ್ಷೇತ್ರದಿಂದ ಕೌಸ್ತುಕ್ ಮುರಳೀಧರ್ ಗಾವ್ಡೆ ಅವರನ್ನು ಕಣಕ್ಕಿಳಿಸಲಾಗಿದೆ.

ನಾಗ್ಪುರ ಪದವೀಧರ ಕ್ಷೇತ್ರದಿಂದ ಸುಧಾಕರ್ ವಿಠ್ಠಲರಾವ್ ಕೊಹಲೆ ಅವರನ್ನು ಕಣಕ್ಕಿಳಿಸಲಾಗಿದೆ. ಇತರ ರಾಜಕೀಯ ಪಕ್ಷಗಳು ಕೂಡ ಈ ಕ್ಷೇತ್ರಕ್ಕಾಗಿ ಅಭ್ಯರ್ಥಿಗಳನ್ನು ಹುಡುಕುತ್ತಿವೆ. ಪುಣೆ ಶಿಕ್ಷಕರ ಕ್ಷೇತ್ರದ ಬಗ್ಗೆ ಮಹಾಯುತಿಯಲ್ಲಿ ದೀರ್ಘ ಚರ್ಚೆ ನಡೆಯಿತು. ಅದಾದ ಬಳಿಕ ಪುಣೆ ಶಿಕ್ಷಕರ ಕ್ಷೇತ್ರದ ಸ್ಥಾನವೂ ಬಿಜೆಪಿ ಪಾಲಾಯಿತು. ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯ ಅನುಮೋದನೆಯ ಬಳಿಕ ಮೂವರು ಅಭ್ಯರ್ಥಿಗಳ ಹೆಸರುಗಳ ಪಟ್ಟಿಯನ್ನು ಘೋಷಿಸಲಾಯಿತು.

ಈ ಚುನಾವಣೆಗೆ ಅರ್ಜಿ ಸಲ್ಲಿಸಲು ಅ.6.ಕೊನೆಯ ದಿನವಾಗಿದ್ದು, ಅರ್ಜಿಯನ್ನು ಅ.7 ರಂದು ಪರಿಶೀಲಿಸಲಾಗುತ್ತದೆ. ಅದಾದ ಬಳಿಕ ಅರ್ಜಿಯನ್ನು ಹಿಂಪಡೆಯಲು ಅ.9 ಕೊನೆಯ ದಿನಾಂಕವಾಗಿದೆ. ಅ. 23 ರಂದು ಮತದಾನ ನಡೆಯಲಿದೆ. ಅದರ ಬಳಿಕ ಮತ ಎಣಿಕೆ ಅ.27 ರಂದು ನಡೆಯಲಿದೆ. ಕೇಂದ್ರ ಚುನಾವಣಾ ಆಯೋಗದ ಆದೇಶದ ಪ್ರಕಾರ, ವಿಧಾನ ಪರಿಷತ್ತಿನ ಚುನಾವಣೆಯನ್ನು ಅ.31 ರ ಮೊದಲು ನಡೆಸಬೇಕಾಗುತ್ತದೆ. ಇದಕ್ಕೂ ಮೊದಲು, ಶಿಂಧೆ ಗುಂಪಿನ ಮಂಗೇಶ್ ಚಿವ್ಟೆ ಕೂಡ ಪುಣೆ ಶಿಕ್ಷಕರ ಕ್ಷೇತ್ರಕ್ಕೆ ಸ್ಪರ್ಧಿಸಲು ಪ್ರಯತ್ನಿಸಿದ್ದರು. ಆದರೆ ಈ ಸ್ಥಾನ ಬಿಜೆಪಿಗೆ ಹೋಯಿತು. ಮಹಾಯುತಿಯ ದೇವೇಂದ್ರ ಫಡ್ನವೀಸ್, ಏಕನಾಥ್ ಶಿಂದೆ ಮತ್ತು ಸುನೇತ್ರಾ ಪವಾರ್‌ತಮ್ಮ ಉಮೇದುವಾರಿಕೆಯನ್ನು ದೃಢಪಡಿಸುತ್ತಾರೆ ಎಂದು ಅವರು ವಿಶ್ವಾಸ ಹೊಂದಿದ್ದರು. ಆದರೆ ಕೊನೆಯ ಕ್ಷಣದಲ್ಲಿ, ಕೌಸ್ತುಭ್ ಗಾವ್ಡೆ ಮಹಾಯುತಿಯಿಂದ ನಾಮನಿರ್ದೇಶನ ಪಡೆದರು.

# ಚುನಾವಣೆ ಬಹಿಷ್ಕಾರ ಕುರಿತ ರಾಜ್‌ಠಾಕ್ರೆ ಕರೆಗೆ ಪೃಥ್ವಿರಾಜ್ ಚವಾಣ್ ವಿರೋಧ

ಮುಂಬಯಿ,ಅ.4 - ಮಹಾರಾಷ್ಟ್ರ ನವನಿರ್ಮಾಣ ಸೇನೆ (ಮನಸೇ) ಮುಖ್ಯಸ್ಥ ರಾಜ್‌ಠಾಕ್ರೆ ಅವರ ಚುನಾವಣೆ ಬಹಿಷ್ಕಾರದ ಹೇಳಿಕೆಯನ್ನು ವಿರೋಧಿಸಿದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ಪೃಥ್ವಿರಾಜ್ ಚವಾಣ್ ಅವರು,ಚುನಾವಣೆಯಲ್ಲಿ ಭಾಗವಹಿಸುವುದು ಪ್ರಜಾಪ್ರಭುತ್ವದ ಹಕ್ಕು ಎಂದು ಪ್ರತಿಪಾದಿಸಿದರು. 'ನಾವು ಚುನಾವಣೆಯನ್ನು ಬಹಿಷ್ಕರಿಸಬೇಕು ಎಂಬುದನ್ನು ನಾನು ಒಪ್ಪುವುದಿಲ್ಲ. ಪ್ರಜಾಪ್ರಭುತ್ವದ ಸರಕಾರವನ್ನು ಹೊಂದುವುದು ನಮ್ಮ ಹಕ್ಕು; ಅದು ಸರಿಯಾದ ತಂತ್ರವಲ್ಲ' ಎಂದು ಚವಾಣ್ ಹೇಳಿದರು.

2024ರ ಚುನಾವಣೆಯ ಸಂದರ್ಭದ ತಮ್ಮ ಅನುಭವವನ್ನು ನೆನಪಿಸಿಕೊಂಡ ಚವಾಣ್, ಮತದಾರರ ಪಟ್ಟಿಯಲ್ಲಿ ನಕಲಿ ಮತದಾರರನ್ನು ಸೇರಿಸಲಾಗಿದೆ ಮತ್ತು ಒಂದೇ ವ್ಯಕ್ತಿ ಹಲವು ಬಾರಿ ಮತ ಚಲಾಯಿಸಿದ್ದಾರೆ ಎಂಬ ಆರೋಪಗಳ ಕುರಿತು ತಾವು ಆಗ ಪ್ರತಿಭಟಿಸಿದ್ದಾಗಿ ತಿಳಿಸಿದರು. '2024ರಲ್ಲಿ ನನ್ನ ಚುನಾವಣೆ ನಡೆದಾಗ, ನಕಲಿ ಮತದಾರರನ್ನು ಸೇರಿಸಲಾಗಿದೆ ಮತ್ತು ಅವರು ಹಲವು ಬಾರಿ ಮತ ಚಲಾಯಿಸಿದ್ದಾರೆ ಎಂದು ನಾನು ಪ್ರತಿಭಟಿಸಿದ್ದೆ' ಎಂದು ಅವರು ಹೇಳಿದರು.

ಕೆಲವು ಕಡೆಗಳಲ್ಲಿ ಅಲ್ಪಸಂಖ್ಯಾತ ಮತದಾರರು ಮತ್ತು ಬಡವರು ತಮ್ಮ ಮತದಾನದ ಹಕ್ಕಿನಿಂದ ವಂಚಿತರಾಗಿದ್ದಾರೆ ಮತ್ತು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವವರ ಮೇಲೂ ಇದರ ಪರಿಣಾಮ ಬೀರಿದೆ ಎಂದು ಚವಾಣ್ ಆರೋಪಿಸಿದರು.

ಕೆಲವು ಕಡೆಗಳಲ್ಲಿ ಅಲ್ಪಸಂಖ್ಯಾತ ಮತದಾರರು ಮತ್ತು ಬಡವರು ಮತದಾನದ ಹಕ್ಕಿನಿಂದ ವಂಚಿತರಾದರು.ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವವರ ವಿಷಯದಲ್ಲೂ ಹೀಗಾಯಿತು ಎಂದು ಅವರು ಹೇಳಿದರು. ಇದು ಕೇವಲ 'ಮತ ಕಳ್ಳತನ'ವಲ್ಲ, ಇದು 'ಚುನಾವಣೆ ಕಳ್ಳತನ' ಎಂದು ಚವಾಣ್ ಆರೋಪಿಸಿದರು.

ಸಿಇಸಿ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಮನಸೇ ಅಧ್ಯಕ್ಷ ರಾಜ್‌ಠಾಕ್ರೆ ಅವರಿಂದು ಬಿಎಂಸಿ ಪ್ರಧಾನ ಕಚೇರಿಯತ್ತ ಜಂಟಿ ಪ್ರತಿಭಟನಾ ಮೋರ್ಚಾ ನಡೆಸಿದರು. ವಿರೋಧ ಪಕ್ಷಗಳು ಕುಮಾರ್ ರಾಜೀನಾಮೆಗೆ ಆಗ್ರಹಿಸುತ್ತಿದ್ದರೆ, ಮಹಾರಾಷ್ಟ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ರಾಜ್ ಠಾಕ್ರೆ ಆಗ್ರಹಿಸಿದರಲ್ಲದೆ,ಮಹಾರಾಷ್ಟ್ರದಲ್ಲಿ ನಡೆಸಲಾದ ಸಂಪೂರ್ಣ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ ಎಂದರು.

# ಚಿನ್ನದ ಸಹಿತ 4 ಆರೋಪಿಗಳ ಬಂಧನ

ಮೊದಲ ಪುಟದಿಂದ

ಸ್ಥಳೀಯ ಕ್ರೈಂ ಬ್ರ್ಯಾಂಚ್ ಮತ್ತು ವಿರಾಮ ಗ್ರಾಮ ಪಟ್ಟಣ ಪೊಲೀಸರು ಲಾರಿಯೊಂದನ್ನು ರಸ್ತೆಗೆ ಅಡ್ಡ ನಿಲ್ಲಿಸಿ ನಂಬರ್ ಪ್ಲೇಟ್ ಇಲ್ಲದ ವಾಹವನ್ನು ತಡೆದು ನಿಲ್ಲಿಸಿ ಅದರಲ್ಲಿದ್ದ ಒಬ್ಬನನ್ನು ಬಂಧಿಸಿದ್ದರು ಎಂದು ಅಧಿಕಾರಿ ಹೇಳಿದ್ದಾರೆ.

ಆತನ ತನಿಖೆ ನಡೆಸಿದಾಗ ಆತ ಇತರ ಮೂವರು ದರೋಡೆಕೋರರು ಕದ್ದ ಚಿನ್ನದ ಜತೆಯಲ್ಲಿ ತನ್ನ ಮುಂದಿದ್ದ ಕಾರಲ್ಲಿ ತೆರಳಿದ್ದಾರೆ ಎಂದು ಒಪ್ಪಿಕೊಂಡ ಎಂದು ಅಧಿಕಾರಿ ಹೇಳಿದ್ದಾರೆ. ಪೊಲೀಸ್ ತಂಡವು ಆ ಕಾರನ್ನು ಪೊಲೀಸ್ ನಿರೀಕ್ಷಕರುಗಳಾದ ಎಸ್. ಎ.ಗಡ್ಡ ಮತ್ತು ಪರೇಶ್ ಜಾನಿ ನೇತೃತ್ವದ ಪೊಲೀಸ್ ತಂಡವು ವಿರಾಮ ಗ್ರಾಮ ಬಳಿಯಲ್ಲಿ ಕಾರನ್ನು ಪತ್ತೆ ಹಚ್ಚಿ ಅದರಲ್ಲಿದ್ದ ಮೂವರನ್ನು ಬಂಧಿಸಲು ಯಶಸ್ವಿಯಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಪೊಲೀಸ್ ವಾಹನವನ್ನು ಗಮನಿಸಿದ ದರೋಡೆಕೋರರು ಗಡ್ಡ ಇದ್ದ ಪೊಲೀಸ್ ವಾಹನಕ್ಕೆ ಅವರ ಕಾರನ್ನು ಡಿಕ್ಕಿ ಹೊಡೆಸಿ ಕಾರನ್ನು ಹಿಂದಕ್ಕೆ ತಿರುಗಿಸಿ ಪರಾರಿಯಾಗಲು ಯತ್ನಿಸಿದ್ದರು. ಆದರೆ, ಅತ್ಯಂತ ಸಾಹಸ ಮೆರೆದ ಗಡ್ಡ ದರೋಡೆಕೋರರ ಕಾರಿನ ಬಾಗಿಲನ್ನು ಹಿಡಿದುಕೊಂಡು ಸುಮಾರು 500 ಮೀಟರ್ ದೂರದ ತನಕ ಬಾಗಿಲನ್ನೇ ಹಿಡಿದುಕೊಂಡು ಒಳಗೆ ಹೋಗಲು ಯಶಸ್ವಿಯಾಗಿದ್ದರು. ಹ್ಯಾಂಡ್ ಬ್ರೇಕ್ ಎಳೆದು ಕಾರನ್ನು ನಿಲ್ಲಿಸಿದ್ದರು ಎಂದು ಪೊಲೀಸರ ಹೇಳಿಕೆ ತಿಳಿಸಿದೆ.

ದರೋಡೆಕೋರರನ್ನು ಬೆನ್ನಟ್ಟಿದ್ದ ಇತರ ಪೊಲೀಸರು ತಕ್ಷಣವೇ ಕಾರನ್ನು ಸುತ್ತುವರಿದು ದರೋಡೆಕೋರರನ್ನು ಬಂಧಿಸಿದರು. ಕಾರಿನಿಂದ ಇಳಿದ ಒಬ್ಬ ತಪ್ಪಿಸಿಕೊಳ್ಳಲು ಹತ್ತಿರದ ಹೊಲಗಳತ್ತ ಓಡಿದಾಗ ಪೊಲೀಸರು ಆತನನ್ನು ಬೆನ್ನಟ್ಟಿ ಬಂಧಿಸಿದ್ದಾರೆಂದು ಅಧಿಕಾರಿ ತಿಳಿಸಿದ್ದಾರೆ.

ದರೋಡೆಕೋರರ ಕಾರಿನ ಸೀಟಿನ ಅಡಿಯಲ್ಲಿ 2.90 ಕೆ.ಜಿ. ಚಿನ್ನ ಸಿಕ್ಕಿದ್ದು, ಅದರ ಒಟ್ಟು ಮೌಲ್ಯ ಅಂದಾಜು 4 ಕೋಟಿ ರೂ. ಎಂದು ಅಧಿಕಾರಿ ಹೇಳಿದ್ದು, ದರೋಡೆಕೋರರ ಎರಡೂ ವಾಹನಗಳನ್ನು ವಶಪಡಿಸಿಕೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಚಿನ್ನ ದರೋಡೆಕೋರರನ್ನು ಭಾರೀ ಕಾರ್ಯಾಚರಣೆಯಲ್ಲಿ ಬಂಧಿಸಿರುವ ಅಹ್ಮದಾಬಾದ್ ಗ್ರಾಮೀಣ ಪೊಲೀಸರನ್ನು ಮತ್ತು ಪರಿಶ್ರಮಿಸಿ ಸಾಹಸ ತೋರಿದ್ದ ಪೊಲೀಸರನ್ನು ಗುಜರಾತ್ ಉಪಮುಖ್ಯಮಂತ್ರಿ ಹರ್ಷ್ ಸಂಘವಿ ಅಭಿನಂದಿಸಿದ್ದಾರೆ. ತಂಡಗಳಿಗೆ ಸೂಕ್ತ ಬಹುಮಾನ ನೀಡುವುದಾಗಿ ಅವರು ಹೇಳಿದ್ದಾರೆ.

# ಕವಿ, ಸಾಹಿತಿ, ಪ್ರಾಧ್ಯಾಪಕ ಡಾ. ಜೀವಿ ಕುಲಕರ್ಣಿ ನಿಧನ



ಮುಂಬಯಿ, ಅ. 4- ಡಾ. ಗುರುನಾಥ ವಿಠಲರಾವ್ ಕುಲಕರ್ಣಿ (ಡಾ. ಜೀವಿ ಕುಲಕರ್ಣಿ) ಅಲ್ಪಕಾಲದ ಅನಾರೋಗ್ಯದಿಂದ ಅಕ್ಟೋಬರ್ 4ರ ಆದಿತ್ಯವಾರದಂದು ದಹಿಸರ್‌ನಲ್ಲಿರುವ ತಮ್ಮ ನಿವಾಸದಲ್ಲಿ 91ನೇ ವಯಸ್ಸಿನಲ್ಲಿ ನಿಧನರಾದರು.

ಡಾ. ಜಿ. ವಿ. ಕುಲಕರ್ಣಿ ಮೂಲತಃ ವಿಜಯಪುರ ಜಿಲ್ಲೆಯ ಡೊಮನಾಳ ಗ್ರಾಮದವರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಕುಲಕರ್ಣಿಯವರಿಗೆ ಶಾಲಾ-ಕಾಲೇಜಿನ ದಿನಗಳಂದಲೇ 'ಮೆರಿಟ್ ಸ್ಕಾಲರ್‌ಶಿಪ್' ಬರುತ್ತಿತ್ತು. ಮುಂದೆ ಸ್ನಾತಕೋತ್ತರದಲ್ಲೂ 'ಫೆಲೋಶಿಪ್' ದೊರೆಯಿತು. ಧಾರವಾಡದಿಂದ ಕನ್ನಡ ಹಾಗೂ ಸಂಸ್ಕೃತ ಬಿ.ಎ. ಪದವಿ ಗಳಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ., ಎಲ್.ಎಲ್.ಬಿ ಪದವಿಗಳನ್ನೂ ಮುಗಿಸಿ ನೇರವಾಗಿ ಮುಂಬಯಿಗೆ ಆಗಮಿಸಿದರು. ಮುಂಬಯಿ ವಿಶ್ವವಿದ್ಯಾಲಯದಿಂದ ಆಂಗ್ಲ ಭಾಷೆಯಲ್ಲಿ ಎಂ.ಎ., ಪಿ.ಎಚ್.ಡಿ ಗಳಿಸಿದರು. ಶಾಲ್ಡಾ ಮತ್ತು ದಹಾಣುಕರ್ ಚಿನಾಯ್ ಕಾಲೇಜುಗಳಲ್ಲಿ ಕನ್ನಡ-ಇಂಗ್ಲಿಷ್ ಪ್ರಾಧ್ಯಾಪಕರಾಗಿ ದುಡಿದು, 1997ರಲ್ಲಿ ಸೇವಾನಿವೃತ್ತರಾದರು.

ಮುಂಬಯಿ ಪ್ರತಿಷ್ಠೆಯಲ್ಲಿ ಅವರು ಪ್ರತಿಷ್ಠಿತವಾದ ಹಾಗೂ ಜಾಣರಾಗಿ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು. ಅನೇಕ ಪ್ರಸಿದ್ಧ ಪ್ರಕಾಶನ ಸಂಸ್ಥೆಗಳ ಅನುವಾದಕರಾಗಿಯೂ ಕಾರ್ಯ ನಿರ್ವಹಿಸಿದ್ದರು. 'ಕರ್ನಾಟಕ ಮಲ್ಲ' ದಿನಪತ್ರಿಕೆಯ 'ವಿಚಾರ ವರ್ಗ'ದಲ್ಲಿ 'ಜೀವನ ಮತ್ತು ಸಾಹಿತ್ಯ ಅಂಕಣ'ದಲ್ಲಿ ಸಾಹಿತ್ಯದ ಬಗ್ಗೆ ಮತ್ತು ಮುಂಬಯಿ ನಗರಕ್ಕೆ ಹೊಂದಿಕೊಂಡ ಹಲವಾರು ವಿಷಯಗಳನ್ನು ಅದರಲ್ಲಿ ದಾಖಲಿಸಿದ್ದಾರೆ.

ಮೂಲತಃ ಕವಿಯಾಗಿ ಗುರುತಿಸಿಕೊಂಡಿದ್ದ ಅವರು ಹಲವು ಪುಸ್ತಕಗಳನ್ನು ಹೊರ ತಂದಿದ್ದರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದ. ರಾ. ಬೇಂದ್ರೆ ಅವರ ಶಿಷ್ಯರಾಗಿದ್ದರು. ಅಮೆರಿಕದ ಹ್ಯೂಸ್ಟನ್ ನಗರದಲ್ಲಿ ಜರುಗಿದ ಪ್ರಥಮ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದ್ದರು. 'ಚಿಂತೆಯಿಲ್ಲದೆ ಬದುಕಲು ಕಲಿಯಿರಿ', 'ಯೋಗ ಶಿಖರ' ಎಂಬ ಪುಸ್ತಕಗಳು ಅನ್ಯ ಭಾಷೆಗಳಲ್ಲಿ ಅನುವಾದ ಕಂಡಿವೆ. ಶ್ರೀಶ್ರೀ ಪಂಡಿತಾಚಾರ್ಯರ ನಿತ್ಯ ಪಾರಾಯಣ ಸ್ತೋತ್ರಗಳಾದ 'ಶ್ರೀ ನೃಸಿಂಹ ಸ್ತುತಿ', 'ಶ್ರೀ ವಾಯು ಸ್ತುತಿ'ಗಳನ್ನು ಸಂಸ್ಕೃತದಿಂದ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಿಗೆ ತರ್ಜುಮೆ ಮಾಡಿದ್ದಾರೆ.

ಅವರು ಪತ್ನಿ ಕಲಾದೇವಿ, ಪುತ್ರರಾದ ರಾಘವೇಂದ್ರ, ಮತ್ತು ಹರ್ಷವರ್ಧನ ಸೊಸೆಯಂದಿರ ಅನಿತಾ, ರಶ್ಮಿ, ಪುತ್ರಿ ವೀಣಾ, ಅಳಿಯ ಸುಬೋಧ್ ಹಾಗೂ ಮೊಮ್ಮಕ್ಕಳಾದ ದರ್ಶನ, ಋತುಜಾ, ಅಕ್ಷರಾ, ವಿವೇಕ್, ಮೈತ್ರೇಯಿ ಮತ್ತು ಅಗಸ್ತ್ಯ ಸಹಿತ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಅವರ ನಿಧನಕ್ಕೆ 'ಕರ್ನಾಟಕ ಮಲ್ಲ' ಪತ್ರಿಕೆಯು ಶೋಕ ವ್ಯಕ್ತಪಡಿಸಿದೆ.

# ಪ್ರಚಾರಕ್ಕಾಗಿ ಟಿ-ಶರ್ಟ್ ಧರಿಸಿ ಹವಾ ಸೃಷ್ಟಿಸುವ ಮೋರ್ಚಾ; ಠಾಕ್ರೆ ಸಹೋದರರ ಮೋರ್ಚಾಕ್ಕೆ ಸಚಿವ ಶಿರ್ಸಾಟ್ ಟೀಕೆ

ಮುಂಬಯಿ,ಅ.4 - ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸಿ ಠಾಕ್ರೆ ಸಹೋದರರು ನಡೆಸಿದ 'ಗರ್ಜನಾ' ಮೋರ್ಚಾವನ್ನು ಟೀಕಿಸಿದ ಶಿವಸೇನೆ ಸಚಿವ ಸಂಜಯ್ ಶಿರ್ಸಾಟ್ ಅವರು,ಇದು ಪ್ರಚಾರಕ್ಕಾಗಿ ಟಿ-ಶರ್ಟ್ ಧರಿಸಿ ಹವಾ ಸೃಷ್ಟಿಸುವ ಮೋರ್ಚಾ ಎಂದು ಲೇವಡಿ ಮಾಡಿದರು.

ಮನಸೇ ಮುಖ್ಯಸ್ಥ ರಾಜ್‌ಠಾಕ್ರೆ ಮತ್ತು ಶಿವಸೇನಾ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ ಅವರ ನೇತೃತ್ವದಲ್ಲಿ ಮುಂಬಯಿನಲ್ಲಿ ಇಂದು ಬೃಹತ್ ಜನಮೋರ್ಚಾ ನಡೆಯಿತು.

'ಮುಂಬಯಿನಲ್ಲಿ ಈ ಮೋರ್ಚಾಕ್ಕಿಂತ ಇಬ್ಬರು ಸಹೋದರರು ಒಟ್ಟಿಗೆ ಸೇರುವ ಬಗ್ಗೆ ಹೆಚ್ಚು ಚರ್ಚೆ ನಡೆಯುತ್ತಿದೆ, ಟಿ-ಶರ್ಟ್ ಧರಿಸಿ ಪ್ರಚಾರ ಸೃಷ್ಟಿಸುವುದು ಈ ಮೋರ್ಚಾದ ಉದ್ದೇಶ' ಎಂದು ಹೇಳುವ ಮೂಲಕ ಶಿರ್ಸಾಟ್ ಠಾಕ್ರೆ ಸಹೋದರರನ್ನು ಅಣಕಿಸಿದರು.

'ಜ್ಞಾನೇಶ್ ಕುಮಾರ್ ವಿರುದ್ಧ ಮೋರ್ಚಾ ಎಂದು ಹೇಳಲಾಗುತ್ತದೆ.ಯಾವುದೇ ಪಕ್ಷವು ಅವರೊಂದಿಗೆ ಸಹಕರಿಸಿದೆಯೇ?.ಸರಿ, ಉದ್ಧವ್ ಅಥವಾ ರಾಜ್ ಇವರಲ್ಲಿ ಯಾರ ನಾಯಕತ್ವದಲ್ಲಿ ಈ ಮೋರ್ಚಾ ನಡೆದಿದೆ ಹೇಳಿ?' ಎಂದು ಸಚಿವರು ಮಾಧ್ಯಮದ ಬಳಿ ಕೇಳಿದರು.

ಠಾಕ್ರೆ ಸಹೋದರರ ಗರ್ಜನಾ ಮೋರ್ಚಾವನ್ನು ಅಪಹಾಸ್ಯ ಮಾಡಿದ ಅವರು, ಇದು ಪ್ರಚಾರದ ಸಾಹಸ.ಈ ಮೋರ್ಚಾ ಪ್ರಚಾರಕ್ಕಾಗಿ ಟಿ-ಶರ್ಟ್ ಧರಿಸಿ ಪ್ರದರ್ಶಿಸುವ ಮೋರ್ಚಾ. ಇದು ಅರ್ಧ ಕಿಲೋಮೀಟರ್ ಓಡಿ ಯಶಸ್ವಿಯಾಗಿದೆ ಎಂದು ತೋರುತ್ತದೆ. ಜ್ಞಾನೇಶ್ ಕುಮಾರ್ ವಿರುದ್ಧ ಮೋರ್ಚಾ ಎಂದು ಹೇಳುವ ಮೂಲಕ ಯಾವುದೇ ಪಕ್ಷ ಇವರಿಗೆ ಸಹಕರಿಸಿಲ್ಲ ಎಂದು ಅವರು ಹೇಳಿದರು.

'ಇದು ಒಂದು ಕಾರ್ಯಕ್ರಮ, ಇದಕ್ಕೆ ಹೆಚ್ಚಿನ ಪ್ರತಿಕ್ರಿಯೆ ಸಿಗುವುದಿಲ್ಲ. ಇದು ಟಿ-ಶರ್ಟ್‌ಗಳನ್ನು ವಿತರಿಸಲು ನಡೆದ ಮೋರ್ಚಾ. ಕೈ ಹಿಡಿದು ಫೋಟೋ ತೆಗೆದುಕೊಳ್ಳಲು ಈ ಮೋರ್ಚಾ. ಶರದ್ ಪವಾರ್ ಅಥವಾ ಬೇರೆಯವರ ಬೆಂಬಲ ಇವರಿಗೆ ಸಿಕ್ಕಿದೆಯೇ.ಅವರ ಜನರು ಯಾರಾದರೂ ಮೋರ್ಚಾಕ್ಕೆ ಹೋಗಿದ್ದಾರೆಯೇ?'ಎಂದು ಸಚಿವರು ಠಾಕ್ರೆ ಸಹೋದರರನ್ನು ಉದ್ದೇಶಿಸಿ ತಿಳಿಸಿದರು.

# ಉದ್ಧವ್ ಭವಿಷ್ಯದ ಪ್ರಧಾನಿ, ರಾಜ್‌ಠಾಕ್ರೆ ಭವಿಷ್ಯದ ಮುಖ್ಯಮಂತ್ರಿ; ಮೋರ್ಚಾದಲ್ಲಿ ಗಮನಸೆಳೆದ ಪೋಸ್ಟರ್

ಮುಂಬಯಿ,ಅ.4 - ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಠಾಕ್ರೆ ಸಹೋದರರ ಜನಮೋರ್ಚಾ ಮೆಟ್ರೋ ಸಿನಿಮಾದಿಂದ ಬಿಎಂಸಿ ಕೇಂದ್ರ ಕಚೇರಿ ವರೆಗೆ ನಡೆಯಿತು.ಕಾಂಗ್ರೆಸ್ ಮತ್ತು ಎನ್‌ಸಿಪಿ (ಎಸ್‌ಪಿ) ಪಕ್ಷಗಳು ಈ ಮೋರ್ಚಾವನ್ನು ಸಾರ್ವಜನಿಕವಾಗಿ ಬೆಂಬಲಿಸಿವೆ.ಎನ್‌ಸಿಪಿ (ಎಸ್‌ಪಿ) ನಾಯಕ ಜಯಂತ್ ಪಾಟೀಲ್ ಈ ಮೋರ್ಚಾದಲ್ಲಿ ಭಾಗವಹಿಸಿದ್ದರು.

ಠಾಕ್ರೆ ಸಹೋದರರ ಮೋರ್ಚಾ ಸ್ಥಳದಲ್ಲಿ ಒಂದು ದೊಡ್ಡ ಪೋಸ್ಟರ್‌ನ್ನು ಪ್ರದರ್ಶಿಸಲಾಗಿತ್ತು.ಈ ಪೋಸ್ಟರ್‌ಗಳು ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆಯ ಬಿರುಗಾಳಿಯನ್ನು ಹುಟ್ಟುಹಾಕಿವೆ. ಪೋಸ್ಟರ್‌ನಲ್ಲಿ ಉದ್ಧವ್ ಠಾಕ್ರೆ ಅವರನ್ನು ಭವಿಷ್ಯದ ಪ್ರಧಾನಿ ಮತ್ತು ರಾಜ್ ಠಾಕ್ರೆ ಅವರನ್ನು ಭವಿಷ್ಯದ ಮುಖ್ಯಮಂತ್ರಿ ಎಂದು ಉಲ್ಲೇಖಿಸಲಾಗಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಅಕ್ರಮಗಳ ವಿಷಯದಿಂದ ರಾಜಕೀಯ ವಾತಾವರಣ ಗಣನೀಯವಾಗಿ ಬಿಸಿಯಾಗಿದೆ. ಈ ವಿಷಯದ ಬಗ್ಗೆ ಠಾಕ್ರೆ ಸಹೋದರರು ನಗರದಲ್ಲಿ ಇಂದು ಬೃಹತ್ ಮೋರ್ಚಾ ನಡೆಸಿದರು.

# ಲೈಂಗಿಕ ದೌರ್ಜನ್ಯ; ಕ್ರೈಮ್ ಬ್ರ್ಯಾಂಚ್‌ನಿಂದ ತನಿಖೆ

ಮೊದಲ ಪುಟದಿಂದ

ಪೊಲೀಸರ ಲೈಂಗಿಕ ಕಿರುಕುಳ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸ್ ಠಾಣೆಯೊಂದಕ್ಕೆ ಹೋಗಿದ್ದುದಾಗಿ ತಿಳಿಸಿರುವ ಪತ್ರಕರ್ತೆಯರು, ಆದರೆ ತಮ್ಮ ದೂರುಗಳ ಬಗ್ಗೆ ಪೊಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ತಿಳಿಸಿದ್ದಾರೆ.

ಪ್ರತಿಭಟನೆಕಾರರನ್ನು ಪೊಲೀಸರು ಬಂಧಿಸುತ್ತಿದ್ದರು. ಆದರೆ ಸ್ಥಳದಲ್ಲಿ ಮಹಿಳಾ ಪೊಲೀಸರೇ ಇರಲಿಲ್ಲ. ಮಹಿಳಾ ಪೊಲೀಸರ ಅನುಪಸ್ಥಿತಿ ಬಗ್ಗೆ ನಾನು ಎಸಿಪಿ ವಿವೇಕ್ ಭಗತ್‌ನನ್ನು ಪ್ರಶ್ನಿಸಿದ್ದೆ. ಆಗ ಕೆರಳಿದ ಆತ ತನ್ನ ಮೇಲೆ ಲೈಂಗಿಕ ಹಲ್ಲೆ ನಡೆಸಿದ್ದು ತನ್ನನ್ನು ಹಿಂದಕ್ಕೆ ತಳ್ಳಿದ್ದ ಎಂದು ಪತ್ರಕರ್ತೆಯೊಬ್ಬರು ಆಪಾದಿಸಿದ್ದಾರೆ.

ಆದರೆ, ಎಸಿಪಿ ವಿವೇಕ್ ಭಗತ್‌ನನ್ನು ಆ ಬಗ್ಗೆ ಕೇಳಲು ನಡೆಸಿದ ಪ್ರಯತ್ನಗಳು ವಿಫಲವಾಗಿವೆ. ಆತ ಮತ್ತೆ ಮತ್ತೆ ಕರೆ ಮಾಡಿದರೂ ಮತ್ತು ಸಂದೇಶ ಕಳುಹಿಸಿದರೂ ಅದಕ್ಕೆ ಪ್ರತಿಕ್ರಿಯೆ ನೀಡಿಲ್ಲ. ಪತ್ರಕರ್ತೆಯರು ನೀಡಿರುವ ದೂರಿನಲ್ಲಿ ವಿವೇಕ್ ಹೆಸರೂ ಇದೆ ಎಂದು ಮೂಲಗಳು ತಿಳಿಸಿವೆ.

ದಿಲ್ಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆಯ ವರದಿಗೆ ತೆರಳಿದ್ದ ಮಹಿಳಾ ಪತ್ರಕರ್ತೆಯರ ಜತೆಗೆ ಪೊಲೀಸರು ನಡೆದುಕೊಂಡಿರುವ ವರ್ತನೆ ಅತ್ಯಂತ ಖಂಡನೀಯ. ಈ ಘಟನೆ ''ಆಘಾತಕಾರಿ ಮತ್ತು ನಿರಾಶಾದಾಯಕ'' ಎಂದು ಭಾರತೀಯ ಪ್ರೆಸ್ ಕೌನ್ಸಿಲ್ ಹೇಳಿದ್ದು, ದೂರನ್ನು ಅನುಸರಿಸಿ ತಕ್ಷಣ ಕ್ರಮಕ್ಕೆ ಆಗ್ರಹಿಸಿದೆ.

ಪ್ರಜಾಪ್ರಭುತ್ವದಲ್ಲಿ ಈ ರೀತಿಯ ವರ್ತನೆಯನ್ನು ಸಹಿಸಲಾಗುವುದಿಲ್ಲ. ಪತ್ರಕರ್ತರು ಮುಕ್ತವಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಬೇಕು. ಯಾವುದೇ ಭಯವಿಲ್ಲದೆ ಕರ್ತವ್ಯ ನಿರ್ವಹಿಸಲು ಬಿಡಬೇಕು. ಪತ್ರಕರ್ತರು ಸಂಗ್ರಹಿಸುವ ದಾಖಲೆಗಳು ವಿವಿಧ ವಿಚಾರಗಳನ್ನು ಎತ್ತುತ್ತವೆ. ದೇಶದ ರಾಜಧಾನಿಯ ಹೃದಯ ಭಾಗದಲ್ಲಿ ನಡೆದಿರುವ ಈ ಘಟನೆಯನ್ನು ಮಾಧ್ಯಮಗಳು ಗಂಭೀರವಾಗಿ ಪರಿಗಣಿಸುತ್ತವೆ. ಮಾಧ್ಯಮ ಸ್ವಾತಂತ್ರ್ಯವನ್ನು ಭಾರತದಲ್ಲಿ ಕಸಿದುಕೊಳ್ಳುವ ಈ ಬೆಳವಣಿಗೆ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾಗಿದೆ ಎಂದು ಭಾರತೀಯ ಪ್ರೆಸ್ ಕೌನ್ಸಿಲ್ ಹೇಳಿಕೆಯಲ್ಲಿ ತಿಳಿಸಿದೆ.

ಪತ್ರಕರ್ತೆಯರ ದೂರಿನ ಆಧಾರದಲ್ಲಿ ತಕ್ಷಣವೇ ದಿಲ್ಲಿ ಪೊಲೀಸರು ಕ್ರಮ ತೆಗೆದುಕೊಳ್ಳಬೇಕು. ಯಾವುದೇ ರೀತಿಯ ಬೆದರಿಕೆ ಮತ್ತು ಭಯ ಇಲ್ಲದೆ ತಮ್ಮ ಕರ್ತವ್ಯ ನಿಭಾಯಿಸಲು ಪತ್ರಕರ್ತರಿಗೆ ಮುಕ್ತ ಅವಕಾಶ ನೀಡಬೇಕು ಎಂದು ಕೌನ್ಸಿಲ್ ಹೇಳಿದೆ.

ಇದೇ ವೇಳೆ, ರವಿವಾರ ದಿಲ್ಲಿ ಮತ್ತು ಮುಂಬಯಿ ಸೇರಿದಂತೆ ದೇಶದ ವಿವಿಧೆಡೆಗಳಲ್ಲಿ ಪತ್ರಕರ್ತರ ಸಂಘಟನೆಗಳು ದಿಲ್ಲಿಯಲ್ಲಿ ಪೊಲೀಸರು ಪತ್ರಕರ್ತೆಯರ ಮೇಲೆ ನಡೆಸಿರುವ ಲೈಂಗಿಕ ದೌರ್ಜನ್ಯವನ್ನು ಖಂಡಿಸಿ ಪ್ರತಿಭಟನೆ ನಡೆಸಿವೆ.

# ಕೌನ್ಸಿಲರ್ ಆಗಿ ಮುಂದುವರಿಯುತ್ತಾರೆ : ಬಿಜೆಪಿ

ಮೊದಲ ಪುಟದಿಂದ

ಅವರು ಕೌನ್ಸಿಲರ್ ಆಗಿ ಮುಂದುವರಿಯಲಿದ್ದಾರೆ. ನಿನ್ನೆಯೇ ನಾನು ನಿಮಗೆ ಈ ವಿಚಾರ ಹೇಳಿದ್ದೇನೆ ಎಂದು ಹೇಳಿದರು.

ವಾಟ್ಸ್ ಆ್ಯಪ್ ಗುಂಪಿನಲ್ಲಿ ಶ್ರೀಲೇಖ ಅವರು ರಾಜೀನಾಮೆ ನೀಡಿರುವ ಪತ್ರ ಹರಿದಾಡಿದೆಯಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು ನೇರ ಉತ್ತರ ನೀಡಲಿಲ್ಲ.

ಆಡಳಿತ ಸುಲಲಿತವಾಗಿ ನಡೆಯಬೇಕು ಎಂದು ನೀವು ಭಾವಿಸುತ್ತೀರಿ. ಎಲ್ಲರ ಆಶಯದಂತೆಯೇ ಆಡಳಿತ ಮತ್ತಷ್ಟು ಬಲಿಷ್ಠವಾಗಿ ಮುಂದುವರಿಯಲಿದೆ ಎಂದು ಹೇಳಿದ ಮೇಯರ್, ಬಿಜೆಪಿ ಆಡಳಿತದ ಮಹಾನಗರ ಪಾಲಿಕೆಯಲ್ಲಿ ಯಾವುದೇ ಬಿಕ್ಕಟ್ಟಿಲ್ಲ ಎಂದು ಹೇಳಿದರು.

ಶ್ರೀಲೇಖ ಅವರು ರಾಜೀನಾಮೆ ನೀಡಿಲ್ಲ ಮತ್ತು ಇತರ ಪಕ್ಷ ಸೇರುವ ಪ್ರಶ್ನೆಯಿಲ್ಲ. ಅದೆಲ್ಲ ವದಂತಿಗಳು ಎಂದು ಸುರೇಶ್ ಹೇಳಿದರು. ತಿರುವನಂತಪುರಂ ಮಹಾನಗರಪಾಲಿಕೆಯಲ್ಲಿ ಬಿಜೆಪಿ ಅಧಿಕಾರ ಕಳೆದುಕೊಳ್ಳಲಿದೆ ಎಂಬ ವರದಿಗಳನ್ನೂ ಅವರು ನಿರಾಕರಿಸಿದರು. 101 ಸದಸ್ಯ ಬಲದ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ 50 ಸ್ಥಾನದಿಂದ ಅತಿದೊಡ್ಡ ಪಕ್ಷವಾಗಿ ಪಕ್ಷೇತರರೊಬ್ಬರ ಬೆಂಬಲದಿಂದ ಬಹುಮತ ಪಡೆದಿದೆ. ಆದರೆ ಮೇಯರ್‌ಸ್ಥಾನದಿಂದ ವಂಚಿತವಾಗಿರುವ ಶ್ರೀಲೇಖ ಅವರು ಕೌನ್ಸಿಲರ್ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಹೇಳಿದ್ದರಿಂದ ಬಿಜೆಪಿ ಬಹುಮತ ಕಳೆದುಕೊಂಡಿದೆ ಎಂದು ವರದಿಯಾಗಿದೆ.

# ಮಹಾರಾಷ್ಟ್ರದ ಎಸ್‌ಐಆರ್ ಪ್ರಕ್ರಿಯೆ ರದ್ದು : ರಾಜ್‌ಠಾಕ್ರೆ ಆಗ್ರಹ

ಮೊದಲ ಪುಟದಿಂದ

ನ್ಯೂರೆಂಬರ್ಗ್ ವಿಚಾರಣೆಗಳ ಮಾದರಿಯಲ್ಲಿಯೇ ಬಿಜೆಪಿ ಅಧಿಕಾರಿಗಳ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರಲ್ಲದೆ,ದೇಶದಲ್ಲಿಯೂ ಅಂತಹದ್ದೇ ಘಟನೆ ನಡೆಯಲಿದೆ ಎಂಬುದನ್ನು ಬಿಜೆಪಿಯು ಮತ್ತು ಆ ಅಧಿಕಾರಿಗಳು ಅರಿತುಕೊಳ್ಳಬೇಕು ಎಂದು ಪ್ರತಿಪಾದಿಸಿದರು.

ಎರಡನೇ ಮಹಾಯುದ್ಧದ ಬಳಿಕ ಮಿತ್ರರಾಷ್ಟ್ರಗಳು ನಡೆಸಿದ ಸರಣಿ ಮಿಲಿಟರಿ ನ್ಯಾಯಾಲಯದ ವಿಚಾರಣೆಗಳೇ 'ನ್ಯೂರೆಂಬರ್ಗ್ ವಿಚಾರಣೆಗಳು'. ಇವು ಅಡಾಲ್ಫ್ ಹಿಟ್ಲರ್ ನೇತೃತ್ವದ ನಾಜಿ ಜರ್ಮನಿಯ ಉನ್ನತ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿದವು.

ವಿರೋಧ ಪಕ್ಷಗಳ ಹೋರಾಟವು ಯಾವುದೇ ಒಂದು ಪಕ್ಷ, ನಾಯಕ, ಧರ್ಮ ಅಥವಾ ಜಾತಿಗಾಗಿ ಅಲ್ಲ, ಬದಲಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಎಂದ ಉದ್ಧವ್,ಜನರು ಇಂದು ಮೌನವಾಗಿದ್ದಾರೆ ಎಂಬುದನ್ನು ಬಿಜೆಪಿ ಅರಿತುಕೊಳ್ಳಬೇಕು. ಒಂದು ವೇಳೆ ಅವರು ಆಕ್ರೋಶಗೊಂಡರೆ, ಪಕ್ಷದ ಅಧಿಕಾರದ ಗದ್ದುಗೆಯನ್ನೇ ಸುಟ್ಟುಹಾಕುತ್ತಾರೆ ಎಂದು ಎಚ್ಚರಿಸಿದರು.

ಬಿಜೆಪಿಯು ಕೇವಲ ಮತಗಳು ಮತ್ತು ಜನಪ್ರತಿನಿಧಿಗಳನ್ನು ಮಾತ್ರವಲ್ಲದೆ, ಅಯೋಧ್ಯೆಯ ರಾಮಮಂದಿರಕ್ಕೆ ನೀಡಲಾದ ದೇಣಿಗೆಯನ್ನೂ ಕದ್ದಿದೆ ಎಂದು ಅವರು ಆರೋಪಿಸಿದರು.

ಚುನಾವಣಾ ಆಯೋಗವನ್ನು ಗುರಿಯಾಗಿಸಿಕೊಂಡು ಮಾತನಾಡಿದ ಸೇನಾ (ಯುಬಿಟಿ) ಮುಖ್ಯಸ್ಥರು, ಮಹಾರಾಷ್ಟ್ರದ ಮತದಾರರ ಪಟ್ಟಿಯಿಂದ 2 ಕೋಟಿ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ ಮತ್ತು ಇದೇ ರೀತಿಯ ಪ್ರಕ್ರಿಯೆಯಲ್ಲಿ ಪಶ್ಚಿಮ ಬಂಗಾಳದಲ್ಲಿ 30 ಲಕ್ಷ ಹಾಗೂ ತಮಿಳುನಾಡಿನಲ್ಲಿ 70 ಲಕ್ಷ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಉಪಚುನಾವಣೆಗಳು ನಡೆಯಲಿರುವ ಹೊತ್ತಿನಲ್ಲಿ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಗೆ ಸಂಬಂಧಿಸಿದ ವಿಷಯದ ತುರ್ತು ವಿಚಾರಣೆಯನ್ನು ನಡೆಸದಿರುವ ಸುಪ್ರೀಂಕೋರ್ಟ್‌ನ ಕ್ರಮವನ್ನೂ ಅವರು ಟೀಕಿಸಿದರು. ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯುವ ಒಂದು ದಿನ ಮುಂಚಿತವಾಗಿ, ಅಂದರೆ ಅ.5 ರಂದು ನ್ಯಾಯಾಲಯವು ಈ ವಿಷಯದ ವಿಚಾರಣೆ ನಡೆಸಲಿದೆ.

'ಎಲ್ಲಾ ಸಂಸ್ಥೆಗಳನ್ನು ಅವರು ಹೇಗೆ ನಿಯಂತ್ರಿಸುತ್ತಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ' ಎಂದು ಉದ್ಧವ್ ಪ್ರತಿಪಾದಿಸಿದರು.

ಚುನಾವಣಾ ಆಯೋಗದಲ್ಲಿ ಅಕ್ರಮಗಳು ನಡೆಯುತ್ತಿವೆ ಎಂದು ತಾವು 2017-18 ರಿಂದಲೂ ರಾಜಕೀಯ ನಾಯಕರಿಗೆ ಹೇಳುತ್ತಲೇ ಬಂದಿರುವುದಾಗಿ ರಾಜ್‌ಠಾಕ್ರೆ ತಿಳಿಸಿದರು.

ಇವಿಎಂ ಮತ್ತು ಮತದಾರರ ಪಟ್ಟಿಯ ವಿಷಯವಾಗಿ ಅಂದಿನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಮಾಡಿದ್ದಾಗಿ ಹಾಗೂ ಸಮಸ್ಯೆಗಳು ಬಗೆಹರಿಯುವವರೆಗೂ ಚುನಾವಣೆಗಳನ್ನು ಬಹಿಷ್ಕರಿಸುವಂತೆ ಅವರಿಗೆ ಮನವಿ ಮಾಡಿದ್ದಾಗಿ ಮನಸೇ ಮುಖ್ಯಸ್ಥರು ಹೇಳಿದರು.

2024ರ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ವಿರೋಧ ಪಕ್ಷಗಳು ಉತ್ತಮ ಪ್ರದರ್ಶನ ನೀಡಿದ ಬಳಿಕ ಕೇವಲ 6 ತಿಂಗಳ ಅಂತರದಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಅವರ ಮತಗಳಿಕೆ ಕುಸಿಯಲು ಮತ್ತು ಬಿಜೆಪಿಯ ಮತಗಳಿಕೆ ಹೆಚ್ಚಾಗಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದರು. ಆಡಳಿತಾರೂಢ ಪಕ್ಷಕ್ಕೆ ನಾನು ಇಷ್ಟೇ ಹೇಳಬಯಸುತ್ತೇನೆ... ನೀವು ಅಧಿಕಾರಕ್ಕೆ ಬಂದಿರುವುದರ ಬಗ್ಗೆ ನಮಗೆ ಯಾವುದೇ ಸಿಟ್ಟಿಲ್ಲ. ಆದರೆ, ನೀವು ಅಧಿಕಾರವನ್ನು ಪಡೆದುಕೊಂಡ ರೀತಿ ಮತ್ತು ಅದನ್ನು ಬಳಸುತ್ತಿರುವ ಬಗೆಯ ಬಗ್ಗೆ ನಮಗೆ ಆಕ್ರೋಶವಿದೆ ಎಂದು ರಾಜ್ ಠಾಕ್ರೆ ಹೇಳಿದರು.

ಚುನಾವಣಾ ಆಯೋಗದ ಬೆಂಬಲವಿರುವುದರಿಂದ ತಮಗೆ ಏನೂ ಆಗುವುದಿಲ್ಲ ಎಂಬ ಅರಿವು ಬಿಜೆಪಿಗಿದೆ. ಹೀಗಾಗಿ, ತಮ್ಮ ಇಚ್ಛೆಯಂತೆ ಏನನ್ನಾದರೂ ಮಾಡಬಹುದು ಎಂಬ ಧೋರಣೆಯನ್ನು ಆ ಪಕ್ಷ ಹೊಂದಿದೆ ಎಂದು ಅವರು ಆರೋಪಿಸಿದರು.

ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಯಾವುದೇ ಆಡಳಿತಾರೂಢ ಪಕ್ಷವು, ಜನರಿಂದ ಉಂಟಾಗಬಹುದಾದ ಪ್ರತಿಕ್ರಿಯೆ ಮತ್ತು ಅಧಿಕಾರ ಕಳೆದುಕೊಳ್ಳುವ ಭಯವನ್ನು ಹೊಂದಿರುತ್ತದೆ. ಆದರೆ, ಕೇಂದ್ರ ಮತ್ತು ಮಹಾರಾಷ್ಟ್ರ ಸರಕಾರಗಳಲ್ಲಿ ಅಂತಹ ಯಾವುದೇ ಭಯ ಕಂಡುಬರುತ್ತಿಲ್ಲ ಎಂದು ಮನಸೇ ಮುಖ್ಯಸ್ಥರು ಹೇಳಿದರು.

ಈ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿರುವ ದೀಪ್ಕೆ, ಎಲ್ಲಾ ಪ್ರತಿಭಟನಾಕಾರರೊಂದಿಗೆ ಒಗ್ಗಟ್ಟನ್ನು ವ್ಯಕ್ತಪಡಿಸುತ್ತೇನೆ. ಎಲ್ಲಾ ಭಾರತೀಯರು ಒಗ್ಗೂಡಬೇಕಾದ ಸಮಯವಿದು. ಇದ ನಿರ್ಣಾಯಕ ಕ್ಷಣ! ಗಮನಿಸಿ: ಮುಂಬಯಿನಲ್ಲಿ ಪ್ರತಿಭಟನೆಗೆ ಹೇಗೆ ಅವಕಾಶ ನೀಡಲಾಗಿದೆ ಎಂದು ಕೇಳಬೇಡಿ. ಮಹಾರಾಷ್ಟ್ರ ಪೊಲೀಸ್ ಮತ್ತು ದಿಲ್ಲಿ ಪೊಲೀಸ್ ನಡುವೆ ದೊಡ್ಡ ಸಾಂಸ್ಕೃತಿಕ ವ್ಯತ್ಯಾಸವಿದೆ ಎಂದು ಬರೆದಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತುಂಬಾ ಕಾಲದಿಂದಲೂ ಮತ ಕಳ್ಳತನದ ಬಗ್ಗೆ ಮಾತನಾಡುತ್ತಾ ಬಂದಿದ್ದಾರೆ ಮತ್ತು ಅದಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನೂ ಮಂಡಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ಥೋರಟ್ ಹೇಳಿದರು.

ಇದೀಗ ಆ ಸಾಕ್ಷ್ಯಗಳು ಚುನಾವಣಾ ಆಯೋಗದ ಮೂಲಕವೇ ಹೊರಬಂದಿವೆ. ಅಧಿಕಾರಕ್ಕಾಗಿ ಬಿಜೆಪಿ ಏನನ್ನಾದರೂ ಮಾಡಬಲ್ಲದು. ಅತ್ಯುನ್ನತ ಚುನಾವಣಾ ಮಂಡಳಿಯ ಸದಸ್ಯರನ್ನು ನೇಮಕ ಮಾಡುವ ವಿಧಾನವನ್ನೂ ಅವರು ಟೀಕಿಸಿದರು.

ಚುನಾವಣಾ ಆಯೋಗದ ನೇಮಕಾತಿ ಪ್ರಕ್ರಿಯೆಯನ್ನು ಬದಲಾಯಿಸಿ, ಅದರಿಂದ (ಆಯ್ಕೆ ಸಮಿತಿಯಿಂದ) ಸುಪ್ರೀಂ ಕೋರ್ಟ್ ನ್ಯಾಯಾಧೀಶರನ್ನು ಹೊರಗಿಡಲಾಯಿತು.ಎಲ್ಲವೂ ಅಲ್ಲಿಂದಲೇ ಆರಂಭವಾಯಿತು ಎಂದು ಥೋರಟ್ ಪ್ರತಿಪಾದಿಸಿದರು.

ಅಧಿಕಾರಕ್ಕೆ ಬರುವವರೆಲ್ಲರೂ ಮತಗಳ ಕಳ್ಳತನದ ಮೂಲಕವೇ ಅದನ್ನು ಪಡೆಯುತ್ತಾರೆ. ಅವರು ವಿವಿಧ ವಿಧಾನಗಳನ್ನು ಬಳಸುತ್ತಾರೆ. ಜ್ಞಾನೇಶ್ ಕುಮಾರ್ ಈ ಭ್ರಷ್ಟ ಆಡಳಿತದ ಸಂಕೇತವಾಗಿದ್ದಾರೆ ಎಂದು ಅವರು ಆರೋಪಿಸಿದರು.

# 180 ಪ್ರಯಾಣಿಕರ ಪ್ರಾಣ ಉಳಿಸಿದ ಧೀರ ಪೈಲಟ್ ಸ್ಮಿತ್ ಮಚ್ಛಾರ್ ಕುಟುಂಬ ಜತೆಗೆ ಮುಂಬಯಿ ಮೇಯರ್ ಭೇಟಿ



ಮುಂಬಯಿ,ಅ.4- ಆಕಾಶದಲ್ಲಿ 35 ಸಾವಿರ ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತಿದ್ದ ವೇಳೆ ಸಹ-ಪೈಲಟ್‌ನಿಂದ ಮಾರಣಾಂತಿಕ ಚಾಕು ದಾಳಿಗೊಳಗಾಗಿಯೂ ಅದ್ಭುತ ಧೈರ್ಯ ಪ್ರದರ್ಶಿಸಿ 27 ಮುಗ್ಧ ಮಕ್ಕಳು ಸೇರಿದಂತೆ ಒಟ್ಟು 180 ಪ್ರಯಾಣಿಕರ ಜೀವ ಉಳಿಸಿದ ಮುಂಬಯಿ ಮೂಲದ ಫ್ಲೈ ದುಬೈಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಛಾರ್ ಅವರ ಕುಟುಂಬಸ್ಥರನ್ನು ಮುಂಬಯಿ ಮೇಯರ್ ರಿತು ತಾವ್ಡೆ ರವಿವಾರ ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸಿದರು. ಘಾಟ್ಕೋಪರ್‌ಪೂರ್ವದ 'ಧವಳಗಿರಿ'ಕಟ್ಟಡದಲ್ಲಿರುವ ಸ್ಮಿತ್ ಅವರ ಚಿಕ್ಕಪ್ಪ ಕಿಶೋರ್ ಮಚ್ಛಾರ್ ಅವರ ನಿವಾಸಕ್ಕೆ ತೆರಳಿದ ಮೇಯರ್, ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಕ್ಯಾಪ್ಟನ್ ಸ್ಮಿತ್ ಅವರ ಆರೋಗ್ಯ ಸ್ಥಿತಿಗತಿಯನ್ನು ಆಸ್ಥೆಯಿಂದ ವಿಚಾರಿಸಿ, ಅವರ ಶೀಘ್ರ ಚೇತರಿಕೆ ಹಾಗೂ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸಿದರು.

ಈ ವಸತಿ ಪ್ರದೇಶವು ಸ್ವತಃ ರಿತು ತಾವ್ಡೆ ಅವರು ಕಾರ್ಪೊರೇಟರ್ ಆಗಿ ಪ್ರತಿನಿಧಿಸುವ ವಾರ್ಡ್ ನಂಬರ್ 132ರ ವ್ಯಾಪ್ತಿಯಲ್ಲೇ ಇರುವುದು ವಿಶೇಷವಾಗಿದ್ದು, ಆಕೆ ಇಡೀ ಮುಂಬಯಿ ಪರವಾಗಿ ಕುಟುಂಬಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಕಳೆದ ಸೆ.30 ರಂದು ದುಬೈನಿಂದ ಟೆಲ್ ಅವೀವ್‌ಗೆ ತೆರಳುತ್ತಿದ್ದ ವಿಮಾನದ ಕಾಕ್‌ಪಿಟ್‌ನಲ್ಲಿ ಈ ಭೀಕರ ಘಟನೆ ನಡೆದಿತ್ತು.ತೀವ್ರ ರಕ್ತಸ್ರಾವದ ನಡುವೆಯೂ ಅದಮ್ಯ ಸಂಯಮ ಮೆರೆದ ಸ್ಮಿತ್, ವಿಮಾನವನ್ನು ಯಶಸ್ವಿಯಾಗಿ ತುರ್ತು ಭೂಸ್ಪರ್ಶ ಮಾಡಿಸಿ ಜಾಗತಿಕ ಮಟ್ಟದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ್ದರು. ಇವರ ಈ ಅಪ್ರತಿಮ ಸಾಹಸವನ್ನು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಜಗತ್ತಿನ ನಾನಾ ಮುಖಂಡರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಈ ಸಂದರ್ಭದಲ್ಲಿ ಶಾಸಕ ಪರಾಗ್ ಶಾ, ಕಾರ್ಪೊರೇಟರ್ ಧರ್ಮೇಶ್ ಗಿರಿ, ಕಾರ್ಪೊರೇಟರ್ ರಾಖಿ ಜಾಧವ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಥಾಣೆ: ಕಟ್ಟಡದ ಟೆರೇಸ್ ಗ್ಯಾಲರಿ ಕುಸಿತ; 80 ನಿವಾಸಿಗಳ ಸ್ಥಳಾಂತರ

**ಥಾಣೆ,ಅ.4 - ಮಹಾರಾಷ್ಟ್ರದ ಥಾಣೆ ನಗರದಲ್ಲಿ ರವಿವಾರ ನಾಲ್ಕು ಅಂತಸ್ತಿನ ವಸತಿ ಕಟ್ಟಡವೊಂದರ ಟೆರೇಸ್ ಗ್ಯಾಲರಿಯ ಭಾಗವೊಂದು ಕುಸಿದುಬಿದ್ದಿದ್ದು, ಕಟ್ಟಡದಲ್ಲಿದ್ದ 80 ನಿವಾಸಿಗಳನ್ನು ತಕ್ಷಣವೇ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

ಕಿಶನ್ ನಗರದ 'ಸಂಗಮ್ ಸದನ್'ನಲ್ಲಿ ಸಂಭವಿಸಿದ ಈ ಘಟನೆಯಲ್ಲಿ ಯಾವುದೇ ಸಾವು-ನೋವು ಸಂಭವಿಸಿಲ್ಲ. ಆದರೆ, ಕುಸಿದುಬಿದ್ದ ಅವಶೇಷಗಳು ಆವರಣದಲ್ಲಿ ನಿಲ್ಲಿಸಿದ್ದ ನಾಲ್ಕು ದ್ವಿಚಕ್ರ ವಾಹನಗಳಿಗೆ ಹಾನಿಯನ್ನುಂಟು ಮಾಡಿವೆ ಎಂದು ಅವರು ಹೇಳಿದ್ದಾರೆ. ಮಧ್ಯಾಹ್ನ 2.20ರ ಸುಮಾರಿಗೆ ಈ ಘಟನೆ ವರದಿಯಾಗಿದೆ. 35 ವರ್ಷ ಹಳೆಯದಾದ ಈ ಕಟ್ಟಡದ ಟೆರೇಸ್ ಗ್ಯಾಲರಿಯ ಒಂದು ಭಾಗ ಕುಸಿದಿದ್ದು, ಉಳಿದ ಭಾಗವು ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ಪ್ರಾದೇಶಿಕ ವಿಪತ್ತು ನಿರ್ವಹಣಾ ಘಟಕದ ಮುಖ್ಯಸ್ಥ ಯಾಸಿನ್ ತಡ್ವಿ ತಿಳಿಸಿದ್ದಾರೆ.

ಕಟ್ಟಡದಲ್ಲಿದ್ದ 80 ನಿವಾಸಿಗಳನ್ನು ಸ್ಥಳಾಂತರಿಸಿ ಅವರಿಗೆ ಪರ್ಯಾಯ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದ ಅವರು, ಕಟ್ಟಡಕ್ಕೆ ರಚನಾತ್ಮಕ ದುರಸ್ತಿಯ ಅಗತ್ಯವಿದೆ ಎಂದು ಹೇಳಿದ್ದಾರೆ.

# ಅಂತಾರಾಜ್ಯ ಡ್ರಗ್ಸ್ ಮಾರಾಟ ಜಾಲ ಬಯಲಿಗೆ; ನಾಗ್ಪುರದಲ್ಲಿ ಮೂವರ ಬಂಧನ

ಮುಂಬಯಿ,ಅ.4 - ಮಾದಕವಸ್ತು ನಿಯಂತ್ರಣ ಬ್ಯೂರೋದ (ಎನ್‌ಸಿಬಿ) ಮುಂಬಯಿ ಘಟಕವು ರವಿವಾರ ನಸುಕಿನ ಜಾವ ನಾಗ್ಪುರದಲ್ಲಿ ಟ್ರಕ್‌ವೊಂದರಿಂದ 500 ಕೆಜಿ ಗಾಂಜಾವನ್ನು ವಶಪಡಿಸಿಕೊಂಡಿದ್ದು, ಈ ಸಂಬಂಧ ಮೂವರನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟ್ರಕ್‌ನಲ್ಲಿದ್ದ ಪಶ್ಚಿಮ ಬಂಗಾಳದ ನಿವಾಸಿಗಳಾದ ಆರ್.ಪಿ. ಗೋಲ್ದಾರ್ ಮತ್ತು ಎ. ಸರ್ಕಾರ್ ಹಾಗೂ ನಾಗ್ಪುರ ಮೂಲದ ಪ್ರಮುಖ ಸ್ವೀಕೃತಿದಾರ (ರಿಸೀವರ್) ಎಸ್.ಎ.ಎಸ್. ಯೂಸುಫ್ ಅಲಿಯಾಸ್ ರಾಜಾಭಾಯ್ ಅವರ ಬಂಧನವು, ಹಲವು ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿದ್ದ ಮಾದಕವಸ್ತು ಕಳ್ಳಸಾಗಣೆ ಜಾಲವನ್ನು ಬಯಲಿಗೆಳೆದಿದೆ ಎಂದು ಅವರು ಹೇಳಿದರು.

ಮೊದಲು ಗೋಲ್ದಾರ್ ಮತ್ತು ಸರ್ಕಾರ್ ಅವರನ್ನು ವಶಕ್ಕೆ ಪಡೆಯಲಾಯಿತು. ಸ್ಥಳದಲ್ಲೇ ನಡೆಸಿದ ವಿಚಾರಣೆಯು ಎನ್‌ಸಿಬಿ ಯೂಸುಫ್‌ನನ್ನು ಸಂಪರ್ಕಿಸಲು ಕಾರಣವಾಯಿತು.ಯೂಸುಫ್ ಕಳೆದ ನಾಲ್ಕು ವರ್ಷಗಳಿಂದ ಈ ಮಾರಾಟ ಜಾಲದಲ್ಲಿ ಸಕ್ರಿಯವಾಗಿದ್ದು, ಆತನ ವಿರುದ್ಧ ಮಾದಕವಸ್ತು ಮತ್ತು ಸೈಕೋಟ್ರೋಪಿಕ್ ಪದಾರ್ಥಗಳ ಕಾಯ್ದೆ ಅಡಿಯಲ್ಲಿ ಹಲವು ಪ್ರಕರಣಗಳಿವೆ ಎಂದು ಅಧಿಕಾರಿಗಳು ತಿಳಿಸಿದರು.

ಒಡಿಶಾದಿಂದ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಕ್ಕೆ ಮಾದಕವಸ್ತುಗಳನ್ನು ಸಾಗಿಸುವ ಅಂತಾರಾಜ್ಯ ಜಾಲದ ಕುರಿತಾದ ನಿರ್ದಿಷ್ಟ ಗುಪ್ತಚರ ಮಾಹಿತಿಯ ಮೇರೆಗೆ, ಎನ್‌ಸಿಬಿ ತಂಡವು ರವಿವಾರ ನಸುಕಿನ ಜಾವ ನಾಗ್ಪುರದಲ್ಲಿ ಬಲೆ ಬೀಸಿ, ಪಶ್ಚಿಮ ಬಂಗಾಳ ನೋಂದಣಿಯ ವಾಣಿಜ್ಯ ಟ್ರಕ್‌ನ್ನು ತಡೆಹಿಡಿಯಿತು. ಶೋಧ ನಡೆಸಿದಾಗ ಉಕ್ಕಿನ ಕೊಳವೆಗಳ (ಸ್ಟೀಲ್ ಪೈಪ್‌ಗಳ) ಅಡಿಯಲ್ಲಿ ಅಡಗಿಸಿಟ್ಟಿದ್ದ 500 ಕೆಜಿ ಗಾಂಜಾ ಪತ್ತೆಯಾಯಿತು ಎಂದು ಅಧಿಕಾರಿ ಹೇಳಿದರು.

ಈ ನಿಷೇಧಿತ ವಸ್ತುಗಳನ್ನು ಒಡಿಶಾದ ಸಂಬಲ್‌ಪುರದಲ್ಲಿ ತುಂಬಿಸಲಾಗಿತ್ತು ಮತ್ತು ನಾಗ್ಪುರದಲ್ಲಿರುವ ಯೂಸುಫ್‌ಗೆ ತಲುಪಿಸಲು ಉದ್ದೇಶಿಸಲಾಗಿತ್ತು. ಅಲ್ಲಿಂದ ಅವುಗಳನ್ನು ಮಹಾರಾಷ್ಟ್ರದ ಜಾಲ್ನಾ ಮತ್ತು ಮಧ್ಯಪ್ರದೇಶದ ಇಂದೋರ್‌ಗೆ ವಿತರಿಸುವ ಯೋಜನೆಯಿತ್ತು ಎಂದು ಅವರು ಮಾಹಿತಿ ನೀಡಿದರು. ಕಾನೂನು ಜಾರಿ ಸಂಸ್ಥೆಗಳ ಕಣ್ಣು ತಪ್ಪಿಸಲು, ಆರೋಪಿಗಳು ಹೆದ್ದಾರಿ ಜಾಲವನ್ನು ಬಳಸುವ ಬದಲು ಆಗಾಗ್ಗೆ ತಮ್ಮ ಪ್ರಯಾಣದ ಮಾರ್ಗಗಳನ್ನು ಬದಲಾಯಿಸುತ್ತಿದ್ದರು ಎಂದು ಅವರು ಹೇಳಿದರು. ಪೂರ್ವ ಮಹಾರಾಷ್ಟ್ರದಲ್ಲಿ ಅಂತಾರಾಜ್ಯ ಮಾದಕವಸ್ತು ಜಾಲಗಳ ವಿರುದ್ಧ ನಡೆಸುತ್ತಿರುವ ತೀವ್ರ ಕಾರ್ಯಾಚರಣೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಎನ್‌ಸಿಬಿ ತಿಳಿಸಿದೆ.

## ನಿಷೇಧಿತ ಗುಟ್ಕಾ, ಪಾನ್ ಮಸಾಲ ವಶ ಪ್ರಕರಣ: ಥಾಣೆ ನ್ಯಾಯಾಲಯದಿಂದ ಮೂವರು ದೋಷಮುಕ್ತ

ಥಾಣೆ, ಅ.4 - ಮಹಾರಾಷ್ಟ್ರದ ಥಾಣೆ ಜಿಲ್ಲೆಯ ನ್ಯಾಯಾಲಯವೊಂದು, ನಿಷೇಧಿತ ಗುಟ್ಕಾ ಮತ್ತು ಪಾನ್ ಮಸಾಲ ವಹಿವಾಟು ನಡೆಸಿದ ಆರೋಪ ಹೊತ್ತಿದ್ದ ಮೂವರನ್ನು ದೋಷಮುಕ್ತಗೊಳಿಸಿದೆ. ಆರೋಪಿಗಳ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಶನ್ ವಿಫಲವಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿಯಲ್ಲಿ ಈ ಮೂವರ ವಿರುದ್ಧ ಹೊರಿಸಲಾದ ಆರೋಪಗಳು ಕಾನೂನುಬದ್ಧವಾಗಿ ಸಮರ್ಥನೀಯವಲ್ಲ ಎಂದು ಜಿಲ್ಲಾ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಆರ್.ಎಂ. ರಾಥೋಡ್ ಅವರು ತಮ್ಮ ಆದೇಶದಲ್ಲಿ ತಿಳಿಸಿದರು.






# ಬಂಟರ ಸಂಘ ಮುಂಬಯಿ : ವಸಾಯಿ - ಡಹಾಣು ಪ್ರಾದೇಶಿಕ ಸಮಿತಿಯ 17ನೇ ವಾರ್ಷಿಕೋತ್ಸವ ಸಂಭ್ರಮ

## ಪ್ರಾದೇಶಿಕ ಸಮಿತಿಗಳ ಕಾರ್ಯಕ್ರಮಗಳಿಗೆ ಬಂಟ ಸಮಾಜದ ದಾನಿಗಳ ಪ್ರೀತಿ, ಸಹಕಾರ ಶ್ಲಾಘನೀಯ : ಪ್ರವೀಣ್ ಭೋಜ ಶೆಟ್ಟಿ


ಬಂಟರ ಸಂಘ ಮುಂಬಯಿ ಇದರ ವಸಾಯಿ -ಡಹಾಣು ಪ್ರಾದೇಶಿಕ ಸಮಿತಿಯ 17ನೇ ವಾರ್ಷಿಕೋತ್ಸವದ ಸಮಾರಂಭವನ್ನು ಉದ್ಘಾಟಿಸಿದಾಗ


ಪ್ರವೀಣ್ ಭೋಜ ಶೆಟ್ಟಿ ಅವರನ್ನು ಗೌರವಿಸಿದಾಗ


ತೋನ್ಸೆ ಆನಂದ ಎಮ್ ಶೆಟ್ಟಿ ಅವರನ್ನು ಗೌರವಿಸಿದಾಗ


ಕರ್ನಿರೆ ವಿಶ್ವನಾಥ್ ಶೆಟ್ಟಿ ಅವರನ್ನು ಗೌರವಿಸಿದಾಗ


ಆರ್ ಕೆ ಶೆಟ್ಟಿ ಅವರನ್ನು ಗೌರವಿಸಿದಾಗ


ಅಶೋಕ್ ಶೆಟ್ಟಿ ಬೆಳ್ಮಾಡಿ ಅವರನ್ನು ಗೌರವಿಸಿದಾಗ

(ವರದಿ: ದಿನೇಶ್ ಕುಲಾಲ್, ಚಿತ್ರ : ಭಾಸ್ಕರ್ ಕಾಂಚನ್)

ವಸಾಯಿ, ಅ.4- ಬಂಟರ ಸಂಘ ಮುಂಬಯಿ ಇದರ ವಸಾಯಿ -ಡಹಾಣು ಪ್ರಾದೇಶಿಕ ಸಮಿತಿಯ ವತಿಯಿಂದ 17ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಲಾದ ಭಾವೈಕ್ಯ ಸಂಭ್ರಮವು ಶ್ರೀಮತಿ ಚಂದ್ರಿಕಾ ಐಕಳ ಹರೀಶ್ ಶೆಟ್ಟಿ ಸ್ವಾಗತ ದ್ವಾರದೊಂದಿಗೆ ಕಾಶಿಬಾಬು ಕುವೆಟ್ಟುರವರ ಸಭಾಂಗಣದಲ್ಲಿ ಸ್ವರ್ಗೀಯ ಉಮಾ ಸತೀಶ್ ಶೆಟ್ಟಿ ವೇದಿಕೆಯಲ್ಲಿ ಅ. 3ರ ಶನಿವಾರ ಎಚ್.ಡಿ.ಬೀಚ್ ರಿಸಾರ್ಟ್ಸ್ ಇನ್‌ಫಂಡ್ ಜೀಸಸ್ ಚರ್ಚ್ ಮರ್ಸಸ್ ವಸಾಯಿ- ರಾನ್‌ಗಾಂವ್ ರೋಡ್, ವಸಾಯಿ ಪಶ್ಚಿಮ ಇಲ್ಲಿ ಬಂಟರ ಸಂಘ ಮುಂಬಯಿ ಇದರ ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಮಂಜುನಾಥ್ ಶೆಟ್ಟಿ ಕೊಡ್ಲಾಡಿ ಮತ್ತು ಬಂಟರ ಸಂಘದ ಜೊತೆ ಕೋಶಾಧಿಕಾರಿ ಶಶಿಧರ್‌ಶೆಟ್ಟಿ ಇನ್ನಂಜೆ ಇವರ ನೇತೃತ್ವದಲ್ಲಿ ಸಂಭ್ರಮದೊಂದಿಗೆ ನೆರವೇರಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಬಂಟರ ಸಂಘ ಮುಂಬಯಿ ಇದರ ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿ ಯವರು ಮಾತನಾಡುತ್ತಾ, ಬಂಟರ ಸಂಘ ಮುಂಬಯಿ 99ನೇ ವರ್ಷದ ಸಂಭ್ರಮದಲ್ಲಿದ್ದು, 2027ರಲ್ಲಿ ಶತಮಾನೋತ್ಸವದ ಮಹತ್ವದ ಮೈಲಿಗಲ್ಲನ್ನು ತಲುಪಲು ಸಜ್ಜಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಂಘದ ಪ್ರಾದೇಶಿಕ ಸಮಿತಿಗಳು ನಡೆಸುವ ಕಾರ್ಯಕ್ರಮಗಳಿಗೆ ಬಂಟರ ಸಂಘ ಮುಂಬಯಿಯ ಪದಾಧಿಕಾರಿಗಳು, ಅತಿಥಿ ಗಣ್ಯರು ಹಾಗೂ ಸಮಾಜ ಬಾಂಧವರು ತೋರುತ್ತಿರುವ ಪ್ರೀತಿ ಮತ್ತು ಸಹಕಾರ ಅತ್ಯಂತ ಸಂತೋಷ ತಂದಿದೆ. ಕಾರ್ಯಕ್ರಮಕ್ಕೆ ಮುಂಬಯಿ ಬಂಟರ ಸಂಘದ ಪದಾಧಿಕಾರಿಗಳು ಹಾಗೂ ಗಣ್ಯರು ಅಪಾರ ಪ್ರೀತಿಯಿಂದ ಆಗಮಿಸಿರುವುದು ಪ್ರಾದೇಶಿಕ ಸಮಿತಿಯ ಮೇಲಿರುವ ಆತ್ಮೀಯತೆಗೆ ಸಾಕ್ಷಿಯಾಗಿದೆ. ಕಾರ್ಯಕ್ರಮದ ವೇದಿಕೆಯಲ್ಲಿ ಉಮಾ ಸತೀಶ್ ಶೆಟ್ಟಿ ಅವರ ವೇದಿಕೆ ನಿರ್ವಹಣೆ ಮನಸ್ಸಿಗೆ ಸಂತೋಷ ನೀಡಿತು. ಕಾರ್ಯಕ್ರಮದ ಅಚ್ಚುಕಟ್ಟು, ಆತ್ಮೀಯತೆ ಮತ್ತು ಸಂಘಟನೆಯ ಒಗ್ಗಟ್ಟು ವಿಶೇಷವಾಗಿ ಗಮನ ಸೆಳೆಯಿತು .ಬಂಟರ ಸಂಘ ಮುಂಬಯಿಯನ್ನು ಇಂದಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆಸುವಲ್ಲಿ ಅನೇಕ ಮಹಾದಾನಿಗಳ ಕೊಡುಗೆ ಮಹತ್ವದ್ದಾಗಿದೆ. ಸಂಘ ಸಮಾಜದ ವಿವಿಧ ಕ್ಷೇತ್ರಗಳಿಗೆ ನೆರವಾಗುವ ರೀತಿಯಲ್ಲಿ ತನ್ನ ಸೇವಾ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ . ಸಂಘಕ್ಕೆ ಸೇವೆ ಮಾಡಿದ ಐಕಳ ಹರೀಶ್ ಶೆಟ್ಟಿ ಅವರು ಅತ್ಯುತ್ತಮ ಸಂಘಟನಾ ಚತುರರಾಗಿದ್ದು, ಬಂಟ ಸಮಾಜವನ್ನು ಒಗ್ಗೂಡಿಸುವಲ್ಲಿ ಅವರ ಕೊಡುಗೆ ಅಪಾರ. ಅವರೊಂದಿಗೆ ಶಶಿಧರ ಶೆಟ್ಟಿ ಬರೋಡ ಅವರು ಕೂಡ ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿರುವ ವ್ಯಕ್ತಿಯಾಗಿದ್ದು, ಸಮಾಜಮುಖಿ ಕಾರ್ಯಗಳಿಗೆ ಸದಾ ಬೆಂಬಲ ನೀಡುತ್ತಿರುವುದು ಶ್ಲಾಘನೀಯ. ಪ್ರಾದೇಶಿಕ ಸಮಿತಿಯ ಕಾರ್ಯ ಚಟುವಟಿಕೆಗಳಿಗೆ ಶಶಿಧರ ಶೆಟ್ಟಿ ಇನ್ನಂಜೆಯವರ ಸಹಕಾರವನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನಪಿಸಿಕೊಳ್ಳಬೇಕು. ವಸಾಯಿ -ಡಹಾಣು ಪ್ರಾದೇಶಿಕ ಸಮಿತಿಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಕಾರ್ಯಾಧ್ಯಕ್ಷರಾದ ಮಂಜುನಾಥ್ ಶೆಟ್ಟಿ ಕೊಡ್ಲಾಡಿ, ಮಹಿಳಾ ವಿಭಾಗದ ಅರುಣಾ ಶೆಟ್ಟಿ ಹಾಗೂ ಯುವ ವಿಭಾಗದ ವರ್ಷ ಶೆಟ್ಟಿ ಅವರ ಕಾರ್ಯವೈಖರಿ ಶ್ಲಾಘನೀಯವಾಗಿದೆ. ಎಲ್ಲ ವಿಭಾಗಗಳನ್ನು ಒಗ್ಗೂಡಿಸಿಕೊಂಡು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿರುವುದು ಸಂಘಟನೆಯ ಶಕ್ತಿಯನ್ನು ತೋರಿಸುತ್ತಿದೆ. ಬಂಟರ ಸಂಘ ಮುಂಬಯಿ ಇಂದು 99ನೇ ವರ್ಷದ ಸಂಭ್ರಮದಲ್ಲಿದೆ. 2027ರಲ್ಲಿ 100ನೇ ವರ್ಷದ ಶತಮಾನೋತ್ಸವವನ್ನು ಆಚರಿಸಲು ನಾವು ಹೆಮ್ಮೆಯಿಂದ ಸಜ್ಜಾಗುತ್ತಿದ್ದೇವೆ. ಈ ಐತಿಹಾಸಿಕ ಪಯಣದ ಹಿಂದೆ ದಾನಿಗಳ ಕೊಡುಗೆ, ಪದಾಧಿಕಾರಿಗಳ ಪರಿಶ್ರಮ, ಪ್ರಾದೇಶಿಕ ಸಮಿತಿಗಳ ಸಹಕಾರ ಹಾಗೂ ಸಮಾಜ ಬಾಂಧವರ ಪ್ರೀತಿ-ವಿಶ್ವಾಸವೇ ಪ್ರಮುಖ ಶಕ್ತಿಯಾಗಿದೆ. ಸಂಘಟನೆಯ ಮೂಲಕ ಸಮಾಜದ ಎಲ್ಲರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ, ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ಕಟ್ಟಿಕೊಡುವ ಸಂಕಲ್ಪದೊಂದಿಗೆ ಬಂಟರ ಸಂಘ ಮುಂಬಯಿ ಮುನ್ನಡೆಯುತ್ತಿದೆ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿ ಆರ್ಗಾನಿಕ್ ಕೆಮಿಕಲ್ ಲಿಮಿಟೆಡ್ ತೋನ್ಸೆ ಆನಂದ ಎಮ್ ಶೆಟ್ಟಿ ಮಾತನಾಡುತ್ತಾ, ನಮ್ಮ ಯುವ ಸಮುದಾಯ ಧೈರ್ಯದಿಂದ ಸಾಮಾಜಿಕ ಸೇವೆಗಳನ್ನು, ಉದ್ಯಮಗಳನ್ನು ಮಾಡಬೇಕು. ಮೊಬೈಲ್‌ಗಳನ್ನು ನೀಡದೆ ಅವರಿಗೆ ದೇಶ ಸೇವೆಯ ಬಗ್ಗೆ ಮತ್ತು ನಮ್ಮ ಸಂಸ್ಕೃತಿ, ಸಂಸ್ಕಾರದ ಬಗ್ಗೆ ಅರಿವು ಮೂಡಿಸಬೇಕು ಎಂದರು.

ವಿಶೇಷ ಅತಿಥಿ ಜಾಗತಿಕ ಬಂಟರ ಸಂಘಗಳ ಒಕ್ಕೂಟ ಉಪಾಧ್ಯಕ್ಷ ಕರ್ನಿರೆ ವಿಶ್ವನಾಥ್ ಶೆಟ್ಟಿ ಮಾತನಾಡಿ, ನಾನು ಈ ಪ್ರದೇಶದಿಂದಲೇ ನನ್ನ ಬದುಕು ಪ್ರಾರಂಭ ಮಾಡಿದ್ದು. ಇಲ್ಲಿಂದಲೇ ಬಂಟರ ಸಂಘದ ಸೇವಾ ಕಾರ್ಯಗಳು ಪ್ರಾರಂಭಗೊಂಡಿದ್ದು. ಈ ಗ್ರಾಮೀಣ ಪ್ರದೇಶದಿಂದ ಬಂಟರ ಸಂಘಕ್ಕೆ ಹೋಗಿ ಅಲ್ಲಿ ನಮ್ಮ ಸಂಘಟನಾ ಚಾತುರ್ಯವನ್ನು ತೋರಿಸಿದ್ದೇವೆ. ನಮ್ಮ ಸೇವಾ ಕಾರ್ಯದ ಸಂದರ್ಭದಲ್ಲಿ ಬಂಟರ ಸಂಘ ಅಭಿವೃದ್ಧಿಯ ಪಥದತ್ತ ಸಾಗಿದೆ ಎನ್ನುವುದು ನಮಗೆ ಅಭಿಮಾನ ಎಂದು ನುಡಿದರು.

ಬಂಟರ ಸಂಘ ಮುಂಬೈ ಇದರ ಪ್ರಧಾನ ಕಾರ್ಯದರ್ಶಿಯಾಗಿ ಗೌರವಾನ್ವಿತ ಪ್ರಾಯೋಜಕರಾದ ಆರ್ ಕೆ ಶೆಟ್ಟಿ ಮಾತನಾಡುತ್ತಾ, ಪ್ರಾದೇಶಿಕ ಸಮಿತಿಯಲ್ಲಿ ಬಹಳ ಶಿಸ್ತುಬದ್ಧವಾಗಿ ಪದವಿಯನ್ನು ಸ್ವೀಕರಿಸಿ ಸಮಾಜದ ಸೇವೆಯನ್ನು ಮಾಡಿದ ಎಲ್ಲರೂ ಅಭಿನಂದನಾರ್ಹರು. ನನ್ನ ಎಲ್ಲಾ ಸಹಕಾರವಿದೆ ಎಂದರು.

ಮುಖ್ಯ ಅತಿಥಿ ಮಾಲ್ಬಾನ್ ತಡ್ಕ ಗ್ರೂಪ್ ಆಫ್ ಹೋಟೆಲ್ಸ್ ಆದರ್ಶ್ ಶೆಟ್ಟಿ ಹಾಲಾಡಿ ಮಾತನಾಡಿ, ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರು ನಮ್ಮ ಊರಿನವರು. ಅವರ ಸೇವಾಕಾರ್ಯಗಳು ಸಮಾಜಕ್ಕೆ ಇನ್ನಷ್ಟು ಆದರ್ಶವಾಗಲಿ ಎಂದು ಶುಭ ಹಾರೈಸಿದರು.

ವೇದಿಕೆಯಲ್ಲಿ ಅತಿಥಿ ಗಣ್ಯರಾಗಿ ಮೆರಿಟ್ ಹಾಸ್ಪಿಟಲಿಟಿ ಪ್ರವೇಟ್ ಲಿಮಿಟೆಡ್‌ನ ಅಶೋಕ್ ಶೆಟ್ಟಿ ಬೆಳ್ಮಾಡಿ, ಬಂಟರ ಸಂಘ ಮುಂಬಯಿ ಇದರ ಉಪಾಧ್ಯಕ್ಷರು ಮಹೇಶ್ ಶೆಟ್ಟಿ (ಬಾಬಾ ಗ್ರೂಪ್ ), ಗೌರವ ಪ್ರಧಾನ ಕಾರ್ಯದರ್ಶಿ ಡಾ. ಆರ್‌ಕೆ ಶೆಟ್ಟಿ ,ಗೌರವ ಕೋಶಾಧಿಕಾರಿ ರಮೇಶ್ ಶೆಟ್ಟಿ, ಜೊತೆ ಕಾರ್ಯದರ್ಶಿ ಗಿರೀಶ್ ಶೆಟ್ಟಿ ತೆಳ್ಳಾರ್, ಜೊತೆ ಕೋಶಾಧಿಕಾರಿ ಶಶಿಧರ ಶೆಟ್ಟಿ ಇನ್ನಂಜೆ , ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಚಿತ್ರಾ ಆರ್‌ಶೆಟ್ಟಿ, ಯುವ ವಿಭಾಗದ ಉಪಕಾರ್ಯಾಧ್ಯಕ್ಷ ತಾರಾನಾಥ್ ಶೆಟ್ಟಿ ಹಾಗೂ ವಸಾಯಿ -ಡಹಾಣು ಪ್ರಾದೇಶಿಕ ಸಮಿತಿಯ ಉಪ ಕಾರ್ಯಾಧ್ಯಕ್ಷರು ಪ್ರವೀಣ್ ಶೆಟ್ಟಿ ಕಣಂಜಾರ್,ಕಾರ್ಯದರ್ಶಿ ಜಗನಾಥ್ ಡಿ ಶೆಟ್ಟಿ ಪಳ್ಳಿ, ಕೋಶಾಧಿಕಾರಿ ವಿಜಯ್ ಎಮ್ ಶೆಟ್ಟಿ, ಜೊತೆ ಕಾರ್ಯದರ್ಶಿ ನಾರಾಯಣ ಶೆಟ್ಟಿ , ಜೊತೆ ಕೋಶಾಧಿಕಾರಿ ರತೀಶ್ ಶೆಟ್ಟಿ ,ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ ಕಾರ್ಯಾಧ್ಯಕ್ಷ ವಿಜಯ್ ಶೆಟ್ಟಿ ಕುತ್ತೆತ್ತೂರು, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಅರುಣಾ ಶೆಟ್ಟಿ ನೀರೆ, ಯುವ ವಿಭಾಗದ ಕಾರ್ಯಾಧ್ಯಕ್ಷೆ ವರ್ಷಾ ಶೆಟ್ಟಿ , ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಉದ್ಯಮಿ ಶಶಿಧರ ಶೆಟ್ಟಿ ಬರೋಡ ಅವರನ್ನು ವಿಶೇಷ ರೀತಿಯಲ್ಲಿ ಬಂಟರ ಸಂಘ ಮುಂಬೈ ವಸಾಯಿ-ಡಹಾಣು ಪ್ರಾದೇಶಿಕ ಸಮಿತಿಯ ವತಿಯಿಂದ ಸನ್ಮಾನಿಸಲಾಯಿತು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆ ಮಾಡಿದ. ಹರೀಶ್ ಶೆಟ್ಟಿ ಗುರ್ಮೆ (ಎಮ್ ಎಮ್ ಗ್ರೂಪ್ ಆಫ್ ಹೋಟೆಲ್ ), ಪಾಂಡು ಎಲ್ ಶೆಟ್ಟಿ (ಫಾರ್ಮ್ ಹೌಸ್ ಗ್ರೂಪ್ ಆಫ್ ಹೋಟೆಲ್ ),ರತ್ನಾಕರ್‌ಶೆಟ್ಟಿ (ಡ್ರೀಮ್ ಲ್ಯಾಂಡ್ ಹೋಟೆಲ್ ವಸಾಯಿ ), ಸುರೇಶ್ ಶೆಟ್ಟಿ ಕೊಪ್ಪ (ಹೋಟೆಲ್ ವಿವಾಂತ ವಿರಾರ್) ,ಕರ್ನೂರು ಶಂಕರ ಆಳ್ವ (ಅಧ್ಯಕ್ಷರು ವಸಾಯಿ ಕರ್ನಾಟಕ ಸಂಘ ) , ರಘುರಾಮ್ ರೈ (ಹೋಟೆಲ್ ಸರೋವರ ಬೊಯ್ಸರ್), ರಮೇಶ್ ಶೆಟ್ಟಿ ಕಾಪು (ಹೋಟೆಲ್ ಆಮಂತ್ರಣ ನಾಲಾಸೋಪಾರ ),ಸುರೇಂದ್ರ ಶೆಟ್ಟಿ (ಹೋಟೆಲ್ ಸಾಯಿಪ್ರಸ್ಥ ನಾಲಾಸೋಪಾರ ), ಮಧುಕರ ಶೆಟ್ಟಿ (ಹೋಟೆಲ್ ಮೀಟ್‌ಪಾಯಿಂಟ್ ನಾಲಾಸೋಪಾರ ), ಉದ್ಯಮಿ ವಿನೋದ್ ಕಿಶಾನಿ ಹಾಗೂ ಪ್ರತೀಕ್ ಕಿಸಾನಿ ಇವರೆಲ್ಲರನ್ನೂ ಗೌರವಿಸಲಾಯಿತು. ಹಾಗೂ ಬಿಗ್‌ಬಾಸ್ ಖ್ಯಾತಿ ರಕ್ಷಿತಾ ಶೆಟ್ಟಿಯವರನ್ನು ಸನ್ಮಾನಿಲಾಯಿತು.

ಕಾರ್ಯಕ್ರಮದ ಸಾರಥಿಗಳು ಗೌರವಾನ್ವಿತ ಪ್ರಾಯೋಜಕರು ಶಶಿಧರ ಶೆಟ್ಟಿ‌ಇನ್ನಂಜೆ ಹಾಗೂ ಡಾ. ಆರ್‌ಕೆ ಶೆಟ್ಟಿ ಅವರು ಅಮೂಲ್ಯ ಸಹಕಾರ ನೀಡಿದ್ದಾರೆ.

ಕಾರ್ಯಕ್ರಮವನ್ನು ಪ್ರಾದೇಶಿಕ ಸಮಿತಿಯ ಉಪಕಾರ್ಯಾಧ್ಯಕ್ಷ ಪ್ರವೀಣ್ ಶೆಟ್ಟಿ ಕಣಂಜಾರ್, ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ ಕಾರ್ಯಾಧ್ಯಕ್ಷ ವಿಜಯ್ ಶೆಟ್ಟಿ ಕುತ್ತೆತ್ತೂರು ನಿರೂಪಿಸಿದರು. ಜಗನ್ನಾಥ್ ಶೆಟ್ಟಿ ಪಳ್ಳಿ ವಂದಿಸಿದರು.

ಸಮಿತಿಯ ಮಹಿಳಾ ವಿಭಾಗದ ವತಿಯಿಂದ ಆಕರ್ಷಕ ಫ್ಯಾಷನ್ ಶೋ ಹಾಗೂ ಜಾನಪದ ಗೀತೆಗಳು , ಯುವ ವಿಭಾಗದ ವತಿಯಿಂದ ವೈವಿಧ್ಯಮಯ ನೃತ್ಯ ಕಾರ್ಯಕ್ರಮಗಳು, ನೃತ್ಯ, ಫ್ಯಾಷನ್ ಶೋ, ಸಾಂಸ್ಕೃತಿಕ ಕಾರ್ಯಕ್ರಮವು ವಾರ್ಷಿಕೋತ್ಸವದ ಪ್ರಮುಖ ಆಕರ್ಷಣೆಯಾಗಿತ್ತು. ಕೊನೆಯಲ್ಲಿ ಚೈತನ್ಯ ಕಲಾವಿದರು ಬೈಲೂರು, ಪ್ರಸನ್ನ ಶೆಟ್ಟಿ ಅವರ ಸಾರಥ್ಯದ ನಾಟಕ ತಂಡದಿಂದ ಜನಮೆಚ್ಚುಗೆಗೆ ಪಾತ್ರವಾಗಿರುವ 'ರಾಘು ಮಾಸ್ತ್ರು'ನಾಟಕ ಪ್ರದರ್ಶನಗೊಂಡಿತು.

ಕಾರ್ಯಕ್ರಮದ ಯಶಸ್ವಿಗೆ ಪ್ರಾದೇಶಿಕ ಸಮಿತಿಯ ಪದಾಧಿಕಾರಿಗಳು, ಉಪ ಸಮಿತಿಯ ಕಾರ್ಯಾಧ್ಯಕ್ಷರುಗಳು, ಮಹಿಳಾ ವಿಭಾಗ ,ಯುವ ವಿಭಾಗದ ಕಾರ್ಯಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ಶ್ರಮಿಸಿದರು.

### ಸಂಘವನ್ನು ಬೆಳೆಸಿದವರನ್ನು , ಹಿರಿಯರನ್ನು ಕಡೆಗಣಿಸಬಾರದು : ಐಕಳ ಹರೀಶ್ ಶೆಟ್ಟಿ



ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ದೀಪ ಪ್ರಜ್ವಲಿಸಿ ಬಳಿಕ ಮಾತನಾಡಿ, ಬಂಟರ ಸಂಘ ಮುಂಬೈ ಹಾಗೂ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ವಿವಿಧ ಸಮಾಜಮುಖಿ ಕಾರ್ಯಗಳಿಗೆ ,ದಾನಿಗಳ ಸಹಕಾರವೇ ದೊಡ್ಡ ಆಸ್ತಿ. ಪ್ರಾದೇಶಿಕ ಸಮಿತಿಗಳ ಮೂಲಕ ಬಂಟ ಸಮಾಜದ ಸದಸ್ಯರು ಭೇದಭಾವವಿಲ್ಲದೆ ಒಂದೇ ವೇದಿಕೆಯಲ್ಲಿ ಒಗ್ಗೂಡಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಿದೆ . ಇದು ಭಾವೈಕ್ಯ ಸಂಭ್ರಮದ ಕಾರ್ಯಕ್ರಮ. ನಮ್ಮೆಲ್ಲರ ಉದ್ದೇಶ ಬಂಟರು ಒಂದಾಗಿ, ಒಗ್ಗಟ್ಟಾಗಿ ನಿಲ್ಲಬೇಕು ಎಂಬುದೇ ಆಗಿದೆ. ವಸಾಯಿ- ಡಹಾಣು ಪ್ರಾದೇಶಿಕ ಸಮಿತಿ ಕಳೆದ 17 ವರ್ಷಗಳಿಂದ ನಿರಂತರವಾಗಿ ತನ್ನ ಸಮಾಜಮುಖಿ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಅವಧಿಯಲ್ಲಿ ಯಾರು ಕಾರ್ಯಾಧ್ಯಕ್ಷರಾಗಿದ್ದರೂ ಅವರಿಗೆ ಸಂಪೂರ್ಣ ಸಹಕಾರ ನೀಡಿ, ಸಂಸ್ಥೆಯನ್ನು ಒಂದು ಮಗುವಿನಂತೆ ಲಾಲಿಸಿ, ಪಾಲಿಸಿ, ಬೆಳೆಸಿ ದೊಡ್ಡದಾಗಿಸುವಲ್ಲಿ ಶಶಿಧರ ಶೆಟ್ಟಿ ಇನ್ನಂಜೆ ಅವರ ಪಾತ್ರ ಮಹತ್ವದ್ದಾಗಿದೆ .ಯಾವುದೇ ಪ್ರಾದೇಶಿಕ ಸಮಿತಿಯನ್ನು ಕಡೆಗಣಿಸಬಾರದು. ಪ್ರಾದೇಶಿಕ ಸಮಿತಿಗಳೇ ಸಂಘಟನೆಯ ನಿಜವಾದ ಬಲ. ನನ್ನ ಮುಖ್ಯ ಉದ್ದೇಶ ಬಂಟ ಸಮಾಜದ ಎಲ್ಲರನ್ನು ಒಂದಾಗಿ ಸೇರಿಸಿ, ಒಗ್ಗಟ್ಟಿನಿಂದ ಮುನ್ನಡೆಸುವುದು. ಬಂಟರ ಸಾಮರ್ಥ್ಯ ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಬೇಕು. ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಸಮಾಜಮುಖಿ ಕಾರ್ಯಗಳಿಗೆ ಶಶಿಧರ ಶೆಟ್ಟಿ ಬರೋಡ ಅವರಂತಹ ದಾನಿಗಳು ಹಾಗೂ ಮಹಾದಾನಿಗಳು ಬೆನ್ನೆಲುಬಾಗಿ ನಿಂತಿದ್ದಾರೆ. ಇಲ್ಲಿ ನನ್ನದೇನೂ ಇಲ್ಲ. ಸಂಘಟನೆಯ ಯಾವುದೇ ಸಾಧನೆಯ ಹಿಂದೆ ದಾನಿಗಳು, ಮಹಾದಾನಿಗಳು ಮತ್ತು ಸಮಾಜದ ಸಹಕಾರವೇ ದೊಡ್ಡ ಆಸ್ತಿ. ಅವರ ಸಹಕಾರದಿಂದಲೇ ಇಂತಹ ಮಹತ್ತರ ಕಾರ್ಯಗಳನ್ನು ಮುಂದುವರಿಸಲು ಸಾಧ್ಯ. ಸಂಘವನ್ನು ಬೆಳೆಸಿದವರನ್ನು, ಹಿರಿಯರನ್ನು ಕಡೆಗಣಿಸಬಾರದು. ಬಂಟ ಸಮಾಜದ ಸಂಘಟನೆ ಬಲಗೊಳ್ಳಲು ಪ್ರಾದೇಶಿಕ ಸಮಿತಿಗಳು, ದಾನಿಗಳು ಹಾಗೂ ಸಮಾಜದ ಪ್ರತಿಯೊಬ್ಬರ ಸಹಕಾರ ಅಗತ್ಯ. ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಿದಾಗ ಮಾತ್ರ ಸಮಾಜದ ಶಕ್ತಿ ಮತ್ತಷ್ಟು ವೃದ್ಧಿಯಾಗುತ್ತದೆ ಎಂದು ನುಡಿದರು.


ಉಮಾ ಕೃಷ್ಣ ಶೆಟ್ಟಿ ಅವರನ್ನು ಗೌರವಿಸಿದಾಗ


ಆದರ್ಶ್ ಶೆಟ್ಟಿ ಹಾಲಾಡಿ ಅವರನ್ನು ಗೌರವಿಸಿದಾಗ

### ಸಂಘಟನೆ ಮತ್ತಷ್ಟು ಬಲಿಷ್ಠವಾಗಿ, ಸಮಾಜಮುಖಿ ಕಾರ್ಯಗಳ ಮೂಲಕ ನಾಡು-ನುಡಿಯ ಕೀರ್ತಿಯನ್ನು ಎತ್ತಿ ಹಿಡಿಯಲಿ : ಶಶಿಧರ ಶೆಟ್ಟಿ, ಬರೋಡ



ಶಶಿಧರ ಶೆಟ್ಟಿ ಬರೋಡ ಸನ್ಮಾನ ಸ್ವೀಕರಿಸಿ ಮಾತನಾಡಿ, ಬಂಟರ ಸಂಘ ಮುಂಬೈ ಇದರ ವಸಾಯಿ- ಡಹಾಣು ಪ್ರಾದೇಶಿಕ ಸಮಿತಿಯ ವತಿಯಿಂದ ಆಯೋಜಿಸಲಾದ ಭಾವೈಕ್ಯ ಸಂಭ್ರಮ ಕಾರ್ಯಕ್ರಮವು ಅತ್ಯಂತ ಅಚ್ಚುಕಟ್ಟಾಗಿ, ಅರ್ಥಪೂರ್ಣವಾಗಿ ಹಾಗೂ ವೈಭವದಿಂದ ನೆರವೇರಿಸಿದಿರಿ. ಕಾರ್ಯಕ್ರಮದ ಪ್ರತಿಯೊಂದು ಹಂತದಲ್ಲೂ ಸಂಘಟನೆಯ ಶಿಸ್ತು, ಒಗ್ಗಟ್ಟು ಹಾಗೂ ತುಳುನಾಡಿನ ಸಂಸ್ಕೃತಿಯ ಮೇಲಿನ ಅಭಿಮಾನ ಎದ್ದು ಕಾಣುತ್ತಿದೆ. ಕಾರ್ಯಕ್ರಮದ ಸಂದರ್ಭದಲ್ಲಿ ಗಣ್ಯರಿಗೆ ತುಳುನಾಡಿನ ಸಾಂಪ್ರದಾಯಿಕ ಶಾಲ್ ನೀಡಿ ಗೌರವಿಸುವ ಮೂಲಕ, ಸಮಿತಿಯು ಕಾರ್ಯಕ್ರಮದ ಸಂಭ್ರಮದ ಜೊತೆಗೆ ತುಳುನಾಡಿನ ನೆನಪನ್ನೂ ಜೀವಂತವಾಗಿರಿಸಿದೆ . ವಿದೇಶಿ ನೆಲದಲ್ಲಿದ್ದರೂ ನಮ್ಮ ನಾಡು, ನುಡಿ, ಸಂಸ್ಕೃತಿ ಮತ್ತು ಪರಂಪರೆಯನ್ನು ಮರೆಯದೆ ಮುಂದಿನ ಪೀಳಿಗೆಗೆ ಪರಿಚಯಿಸುವ ಇಂತಹ ಕಾರ್ಯಗಳು ನಿಜಕ್ಕೂ ಶ್ಲಾಘನೀಯ. ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿ ಅವರ ಅಧ್ಯಕ್ಷತೆಯ ಅವಧಿಯಲ್ಲಿ ವಸಾಯಿ-ಡಹಾಣು ಪ್ರಾದೇಶಿಕ ಸಮಿತಿಯ ಸ್ಥಾಪನೆಯಾಗಿ, ಇಂದು ಅದು ತನ್ನ 17ನೇ ವರ್ಷದ ಸೇವಾ ಪಯಣಕ್ಕೆ ಹೆಮ್ಮೆಯಿಂದ ಕಾಲಿಟ್ಟಿದೆ. ಈ ಅವಧಿಯಲ್ಲಿ ಶಿಕ್ಷಣ, ಸಾಂಸ್ಕೃತಿಕ, ಸಾಮಾಜಿಕ, ಕ್ರೀಡಾ ಹಾಗೂ ಸಮಾಜಮುಖಿ ಚಟುವಟಿಕೆಗಳ ಮೂಲಕ ಸಮಿತಿಯು ತನ್ನದೇ ಆದ ಛಾಪನ್ನು ಮೂಡಿಸಿದೆ. ಈ ಸಂದರ್ಭದಲ್ಲಿ ನನಗೆ ನೀಡಿದ ಸನ್ಮಾನವನ್ನು ನಾನು ಎಂದಿಗೂ ಮರೆಯಲಾರೆ. ಸನ್ಮಾನವೆಂದರೆ ಕೇವಲ ಗೌರವದ ಕ್ಷಣವಲ್ಲ; ಅದರ ಹಿಂದೆ ಇರುವ ಪ್ರೀತಿ, ಆತ್ಮೀಯತೆ ಮತ್ತು ಸಂಘಟನೆಯ ಬಂಧವನ್ನು ಪ್ರತಿಬಿಂಬಿಸುವ ಅಮೂಲ್ಯ ನೆನಪು. ನನಗೆ ನೀಡಲಾದ ಪ್ರತಿಯೊಂದು ನೆನಪಿನ ಕಾಣಿಕೆಯೂ ನನಗೆ ಅತ್ಯಂತ ಮಹತ್ವದ್ದು. ಅವುಗಳ ಮೌಲ್ಯ ವಸ್ತುವಿನಲ್ಲಿಲ್ಲ; ಅದರ ಹಿಂದೆ ಅಡಗಿರುವ ಪ್ರೀತಿ ಮತ್ತು ಗೌರವದಲ್ಲಿದೆ.ವಿಶೇಷವಾಗಿ ಶಶಿಧರ ಶೆಟ್ಟಿ ಇನ್ನಂಜೆ ಅವರೊಂದಿಗಿನ ನನ್ನ ಸಂಬಂಧ ಅತ್ಯಂತ ಅವಿನಾಭಾವವಾದುದು. ನಮ್ಮಿಬ್ಬರ ಹೆಸರು ಒಂದೇ ಎಂಬುದು ಒಂದು ವಿಶೇಷವಾದರೆ, ನನ್ನ ಮಗಳ ಹೆಸರು ಮತ್ತು ಅವರ ಮಗಳ ಹೆಸರು ಕೂಡ ಒಂದೇ ಎನ್ನುವುದು ಮತ್ತೊಂದು ಅಪೂರ್ವ ಸಾಮ್ಯತೆ. ಅಷ್ಟೇ ಅಲ್ಲದೆ, ನಮ್ಮಿಬ್ಬರ ಅಡಿಗಲ್ಲು ಕೂಡ ಒಂದೇ ಎಂಬ ಆತ್ಮೀಯ ನಂಟು ನಮ್ಮ ಸಂಬಂಧವನ್ನು ಇನ್ನಷ್ಟು ಗಾಢಗೊಳಿಸಿದೆ.ಇಂತಹ ಅನೇಕ ಸಾಮ್ಯಗಳ ನಡುವೆ ಬೆಳೆದಿರುವ ನಮ್ಮ ಸ್ನೇಹ ಕೇವಲ ಪರಿಚಯದ ಸಂಬಂಧವಲ್ಲ; ಅದು ಪ್ರೀತಿ, ವಿಶ್ವಾಸ ಮತ್ತು ಆತ್ಮೀಯತೆಯಿಂದ ಬೆಸೆದ ಅವಿನಾಭಾವ ಬಂಧ. ಅವರು ನನ್ನ ಮೇಲೆ ತೋರಿಸಿದ ಪ್ರೀತಿ, ಗೌರವ ಮತ್ತು ಆತ್ಮೀಯತೆಗೆ ನಾನು ಸದಾ ಚಿರಋಣಿಯಾಗಿರುತ್ತೇನೆ.ಬಂಟರ ಸಂಘ ಮುಂಬೈ ವಸಾಯಿ - ಡಹಾಣು ಪ್ರಾದೇಶಿಕ ಸಮಿತಿಯ 17 ವರ್ಷಗಳ ಸೇವಾ ಪಯಣ ಇನ್ನಷ್ಟು ಯಶಸ್ವಿಯಾಗಿ ಮುಂದುವರಿಯಲಿ. ಸಂಘಟನೆ ಮತ್ತಷ್ಟು ಬಲಿಷ್ಠವಾಗಿ, ಸಮಾಜಮುಖಿ ಕಾರ್ಯಗಳ ಮೂಲಕ ನಾಡು-ನುಡಿಯ ಕೀರ್ತಿಯನ್ನು ಎತ್ತಿಹಿಡಿಯಲಿ ಎಂಬುದು ನನ್ನ ಹಾರೈಕೆ ಎಂದು ಶಶಿಧರ ಶೆಟ್ಟಿ ಬರೋಡ ಸನ್ಮಾನಕ್ಕೆ ಉತ್ತರ ನೀಡಿದರು.

### ಬಂಟರ ಸಂಘಕ್ಕೆ ಐಕಳ ಹರೀಶ್ ಶೆಟ್ಟಿಯವರ ಕೊಡುಗೆ ಅವಿಸ್ಮರಣೀಯ : ಶಶಿಧರ್ ಶೆಟ್ಟಿ ಇನ್ನಂಜೆ



ಕಾರ್ಯಕ್ರಮದ ಸಾರಥಿಗಳು ಗೌರವಾನ್ವಿತ ಪ್ರಾಯೋಜಕರಾದ ಶಶಿಧರ ಶೆಟ್ಟಿ ಇನ್ನಂಜೆ ಮಾತನಾಡಿ, ಪ್ರಾದೇಶಿಕ ಸಮಿತಿಗಳ ಮೂಲಕ ಬಂಟ ಸಮಾಜವನ್ನು ಒಗ್ಗೂಡಿಸಿದ ಮಹತ್ವದ ಸಮಾಜ ಸೇವೆಗೆ ಐಕಳ ಹರೀಶ್ ಶೆಟ್ಟಿಯವರು ನೀಡಿರುವ ಕೊಡುಗೆಗಳನ್ನು ಯಾರೂ ಮರೆಯುವಂತಿಲ್ಲ. ಅವರ ದೂರದೃಷ್ಟಿ ಹಾಗೂ ಸಂಘಟನಾ ಚಿಂತನೆಯ ಫಲವಾಗಿ ಸ್ಥಾಪನೆಯಾದ ಪ್ರಾದೇಶಿಕ ಸಮಿತಿಗಳ ಮೂಲಕ ಇಂದು ಬಂಟ ಸಮಾಜದ ಅನೇಕ ಕುಟುಂಬಗಳು ಒಂದೇ ವೇದಿಕೆಯಲ್ಲಿ ಒಗ್ಗೂಡಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವಂತಾಗಿದೆ . ಬಂಟ ಸಮಾಜವನ್ನು ಸಂಘಟಿಸುವ ನಿಟ್ಟಿನಲ್ಲಿ ಪ್ರಾದೇಶಿಕ ಸಮಿತಿಗಳ ಸ್ಥಾಪನೆ ಒಂದು ಮಹತ್ವದ ಹೆಜ್ಜೆಯಾಗಿದೆ. ಇದರ ಮೂಲಕ ಸ್ಥಳೀಯ ಮಟ್ಟದಲ್ಲಿ ಶಿಕ್ಷಣ, ವೈದ್ಯಕೀಯ, ಸಾಂಸ್ಕೃತಿಕ, ಕ್ರೀಡೆ ಹಾಗೂ ಸಮಾಜ ಸೇವಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವಾಗಿದೆ. ಈ ಸಂಘಟನಾ ಪರಂಪರೆಯ ಮುಂದುವರಿದ ಹೆಜ್ಜೆಯಾಗಿದೆ. ಇದೇ ಸಂದರ್ಭದಲ್ಲಿ ಮಹಾದಾನಿ ಶಶಿಧರ ಶೆಟ್ಟಿ ಬರೋಡ ಅವರು ಸನ್ಮಾನ ಸ್ವೀಕರಿಸಿದ ಕ್ಷಣ ಅತ್ಯಂತ ಸಂತೋಷ ತಂದಿದೆ. ಸಮಾಜದ ಅಭಿವೃದ್ಧಿಗಾಗಿ ಅವರು ನೀಡುತ್ತಿರುವ ಕೊಡುಗೆ ಹಾಗೂ ಸಹಕಾರ ಶ್ಲಾಘನೀಯವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಬಂಟರ ಸಂಘ ಮುಂಬೈಯಿಂದ -ವಸಾಯಿ -ಡಹಾಣು ಪ್ರಾದೇಶಿಕ ಸಮಿತಿಗೆ ಸುಮಾರು 1.50 ಕೋಟಿ ರೂ. ಧನಸಹಾಯ ದೊರೆತಿದೆ. ಈ ಸಹಕಾರದಿಂದ ಪ್ರಾದೇಶಿಕ ಸಮಿತಿಯ ವಿವಿಧ ಸಮಾಜಮುಖಿ ಕಾರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವಾಗಿದೆ. ಒಂದು ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆಯೋಜಿಸಲು ಸುಮಾರು 25 ಲಕ್ಷದಷ್ಟು ವೆಚ್ಚವಾಗುವ ಸಂದರ್ಭದಲ್ಲಿ ಐಕಳ ಹರೀಶ್ ಶೆಟ್ಟಿಯವರು ಯಾವುದೇ ಕಾರ್ಯಕ್ಕೆ ಮುಂದಾದಾಗ ಸಮಾಜದ ಮಹಾದಾನಿಗಳು ಹಾಗೂ ದಾನಿಗಳು ಸ್ವಯಂಪ್ರೇರಿತರಾಗಿ ಕೈಜೋಡಿಸುವುದು ಅವರ ಮೇಲಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ . ಕರ್ನಿರೆ ವಿಶ್ವನಾಥ್ ಶೆಟ್ಟಿ ಹಾಗೂ ಐಕಳ ಹರೀಶ್ ಶೆಟ್ಟಿಯವರು ನಮ್ಮ ವಸಯಿಯವರೇ ಎಂಬುದು ನಮಗೆ ಹೆಮ್ಮೆಯ ಸಂಗತಿ. ಅವರ ಮಾರ್ಗದರ್ಶನ, ಪ್ರೋತ್ಸಾಹ ಹಾಗೂ ಸಮಾಜದ ಮೇಲಿನ ಕಾಳಜಿ ನಮಗೆ ಸದಾ ಪ್ರೇರಣೆಯಾಗಿದೆ. ಅವರಂತಹ ಹಿರಿಯರ ಸಹಕಾರದಿಂದಲೇ ಪ್ರಾದೇಶಿಕ ಸಮಿತಿ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ಮುನ್ನಡೆಸಲು ಸಾಧ್ಯವಾಗಿದೆ . ಕಾರ್ಯಕ್ರಮದ ಯಶಸ್ಸಿಗಾಗಿ ಬೆಳಗ್ಗಿನಿಂದಲೇ ನಮ್ಮೊಂದಿಗೆ ಇದ್ದು, ವಿವಿಧ ರೀತಿಯಲ್ಲಿ ಸಹಕಾರ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲ ಗಣ್ಯರು, ದಾನಿಗಳು, ಪದಾಧಿಕಾರಿಗಳು, ಸದಸ್ಯರು ಹಾಗೂ ಸಮಾಜ ಬಾಂಧವರಿಗೆ ಶಶಿಧರ ಶೆಟ್ಟಿ ಇನ್ನಂಜೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿ ಸಂಘಟನೆ, ಸಹಕಾರ ಮತ್ತು ಸಮಾಜ ಸೇವೆಯ ಮೂಲಕ ಬಂಟ ಸಮಾಜವನ್ನು ಇನ್ನಷ್ಟು ಬಲಿಷ್ಠಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿ. ಹಿರಿಯರು ಹಾಕಿಕೊಟ್ಟ ದಾರಿಯಲ್ಲಿ ಯುವ ಪೀಳಿಗೆಯನ್ನು ಜೊತೆಯಾಗಿ ಕೊಂಡೊಯ್ಯುವ ಮೂಲಕ ಸಮಾಜದ ಪ್ರಗತಿಗೆ ಕೈಜೋಡಿಸೋಣ ಎಂದು ಅವರು ಕರೆ ನೀಡಿದರು.

# 'ಶ್ರೀ ಬ್ರಾಹ್ಮೀ ಯಕ್ಷ ಕಲಾ ವೃಂದ ಹೆನ್ನಾಬೈಲು' ಅವರ ಮುಂಬಯಿ ಕಾರ್ಯಕ್ರಮ : 'ಸುಧನ್ವ ಮೋಕ್ಷ' ಯಕ್ಷಗಾನ ಬಯಲಾಟ

## ಎಲ್ಲಾ ಕಲೆಗಳನ್ನು ಮೀರಿ ನಿಲ್ಲಬಲ್ಲ ಏಕೈಕ ಕಲೆ ಎಂದರೆ ಅದು ಯಕ್ಷಗಾನ - ಪೊಲ್ಯ ಉಮೇಶ್ ಶೆಟ್ಟಿ

ನವಿಮುಂಬಯಿ, ಅ.4- ನಮ್ಮಲ್ಲಿ ಅಪಾರ ಬಗೆಯ ಕಲಾಪ್ರಕಾರಗಳಿವೆ. ಆದರೆ, ಅವೆಲ್ಲವನ್ನೂ ಮೀರಿ ನಿಲ್ಲಬಲ್ಲ ಏಕೈಕ ಕಲೆ ಎಂದರೆ ಅದು ಯಕ್ಷಗಾನ. ಇದು ಕೇವಲ ಕಣ್ಣಿಗೆ ಮಾತ್ರವಲ್ಲ, ಮನಸ್ಸಿಗೂ ಮುದ ನೀಡುತ್ತದೆ ಎಂದು ಹಿರಿಯ ವಿದ್ವಾಂಸ ಹಾಗೂ ಪ್ರಸಿದ್ಧ ಅರ್ಥಧಾರಿ ಪೊಲ್ಯ ಉಮೇಶ್ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.

ಅವರು ಅಕ್ಟೋಬರ್ 2ರ ಶುಕ್ರವಾರದಂದು ಮುಂಬಯಿಯ ನೆರುಲ್ ಸ್ಟರ್ಲಿಂಗ್ ಬ್ಯಾಂಕ್ವೆಟ್‌ನಲ್ಲಿ ವಿಶ್ವನಾಥ್ ಪೂಜಾರಿ ಹೆನ್ನಾಬೈಲು ಸಾರಥ್ಯದ 'ಶ್ರೀ ಬ್ರಾಹ್ಮೀ ಯಕ್ಷ ಕಲಾ ವೃಂದ ಹೆನ್ನಾಬೈಲು' ಇದರ ಮುಂಬಯಿ ಕಾರ್ಯಕ್ರಮದ ಅಂಗವಾಗಿ ಜರುಗಿದ 'ಸುಧನ್ವ ಮೋಕ್ಷ' ಯಕ್ಷಗಾನ ಬಯಲಾಟದ ಮಧ್ಯಂತರದಲ್ಲಿ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂದುವರಿದು ಮಾತನಾಡಿದ ಅವರು, ಈ ಸಂದರ್ಭದಲ್ಲಿ ಹೆನ್ನಾಬೈಲು ಸಂಜೀವ ಶೆಟ್ಟಿಯವರ ನೆನಪಾಗುತ್ತಿದೆ. ಹಿರಿಯ ಕಲಾವಿದರ ಊರಿನವರೇ ಆದ ಯುವ ಕಲಾವಿದನ ಶ್ರಮ ನಿಜಕ್ಕೂ ಶ್ಲಾಘನೀಯ. ಯಕ್ಷಗಾನವನ್ನು ಮನೆಯಲ್ಲಿ ಕುಳಿತು ಮೊಬೈಲ್ ಅಥವಾ ಜಾಲತಾಣಗಳಲ್ಲಿ (ಲೈವ್) ವೀಕ್ಷಿಸುವುದಕ್ಕಿಂತ ನೇರವಾಗಿ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿ, ಕಲಾವಿದರ ಸಮಕ್ಷಮದಲ್ಲಿ ಕಣ್ತುಂಬಿಕೊಳ್ಳುವುದೇ ಒಂದು ವಿಶೇಷ ಆನಂದ. ಕಲಾವಿದರ ಹೆಸರು ಈ ಸಮಾಜದಲ್ಲಿ ಅವರ ಅಳಿವಿನ ನಂತರವೂ ಅಚ್ಚಳಿಯದೆ ಸ್ಥಾಯಿಯಾಗಿ ಉಳಿಯುತ್ತದೆ ಎಂದರು.






ಕಲಾ ಪೋಷಕ ಜಯಪ್ರಕಾಶ್ ಆರ್. ಶೆಟ್ಟಿ ಮಾತನಾಡಿ, ಕಲಾವಿದರನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ನಮ್ಮ ಆದಾಯದ ಒಂದು ಭಾಗವನ್ನು ಇಂತಹ ಸತ್ಕಾರ್ಯಗಳಿಗೆ ಹಾಗೂ ಕಲೆಯ ಉಳಿವಿಗೆ ವಿನಿಯೋಗಿಸುವ ಪರಿಪಾಠ ನಮ್ಮದಾಗಬೇಕು ಎಂದರು.

ನೆರುಲ್ ಶ್ರೀ ಶನೀಶ್ವರ ಮಂದಿರದ ಧರ್ಮದರ್ಶಿ ರಮೇಶ್ ಎಂ. ಪೂಜಾರಿ ಶುಭ ಹಾರೈಸಿ, ಕಲಾವಿದರು ಒಂದರ್ಥದಲ್ಲಿ ದೇವರಿಗೆ ಸಮಾನರು. ಅವರಿಗೆ ಶ್ರೀ ದೇವರ ದಯೆ ಸದಾ ಇರಲಿ. ಈ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಿದ ತುಂಬಿದ ಪ್ರೇಕ್ಷಕ ವರ್ಗಕ್ಕೆ ಅಭಿನಂದನೆಗಳು ಎಂದು ನುಡಿದರು.

ಬಿಲ್ಲವರ ಎಸೋಸಿಯೇಶನ್ ಕಲ್ವಾ ಸ್ಥಳೀಯ ಕಚೇರಿಯ ಕಾರ್ಯಾಧ್ಯಕ್ಷ ಹರೀಶ್ ಸಾಲ್ಯಾನ್ ಬಜಗೋಳಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, ಕಲಾವಿದರ ನೈಪುಣ್ಯತೆಯನ್ನು ಕಂಡು ನಾವೆಲ್ಲರೂ ಕೊಂಡಾಡುತ್ತೇವೆ. ಆದರೆ, ಆ ಪ್ರದರ್ಶನದ ಹಿಂದಿರುವ ಅವರ ಕಷ್ಟ-ಕಾರ್ಪಣ್ಯ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಮನಗಂಡು ಅವರಿಗೆ ಆರ್ಥಿಕವಾಗಿ ಸಹಕರಿಸುವ ವಿಶಾಲ ಮನೋಭಾವ ನಮ್ಮದಾಗಬೇಕು ಎಂದು ಕರೆ ನೀಡಿದರು.

ವೇದಿಕೆಯಲ್ಲಿದ್ದ ಗಣ್ಯರೆಲ್ಲರನ್ನೂ ಕಲಾವಿದ ವಿಶ್ವನಾಥ್ ಹೆನ್ನಾಬೈಲು ಶಾಲು ಹೊದಿಸಿ, ಸ್ಮರಣಿಕ ಹಾಗೂ ಹೂಗುಚ್ಛ ನೀಡಿ ಗೌರವಿಸಿದರು. ಈ ಸಮಾರಂಭದಲ್ಲಿ ಪೊಲ್ಯ ಉಮೇಶ್ ಶೆಟ್ಟಿ, ಜಯಪ್ರಕಾಶ್ ಆರ್. ಶೆಟ್ಟಿ, ಧರ್ಮದರ್ಶಿ ರಮೇಶ್ ಎಂ. ಪೂಜಾರಿ, ಹರೀಶ್ ಸಾಲ್ಯಾನ್ ಬಜಗೋಳಿ, ಸತೀಶ್ ಶೆಟ್ಟಿ ನಂದ್ರೊಳ್ಳಿ, ಸುಕುಮಾರ್ ಶೆಟ್ಟಿ ಅಂಡಾರು, ಉಮೇಶ್ ಪೂಜಾರಿ, ತಾರಾ ಆರ್. ಬಂಗೇರ, ರಂಗ ಪೂಜಾರಿ, ಗಣೇಶ್ ಶೆಟ್ಟಿ ಕೆರಾಡಿ, ಸದಾನಂದ್ ಶೆಟ್ಟಿ ನಂದ್ರೋಳ್ಳಿ, ರಾಜೀವ್ ಪೂಜಾರಿ, ರತ್ನಾಕರ್ ಶೆಟ್ಟಿ ಹೊಸೂರು, ದಿನೇಶ್ ಮೊಗವೀರ, ಸಿ.ಎ. ಪೂಜಾರಿ ಹಾಗೂ ಸುಧಾಕರ್ ಪೂಜಾರಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಗಿರೀಶ್ ಸಿ. ಶೆಟ್ಟಿ, ಶ್ರೀಧರ್ ಪೂಜಾರಿ, ಪರಮೇಶ್ವರ್ ಪೂಜಾರಿ, ರಘುನಾಥ್ ಬಂಗೇರ, ಅದ್ಯಪಾಡಿ ಬಾಲಕೃಷ್ಣ ಶೆಟ್ಟಿ ಹಾಗೂ ತಂಡದ ಮುಂಬಯಿ ಸಂಚಾಲಕರಾದ ಸಂತೋಷ್ ಶೆಟ್ಟಿ ಬೆಳಕೊಡ್ಲು, ಸುಧೀರ್ ದೇವಾಡಿಗ ಮಹಾಬಲೇಶ್ವರ, ಉಷಾ ಆರ್. ಶೆಟ್ಟಿ ಹಾಗೂ ಬೆಂಗಳೂರಿನಿಂದ ಆಗಮಿಸಿದ್ದ ಪ್ರೇಮಾ ಅವರನ್ನು ವಿಶೇಷವಾಗಿ ಗೌರವಿಸಲಾಯಿತು. ಪ್ರಸಿದ್ಧ ತಾಳಮದ್ದಳೆ ಅರ್ಥಧಾರಿ ಸುರೇಶ್ ಶೆಟ್ಟಿ ನಂದ್ರೊಳ್ಳಿ ಅಂದಿನ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿ, ವಂದಿಸಿದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಶೇ.5ರಷ್ಟು ಪರೀಕ್ಷಾ ಶುಲ್ಕ ಹೆಚ್ಚಿಸಿ ಸರ್ಕಾರದ ಆದೇಶ



ಬೆಂಗಳೂರು, ಅ.4 - 2026-27ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ಪರೀಕ್ಷಾ ಶುಲ್ಕವನ್ನು ಶೇ.5ರಷ್ಟು ಹೆಚ್ಚಿಸಿ ಆದೇಶ ಹೊರಡಿಸಿದೆ.

ಹೊಸದಾಗಿ ಪರೀಕ್ಷೆ ಬರೆಯುವವರು, ಖಾಸಗಿ ಹಾಗೂ ಪುನರಾವರ್ತಿತ ಅಭ್ಯರ್ಥಿಗಳ ನೋಂದಣಿ ಮತ್ತು ಪರೀಕ್ಷಾ ಶುಲ್ಕಗಳನ್ನು ಸಹ ಏರಿಕೆ ಮಾಡಲಾಗಿದೆ. ಪ್ರಥಮ ಬಾರಿಗೆ ಪರೀಕ್ಷೆ ಬರೆಯುವವರಿಗೆ ಪರೀಕ್ಷಾ ಶುಲ್ಕವನ್ನು ಶೇ.5ರಷ್ಟು ಹೆಚ್ಚಳ ಮಾಡಲಾಗಿದೆ. ಈ ಮೂಲಕ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಶುಲ್ಕ 710 ರೂಪಾಯಿಗಳಿಂದ 746 ರೂಪಾಯಿಗೆ ಏರಿಕೆಯಾಗಿದೆ.

ಈಗಾಗಲೇ 10ನೇ ತರಗತಿ ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿರುವ ಅಭ್ಯರ್ಥಿಗಳಿಗೂ ಹೆಚ್ಚುವರಿ ಶುಲ್ಕ ಪಾವತಿ ಮಾಡುವಂತೆ ಶಾಲಾ ಶಿಕ್ಷಣ ಮೌಲ್ಯಮಾಪನ ಮಂಡಳಿ ಆದೇಶದಲ್ಲಿ ತಿಳಿಸಿದೆ.

ಹೀಗಾಗಿ ಈಗಾಗಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು ಹೆಚ್ಚುವರಿ ಶುಲ್ಕ ಪಾವತಿಸಬೇಕಿದೆ.

ಇನ್ನು ಪುನರಾವರ್ತಿತವಾಗಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಶುಲ್ಕದಲ್ಲೂ ಏರಿಕೆಯಾಗಿದೆ. ಈ ಮೊದಲು ಒಂದು ವಿಷಯಕ್ಕೆ 448 ರೂಪಾಯಿ ಪಾವತಿಸಬೇಕಿತ್ತು. ಆದರೆ ಈ ಒಂದು ವಿಷಯಕ್ಕೆ 470 ರೂಪಾಯಿ ಪಾವತಿಸಬೇಕಿದೆ. ಇನ್ನು ಎರಡು ವಿಷಯಕ್ಕೆ 559 ರೂ. ನಿಂದ 587 ರೂಪಾಯಿಗೆ ಏರಿಕೆ ಮಾಡಲಾಗಿದೆ. ಅಷ್ಟೇ ಅಲ್ಲದೇ ಮೂರು ಅಥವಾ ಮೂರಕ್ಕಿಂತ ಹೆಚ್ಚಿನ ವಿಷಯಗಳಿಗೆ ಪರೀಕ್ಷೆ ಬರೆಯುವವರು 752 ರೂಪಾಯಿಗಳ ಬದಲಿಗೆ 790 ರೂಪಾಯಿ ಪಾವತಿಸಬೇಕು.

ಇನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಶುಲ್ಕ ಮಾತ್ರವಲ್ಲದೇ ಎಸ್‌ಎಸ್‌ಎಲ್‌ಸಿ ನೋಂದಣಿ ಶುಲ್ಕವೂ ಇದೀಗ ಏರಿಕೆಯಾಗಿದೆ. ಈ ಮೊದಲು ಹೊಸದಾಗಿ ನೋಂದಣಿಯಾಗುವ ಖಾಸಗಿ ಅಭ್ಯರ್ಥಿಗಳು ಎಸ್‌ಎಸ್‌ಎಲ್‌ಸಿ ನೋಂದಣಿ ಶುಲ್ಕ 248 ರುಪಾಯಿ ಪಾವತಿಸಬೇಕಿತ್ತು. ಈಗ 260 ರೂಪಾಯಿಗೆ ಏರಿಕೆಯಾಗಿದೆ. ಅಂದರೆ ಖಾಸಗಿ ಅಭ್ಯರ್ಥಿಗಳು ನೋಂದಣಿ ಶುಲ್ಕವನ್ನೂ 12 ರೂಪಾಯಿ ಹೆಚ್ಚುವರಿಯಾಗಿ ವಿದ್ಯಾರ್ಥಿಗಳು ಪಾವತಿಸಬೇಕಿದೆ.

ನ್ನು ಈಗಾಗಲೇ ಖಾಸಗಿ ಅಭ್ಯರ್ಥಿಯಾಗಿ ನೋಂದಣಿಯಾಗಿ ಪರೀಕ್ಷಾ ಶುಲ್ಕ ಪಾವತಿಸಿದ ಅಭ್ಯರ್ಥಿಗಳ ನೋಂದಣಿ ಶುಲ್ಕ 72 ರೂಪಾಯಿಗಳಿಂದ 76 ರೂಪಾಯಿಗೆ ಏರಿಕೆ ಮಾಡಲಾಗಿದೆ.

# ‘ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಸಿಎಂ ಡಿಕೆಶಿ



ಮೈಸೂರು, ಅ. 4 - ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ನಡೆದ ‘ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಅಧಿಕಾರಿಗಳಿಗೆ ಕಠಿಣ ಸೂಚನೆ ನೀಡಿದರು.

ವೃದ್ಧಾಪ್ಯ ವೇತನ, ಅಂಗವಿಕಲ ವೇತನ ಸೇರಿದಂತೆ ಯಾವುದೇ ಪಿಂಚಣಿ ಅರ್ಜಿಗಳು ಬಾಕಿ ಉಳಿಯಬಾರದು, ಅಶಕ್ತ ಜನರಿಗೆ ತಕ್ಷಣ ನೆರವಾಗಬೇಕು ಎಂದು ಅವರು ಹೇಳಿದರು. ಮುಂದಿನ ಬಾರಿ ಬಂದಾಗ ಪಿಂಚಣಿ ಸಮಸ್ಯೆ ಹೊತ್ತು ಯಾರೂ ಬರಬಾರದು, ಅದನ್ನು ಬಗೆಹರಿಸುವುದು ಅಧಿಕಾರಿಗಳ ಕರ್ತವ್ಯ ಎಂದು ಸಿಎಂ ಸ್ಪಷ್ಟಪಡಿಸಿದರು.

ಹುಣಸೂರಿನ ಸತ್ಯಪ್ಪ ಅವರು ಲಕ್ಷ್ಮಣ ತೀರ್ಥ ನದಿ ಮಲೀನವಾಗಿದೆ, ಜನರು ಅದೇ ನೀರನ್ನು ಬಳಸುತ್ತಿದ್ದಾರೆ ಎಂದು ಮನವಿ ಸಲ್ಲಿಸಿದಾಗ, ಸಿಎಂ ಅಧಿಕಾರಿಗಳಿಗೆ ವಿವರವಾದ ವರದಿ ನೀಡುವಂತೆ ಸೂಚಿಸಿದರು. ನೇಮಕಾತಿ ಆದೇಶ ಪತ್ರ ಶೀಘ್ರ ಮನೆಗೆ ತಲುಪಲಿದೆ ಎಂದು ಯುವಕರಿಗೆ ಭರವಸೆ ನೀಡಿದ ಸಿಎಂ, ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ನೇಮಕಾತಿಗೊಂಡ ಮಹೇಶ್ ಅವರಿಗೆ ಆತ್ಮಸ್ಥೈರ್ಯ ತುಂಬಿದರು.

ತಂಬಾಕು ರೈತರು ಸೂಕ್ತ ಬೆಲೆ ನೀಡಬೇಕು ಎಂದು ಮನವಿ ಸಲ್ಲಿಸಿದಾಗ, ಶಾಸಕ ವೆಂಕಟೇಶ್ ಅವರು ಪರಿಸ್ಥಿತಿ ವಿವರಿಸಿ, ಕೇಂದ್ರ ಸಚಿವರಿಗೆ ಮನವಿ ಪತ್ರ ಸಲ್ಲಿಸುವುದಾಗಿ ಭರವಸೆ ನೀಡಿದರು. ಸಿಎಂ ಕೂಡ ಇದಕ್ಕೆ ಸಮ್ಮತಿಸಿದರು. ರೈತ ರಾಜೇಗೌಡ ಅವರು 7 ಲಕ್ಷ ರೂ. ಸಾಲ ಮಾಡಿ ಬೆಳೆಯಿಲ್ಲದೆ ಸಂಕಷ್ಟದಲ್ಲಿದ್ದೇನೆ ಎಂದು ಅಳಲು ತೋಡಿಕೊಂಡಾಗ, ತಹಶಿಲ್ದಾರ್‌ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ವೇಳೆ ಯುವ ರೈತನೊಬ್ಬ ನನಗೆ ಹೆಣ್ಣು ಹುಡುಕಿಕೊಡಿ ಸಿಎಂ ಸಾರ್ ಎಂದು ಅರ್ಜಿ ಕೊಟ್ಟಾಗ, ಸಿಎಂ ಕ್ಷಣಕಾಲ ಆಶ್ಚರ್ಯಗೊಂಡು ಹೆಣ್ಣು ಹುಡುಕಿಕೊಡಿ ಎಂದು ನನಗೆ ಕೇಳಲಿಲ್ಲವಲ್ಲ ಎಂದು ಚಟಾಕಿ ಹಾರಿಸಿದರು.

ಗ್ರಾಮ ವಿದ್ಯುತ್ ಪ್ರತಿನಿಧಿಗಳು 15-20 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದೇವೆ, ನಮಗೆ ಖಾಯಂಗೊಳಿಸಿ ಎಂದು ಮನವಿ ಸಲ್ಲಿಸಿದಾಗ, ಇದು ಸಚಿವ ಸಂಪುಟದಲ್ಲಿ ತೀರ್ಮಾನವಾಗಬೇಕಾದ ವಿಷಯ, ನನ್ನೊಬ್ಬನ ತೀರ್ಮಾನವಲ್ಲ ಎಂದು ಸಿಎಂ ಹೇಳಿದರು.

ಅಹವಾಲು ಸ್ವೀಕಾರಕ್ಕೂ ಮುನ್ನ ಸಿಎಂ ವನ್ಯಜೀವಿ ಸಂರಕ್ಷಣಾ ಮೊಬೈಲ್ ಪ್ರಚಾರ ವಾಹನವನ್ನು ಲೋಕಾರ್ಪಣೆಗೊಳಿಸಿದರು. ನಂತರ ಅಹವಾಲು ಕೇಂದ್ರಗಳಿಗೆ ತೆರಳಿ ಕಾರ್ಯನಿರ್ವಹಣೆ ಪರಿಶೀಲಿಸಿದರು.

ಸಾರ್ವಜನಿಕರ ಅರ್ಜಿಗಳನ್ನು ಖುದ್ದಾಗಿ ಸ್ವೀಕರಿಸಿ, ಕೊನೆಯ ಅರ್ಜಿದಾರನ ಮನವಿಯನ್ನೂ ಪಡೆದುಕೊಂಡು ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು. ಅಹವಾಲುದಾರರನ್ನು ಕಾಯಿಸಬಾರದು ಎಂದು ಕೇವಲ 10 ನಿಮಿಷದಲ್ಲಿ ಊಟ ಮುಗಿಸಿ ವೇದಿಕೆಗೆ ಬಂದ ಸಿಎಂ ನಡೆ ಜನರ ಮೆಚ್ಚುಗೆಗೆ ಪಾತ್ರವಾಯಿತು.

## ಬಿಜೆಪಿಯವರು ತಾವೇ ಆಯುಕ್ತರ ಕಚೇರಿ ಎದುರು ಧರಣಿ ನಡೆಸುತ್ತಿರುವುದು ದ್ವಂದ್ವ ನೀತಿಗೆ ಸಾಕ್ಷಿ : ರಾಮಲಿಂಗಾ ರೆಡ್ಡಿ



ಬೆಂಗಳೂರು, ಅ. 4 - ಕಾಂಗ್ರೆಸ್ ನಾಯಕರು ಚುನಾವಣಾ ಆಯುಕ್ತರ ವಿರುದ್ಧ ಪ್ರಜಾಪ್ರಭುತ್ವದ ಹಕ್ಕಿಗಾಗಿ ಧ್ವನಿ ಎತ್ತಿದಾಗ ವಿರೋಧ ವ್ಯಕ್ತಪಡಿಸಿದ್ದ ಬಿಜೆಪಿ ನಾಯಕರು, ಇದೀಗ ತಾವೇ ಪೊಲೀಸ್ ಆಯುಕ್ತರ ಕಚೇರಿ ಎದುರು ಧರಣಿ ನಡೆಸುತ್ತಿರುವುದು ದ್ವಂದ್ವ ನೀತಿಗೆ ಸಾಕ್ಷಿ ಎಂದು ಅರಣ್ಯ ಸಚಿವ ರಾಮಲಿಂಗಾ ರೆಡ್ಡಿ ಆರೋಪಿಸಿದ್ದಾರೆ.

ಕಾಂಗ್ರೆಸ್ ಮಾಡಿದರೆ ತಪ್ಪು, ಅದೇ ಕೆಲಸವನ್ನು ಬಿಜೆಪಿ ಮಾಡಿದರೆ ನ್ಯಾಯವೇ? ಜನಸಾಮಾನ್ಯರಿಗೆ ಮತ್ತು ಕಾಂಗ್ರೆಸ್‌ಗೆ ಒಂದು ಕಾನೂನು, ಬಿಜೆಪಿ ನಾಯಕರಿಗೆ ಮತ್ತೊಂದು ಕಾನೂನು ಎಂಬ ಪ್ರತ್ಯೇಕ ನೀತಿ ರಾಜ್ಯದ ಜನತೆಗೆ ತಿಳಿದಿದೆ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಚುನಾವಣಾ ಆಯುಕ್ತರನ್ನು ಮುಂದಿಟ್ಟುಕೊಂಡು ಕೇಂದ್ರ ಬಿಜೆಪಿ ಸರ್ಕಾರ ಹಾಗೂ ಅದರ ನಾಯಕರು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ತೆರೆಮರೆಯಲ್ಲಿ ಹುನ್ನಾರ ನಡೆಸುತ್ತಿದ್ದಾರೆ ಎಂದು ರಾಮಲಿಂಗಾ ರೆಡ್ಡಿ ಆರೋಪಿಸಿದ್ದಾರೆ.

ಇದು ಪ್ರಜಾಪ್ರಭುತ್ವ ಮತ್ತು ಜನರ ಮೂಲಭೂತ ಹಕ್ಕುಗಳ ಮೇಲಿನ ದಾಳಿ. ಮತದಾರರ ಹಕ್ಕುಗಳು ಹಾಗೂ ಸಂವಿಧಾನಿಕ ಮೌಲ್ಯಗಳನ್ನು ರಕ್ಷಿಸಲು ಎಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕು ಎಂದು ಅವರು ಹೇಳಿದ್ದಾರೆ.

ಪೊಲೀಸ್ ಆಯುಕ್ತರ ಕಚೇರಿ ಮೆಟ್ಟಿಲುಗಳ ಮೇಲೆ ಕುಳಿತು ಪ್ರತಿಭಟನೆ ನಡೆಸುವುದನ್ನು ರಾಜಕೀಯ ಗಿಮಿಕ್ ಎಂದು ಟೀಕಿಸಿರುವ ಅವರು, ಜವಾಬ್ದಾರಿಯುತ ವಿರೋಧ ಪಕ್ಷವಾಗಿ ವರ್ತಿಸುವಂತೆ ಬಿಜೆಪಿ ನಾಯಕರಿಗೆ ಸಲಹೆ ನೀಡಿದ್ದಾರೆ.

# ಎಸ್‌ಐಆರ್ ಅಕ್ರಮಗಳ ತನಿಖೆಗೆ ಎಸ್‌ಐಟಿ ರಚಿಸುವ ಬಗ್ಗೆ ಕರ್ನಾಟಕ ಸರ್ಕಾರ ಚಿಂತನೆ

ಬೆಂಗಳೂರು, ಅ. 4 - ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡ ರಚಿಸುವ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಈ ಸಂಬಂಧ ಮಂಗಳವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದ್ದು, ಸಂಪುಟ ಸಚಿವರ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿದೆ. ಎಸ್‌ಐಟಿ ರಚನೆಗೆ ಸಂಬಂಧಿಸಿದ ಪ್ರಸ್ತಾವನೆ ಈಗಾಗಲೇ ಕ್ಯಾಬಿನೆಟ್ ಅಜೆಂಡಾದಲ್ಲಿ ಸೇರಿಸಲಾಗಿದೆ.

ಎಸ್‌ಐಆರ್‌ಪ್ರಕ್ರಿಯೆಯಲ್ಲಿ ಮತದಾರರ ಹೆಸರುಗಳನ್ನು ಅಕ್ರಮವಾಗಿ ತೆಗೆದುಹಾಕಲು ಪ್ರಯತ್ನಿಸಲಾಗಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಕೆಲವರು ದೂರುಗಳನ್ನು ಸಲ್ಲಿಸಿದ್ದಾರೆ. ಐದು ಖಾಸಗಿ ವ್ಯಕ್ತಿಗಳಿಂದ ದೂರುಗಳು ಬಂದಿದೆ.

ಎಫ್‌ಐಆರ್ ದಾಖಲಾದ ಬಳಿಕ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆದು, ತನಿಖೆಯ ಸ್ವರೂಪ ಹಾಗೂ ಎಸ್‌ಐಟಿ ರಚನೆಯ ಕುರಿತು ಸರ್ಕಾರ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. ಈ ಕುರಿತು ಮಾಹಿತಿ ನೀಡುವಂತೆ ಕಂದಾಯ ಮತ್ತು ಗೃಹ ಇಲಾಖೆಗೆ ಸೂಚನೆ ನೀಡಲಾಗಿದೆ.

ಎಸ್‌ಐಟಿ ರಚಿಸಿದಲ್ಲಿ ಹಿರಿಯ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ ತನಿಖೆ ನಡೆಸುವ ಸಾಧ್ಯತೆಯಿದ್ದು, ಎಡಿಜಿಪಿ ಮಟ್ಟದ ಅಧಿಕಾರಿಯನ್ನು ನೇಮಿಸುವ ಬಗ್ಗೆಯೂ ಚರ್ಚೆ ನಡೆದಿದೆ ಎಂದು ಮೂಲಗಳು ಹೇಳಿವೆ.

ಈ ನಡುವೆ, ಅಳಂದ ಪ್ರಕರಣಕ್ಕೆ ಸಂಬಂಧಿಸಿದ ತನಿಖಾ ಪ್ರಗತಿಯ ಬಗ್ಗೆಯೂ ಮುಖ್ಯಮಂತ್ರಿ ಮಾಹಿತಿ ಪಡೆದುಕೊಂಡಿದ್ದಾರೆ. ಎಸ್‌ಐಆರ್‌ಗೆ ಸಂಬಂಧಿಸಿದ ದೂರುಗಳು ಹಾಗೂ ಈಗಾಗಲೇ ನಡೆದಿರುವ ತನಿಖೆಗಳ ಮಾಹಿತಿಯನ್ನು ಪರಿಶೀಲಿಸಿದ ಬಳಿಕ ಸರ್ಕಾರ ಮುಂದಿನ ಹೆಜ್ಜೆ ಇಡುವ ಸಾಧ್ಯತೆ ಇದೆ.

## ಶಿವಕುಮಾರ ಸ್ವಾಮೀಜಿ ಬಗ್ಗೆ ಲಘುವಾಗಿ ಮಾತನಾಡಿದ ಅಶೋಕ್ ಖೇಣಿಯನ್ನು ಬಂಧಿಸಬೇಕು : ಎಚ್‌ಡಿಕೆ



ಬೆಂಗಳೂರು, ಅ. 4 - ಶಿವೈಕ್ಯ ಶ್ರೀಗಳಾದ ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ ಬಗ್ಗೆ ಲಘುವಾಗಿ ಮಾತನಾಡಿರುವ ನೈಸ್ ಗುತ್ತಿಗೆದಾರ ಅಶೋಕ್ ಖೇಣಿಯನ್ನು ತಕ್ಷಣವೇ ಬಂಧಿಸಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಬಗ್ಗೆ ಲಘುವಾಗಿ ಮಾತನಾಡಿರುವ ಈ ಫ್ರಾಡ್ ವ್ಯಕ್ತಿಗೆ ರಾಜ್ಯದ ಮುಖ್ಯಮಂತ್ರಿ ರಕ್ಷಣೆ ಕೊಡುತ್ತಾ ಬಂದಿದ್ದಾರೆ. ಅಲ್ಲದೆ ಆತನ ಜತೆ ಶಾಮೀಲಾಗಿ ಮಾಡಬಾರದ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದ್ದಾರೆ.

ಈ ಅಶೋಕ್ ಖೇಣಿ ಸಿದ್ಧಗಂಗಾ ಮಠದ ಆಸ್ತಿಯನ್ನು ಕೂಡ ಲೂಟಿ ಮಾಡಿದ್ದಾನೆ. ಇಂತಹ ಧರ್ಮದ್ರೋಹಿಗೆ ಡಿ.ಕೆ. ಶಿವಕುಮಾರ್ ಸಹಕಾರ ಕೊಡುತ್ತಾ ಬಂದಿದ್ದಾರೆ. ಇದು ನಾಚಿಕೆಗೇಡು ಎಂದು ವಾಗ್ದಾಳಿ ನಡೆಸಿದ್ದಾರೆ.

**ನೋಟಿಫೈ ಭೂಮಿ ಖರೀದಿಸಿರುವ ಡಿಕೆಶಿ ಕುಟುಂಬ**

ಬೆಂಗಳೂರಿನ ಹೊಸಕೆರೆಹಳ್ಳಿ ಟೋಲ್ ಬಳಿ ಇರುವ ಶೋಭ ಅಪಾರ್ಟ್‌ಮೆಂಟ್ ಯಾರದು, ಅದಕ್ಕೆ ಹಾಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರ ಕುಟುಂಬ, ಅವರ ಸಹೋದರ ಡಿ.ಕೆ. ಸುರೇಶ್‌ರವರಿಗೂ ಏನು ಸಂಬಂಧ. ಅಮಾಸೆಗೌಡ, ಭಾಗ್ಯಲಕ್ಷ್ಮಿ, ಕೆಂಪೇಗೌಡ ಎನ್ನುವವರು ಯಾರು ಎಂದು ಅವರು ಪ್ರಶ್ನಿಸಿದ್ದಾರೆ.

ಡಿ.ಕೆ ಶಿವಕುಮಾರ್ ತಮ್ಮ ಮತ್ತು ತಾಯಿ ಹೆಸರಿಗೆ ಈ ಭೂಮಿಯನ್ನು ಖರೀದಿಸಿದ್ದು ಹೇಗೆ, ಒಮ್ಮೆ ಸರ್ಕಾರಿ ಯೋಜನೆಗೆ ನೋಟಿಫೈ ಆಗಿರುವ ಭೂಮಿಯನ್ನು ಇವರು ಖರೀದಿಸಲು ಹೇಗೆ ಸಾಧ್ಯವಾಯಿತು. ಎನ್‌ಓಸಿ ಹೇಗೆ ಸಿಕ್ಕಿತು ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

## ಪುತ್ತೂರಿನ ಐವರು ವಿದ್ಯಾರ್ಥಿಗಳಿಂದ ಏಷ್ಯನ್ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್



ಪುತ್ತೂರು, ಅ. 4 - ಕಲ್ಲಾರೆಯ ವರ್ಣಕುಟೀರ ಕಲಾ ಶಿಕ್ಷಣ ಸಂಸ್ಥೆಯ ಐವರು ವಿದ್ಯಾರ್ಥಿಗಳು ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡು ಗಾಂಧಾರಿ ಶೈಲಿಯ ಸ್ಯಾಂಡ್ ಆರ್ಟ್ ಪ್ರದರ್ಶನ ಮಾಡುವ ಮೂಲಕ ಏಷ್ಯನ್ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ಸೇರ್ಪಡೆಗೊಂಡಿದ್ದಾರೆ. ಇದೇ ವೇಳೆ ಈ ಸಂಸ್ಥೆಯ ಎಂಟು ಮಂದಿ ಹಿನ್ನೆಲೆ ಗಾಯಕರು ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ಗೆ ಸೇರಿದ್ದಾರೆ.

ಈ ಹಿಂದೆ ಇದೇ ಸಂಸ್ಥೆಯ ವಿದ್ಯಾರ್ಥಿನಿ ಶಮಿಕ ಎಂ.ಕೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಿರಂತರ 24 ಗಂಟೆಗಳ ಕಾಲ ಸುಮಾರು 300 ಸ್ಯಾಂಡ್ ಆರ್ಟ್ ಕಲಾಕೃತಿಗಳನ್ನು ರಚಿಸಿ ಏಷ್ಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲೆ ನಿರ್ಮಿಸಿದ್ದರು.

ಈ ಸಾಧನೆಯ ಮುಂದುವರಿದ ಭಾಗವಾಗಿ 6ನೇ ತರಗತಿಯ ಮೂವರು ವಿದ್ಯಾರ್ಥಿಗಳು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಿರಂತರ 30 ಗಂಟೆಗಳ ಕಾಲ ಹಾಗೂ 3ನೇ ತರಗತಿಯ ಇಬ್ಬರು ವಿದ್ಯಾರ್ಥಿಗಳು ಕಣ್ಣು ಬಿಟ್ಟುಕೊಂಡು 18 ಗಂಟೆಗಳ ಕಾಲ ಸ್ಯಾಂಡ್ ಆರ್ಟ್ ಪ್ರದರ್ಶನ ನೀಡಿದರು. ಇದರ ಮೂಲಕ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ಸೇರ್ಪಡೆಗೊಂಡರು.

ಏಷ್ಯನ್ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯ ಏಷ್ಯಾ ವಿಭಾಗದ ಮುಖ್ಯಸ್ಥ ಡಾ. ಮನೀಷ್ ವೈಷ್ಣೋಯಿ ಅವರ ಸಮ್ಮುಖದಲ್ಲಿ ಋಷಿಕ ಆರ್.ಕೆ, ಅಂಶಿ ಸಂತೋಷ್ ಕುಮಾರ್, ವಿಷ್ಮಾ ಅಜ್ಜಿಕಲ್ಲು, ಹಿಮಾಂಶು ಕೃಷ್ಣ ಮತ್ತು ಸೋಹನ್ ಕೆ.ಎಸ್. ತಮ್ಮ ಸಾಧನೆ ಪ್ರದರ್ಶಿಸಿದರು. ಬಳಿಕ ಅವರಿಗೆ ಪ್ರಮಾಣ ಪತ್ರ ಹಸ್ತಾಂತರಿಸಲಾಯಿತು.

# ಫೇಕ್ ಮತಗಳ ರಕ್ಷಣೆಗಾಗಿ ಸಿಎಂ ಡಿಕೆಶಿಯಿಂದ ಚುನಾವಣಾಧಿಕಾರಿ ಕಚೇರಿ ಎದುರು ಧರಣಿಯ ನಾಟಕ : ಬೊಮ್ಮಾಯಿ



ಬೆಂಗಳೂರು, ಅ.4 - ಕಳೆದ 20 ವರ್ಷಗಳಿಂದ ಕಾಂಗ್ರೆಸ್ ಪಕ್ಷದವರು ನಕಲಿ ಮತಗಳನ್ನು ಹಾಕಿಸಿಕೊಂಡು, ಒಂದೇ ವ್ಯಕ್ತಿ ಎರಡು ಕಡೆ ಮತಗಳನ್ನು ಹಾಕಿಸುವುದು ಅಥವಾ ಸತ್ತವರ ಹೆಸರಿನಲ್ಲಿ ಮತಗಳನ್ನು ಹಾಕಿಸಿಕೊಂಡು ಆಯ್ಕೆಯಾಗುತ್ತಿದ್ದರು. ಈಗ ಅವರಿಗೆ ತೊಂದರೆಯಾಗಿದೆ. ಹೀಗಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಫೇಕ್ ಮತಗಳ ರಕ್ಷಣೆಗಾಗಿ ಚುನಾವಣಾಧಿಕಾರಿ ಕಚೇರಿ ಎದುರು ಧರಣಿ ನಡೆಸುವ ನಾಟಕವಾಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಹಾವೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಆರಂಭದಿಂದಲೂ ಬಹಳ ಸರಳವಾಗಿ ನಡೆದುಕೊಂಡು ಬರುತ್ತಿತ್ತು. ಪ್ರಾರಂಭದಲ್ಲಿ ಕಾಂಗ್ರೆಸ್‌ನವರು ಅಲ್ಲಲ್ಲಿ ಮಸೀದಿಯಲ್ಲಿ ಅರ್ಜಿ ತುಂಬಿಸುವುದಕ್ಕೆ ನಾವು ವಿರೋಧಿಸಿದ್ದೇವು. ಆದರೆ ನಂತರದ ಕ್ರಮಗಳ ಪ್ರಕಾರ ಇದು ಸರಳವಾಗಿ ಮುಗಿಯಬೇಕಿತ್ತು, ಅಕ್ಟೋಬರ್ 8 ರಂದು ಕರಡು ಮತ ಪಟ್ಟಿಯನ್ನು ಕೊಡಬೇಕಾಗಿತ್ತು. ಇಂತ ಸಂದರ್ಭದಲ್ಲಿ ಕಾಂಗ್ರೆಸ್ ನವರು ಚುನಾವಣಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿ ಗೊಂದಲ ಸೃಷ್ಟಿಸಿದ್ದಾರೆ. ನಮ್ಮ ಪಕ್ಷದ ಪ್ರಮುಖರು ಚುನಾವಣಾಧಿಕಾರಿಯನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ.

ಈಗ ಕಾನೂನು ಪ್ರಕಾರ ಎಲ್ಲವೂ ಹೊರಬರುತ್ತಿದೆ ಎಂದಿರುವ ಅವರು, ರಾಜ್ಯ ಸರ್ಕಾರಕ್ಕೆ ನೇರವಾಗಿ ಇದರ ವಿರುದ್ಧ ಕೇಸ್ ಹಾಕುವ ಯಾವುದೇ ಅಧಿಕಾರವಿಲ್ಲ, ಇದು ಸಂಪೂರ್ಣವಾಗಿ ಚುನಾವಣಾ ಅಧಿಕಾರಿಗಳು ಮಾಡಬೇಕಾದ ಕೆಲಸ.

ಕಾನೂನಿನ ಪ್ರಕಾರ ಅರ್ಹರ ಮತಗಳು ಮಾತ್ರ ರಕ್ಷಿಸಲ್ಪಡಬೇಕು ಮತ್ತು ಅನರ್ಹರ ಮತಗಳನ್ನು ತೆಗೆದುಹಾಕಬೇಕು ಎನ್ನುವುದು ನಮ್ಮ ಸ್ಪಷ್ಟ ನಿಲುವು ಎಂದು ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸವಣೂರು ತಾಲೂಕು ಪ್ರತ್ಯೇಕ ವಿಧಾನಸಭಾ ಕ್ಷೇತ್ರ ಆಗಬೇಕು ಎನ್ನುವ ಬೇಡಿಕೆ ಕುರಿತು ಕೇಳಿದ್ರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಚುನಾವಣಾ ಆಯೋಗದ ನಿಯಮಗಳ ಪ್ರಕಾರವೇ ಡಿಲಿಮಿಟೇಶನ್ (ಗಡಿ ನಿರ್ಣಯ) ಪ್ರಕ್ರಿಯೆ ನಡೆಯಬೇಕು, ಅದಾದ ಬಳಿಕ ಕೇಂದ್ರ ಮತ್ತು ರಾಜ್ಯ ಸಮಿತಿಗಳು ರಚನೆಯಾಗುತ್ತವೆ. ಒಂದು ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಜನಸಂಖ್ಯೆ ಇರಬೇಕು ಎಂದು ನಿರ್ಧಾರ ಆಗುತ್ತದೆ. ಆ ಸಂದರ್ಭದಲ್ಲಿ ಅವರ ಮನವಿಯನ್ನು ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ಎಸ್‌ಐಆರ್ ಪ್ರಕ್ರಿಯೆ ಶುರುವಾದ ನಂತರ ನಡೆದ ಎಲ್ಲ ಚುನಾವಣೆಗಳನ್ನು ರದ್ದು ಪಡಿಸುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನವರು ಎಲ್ಲ ಕಡೆ ಸೋತಿದ್ದಾರೆ. ಅದಕ್ಕಾಗಿ ಕುಂಟು ನೆಪ ಹೇಳುತ್ತಿದ್ದಾರೆ. ಅವರ ಪಕ್ಷ ಯಾಕೆ ಸೋತಿದೆ ಅನುವುದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಅಮಾನತು ಮಾಡಬೇಕೆಂಬ ಬೇಡಿಕೆಗೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಹಾಗೂ ಅವರ ಮಿತ್ರ ಪಕ್ಷದವರಿಗೆ ದೇಶದ ಅಭಿವೃದ್ಧಿ ಸಹಿಸಿಕೊಳ್ಳಲು ಆಗುತ್ತಿಲ್ಲ. ಅವರು ದೇಶದಲ್ಲಿ ಹೇಗಾದರೂ ಮಾಡಿ ದಂಗೆ ಎಬ್ಬಿಸಬೇಕೆಂದು ಬಯಸುತ್ತಿದ್ದಾರೆ. ಅದಕ್ಕೆ ದೇಶದ ಜನರು ಸೊಪ್ಪು ಹಾಕುವುದಿಲ್ಲ ಎಂದು ಹೇಳಿದರು.

## ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಲಾಭದ ದಿಕ್ಕಿನತ್ತ

ಬೆಂಗಳೂರು, ಅ. 4 - ನಿರಂತರ ನಷ್ಟದ ಸುಳಿಗೆ ಸಿಲುಕಿದ್ದ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಇದೀಗ ಲಾಭದ ದಿಕ್ಕಿನತ್ತ ಹೊರಳಿದೆ.

ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಉಕ್ಕು ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಕೈಗೊಂಡ ಸುಧಾರಣಾ ಕ್ರಮಗಳು ಹಾಗೂ ಕಾರ್ಖಾನೆಗೆ ನೀಡಿದ ನಿರಂತರ ಭೇಟಿಗಳ ಹಿನ್ನೆಲೆಯಲ್ಲಿ ಈ ಕಾರ್ಖಾನೆಯು ಇದೀಗ ಪುಟಿದೆದ್ದಿದ್ದು, ಕಳೆದ ಮೂರು ತಿಂಗಳಿಂದ ಸತತ ಲಾಭದ ದಾರಿಯಲ್ಲಿ ಸಾಗಿ ಬರುತ್ತಿದೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಕೇಂದ್ರ ಸಚಿವರು ಎಚ್.ಡಿ ಕುಮಾರಸ್ವಾಮಿ, ಸುಧಾರಿತ ಆರ್ಥಿಕ ಕಾರ್ಯಕ್ಷಮತೆಯು ಅಲ್ಲಿನ ಕಾರ್ಮಿಕರ ನಿರಂತರ ಪ್ರಯತ್ನ, ಬದ್ಧತೆ ಮತ್ತು ಸಾಮೂಹಿಕ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ ಎಂದು ಬಣ್ಣಿಸಿದ್ದಾರೆ.

## ಹಿರಿಯ ನಟಿ ಲಲಿತಮ್ಮ ನಿಧನ



ಬೆಂಗಳೂರು, ಅ. 4 - ಕನ್ನಡ ಚಿತ್ರರಂಗ ಹಾಗೂ ರಂಗಭೂಮಿಯಲ್ಲಿ ಹಲವು ವರ್ಷಗಳ ಕಾಲ ಕಲಾ ಸೇವೆ ಸಲ್ಲಿಸಿದ್ದ ಹಿರಿಯ ನಟಿ ಲಲಿತಮ್ಮ ಅವರು ನಿಧನರಾಗಿದ್ದಾರೆ. ಅವರಿಗೆ 65 ವರ್ಷ ವಯಸ್ಸಾಗಿತ್ತು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಇಂದು ಬೆಳಗ್ಗೆ ಸುಮಾರು 9.30ರ ವೇಳೆಗೆ ಕೊನೆಯುಸಿರೆಳೆದಿದ್ದಾರೆ ಎಂದು ವರದಿಯಾಗಿದೆ.

**ರಂಗಭೂಮಿಯಲ್ಲಿ 35 ವರ್ಷಗಳ ಸೇವೆ:**

ಲಲಿತಮ್ಮ ಅವರು ಸುಮಾರು 35 ವರ್ಷಗಳ ಕಾಲ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದರು. ನೂರಾರು ನಾಟಕಗಳು ಹಾಗೂ ಪ್ರದರ್ಶನಗಳಲ್ಲಿ ಅಭಿನಯಿಸಿ ರಂಗಭೂಮಿಗೆ ತಮ್ಮದೇ ಕೊಡುಗೆ ನೀಡಿದ್ದರು.

**ಕಿರುತೆರೆಯಲ್ಲೂ ಜನಪ್ರಿಯತೆ:**

ರಂಗೋಲಿ, ಮಾಂಗಲ್ಯ, ಮಹಾಮಾಯಿ ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ಅಭಿನಯಿಸಿದ್ದರು.

**ಸಿನಿಮಾ ಪಯಣ:** ಸುಂಟರಗಾಳಿ, ಜಾಕಿ, ವಜ್ರಕಾಯ, ಜಂಗ್ಲಿ, ಕಿತ್ತೂರು, ಪುತ್ರ, ಲೈಫ್ ಇಷ್ಟೇನೆ ಸೇರಿದಂತೆ ಹಲವು ಚಿತ್ರಗಳಲ್ಲಿ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು.

ಲಲಿತಮ್ಮ ಅವರ ನಿಧನದ ಸುದ್ದಿ ತಿಳಿದು ಕನ್ನಡ ಚಿತ್ರರಂಗ ಹಾಗೂ ರಂಗಭೂಮಿ ವಲಯದಲ್ಲಿ ಸಂತಾಪ ವ್ಯಕ್ತವಾಗುತ್ತಿದೆ. ಹಲವು ವರ್ಷಗಳ ಕಾಲ ರಂಗಭೂಮಿ, ಕಿರುತೆರೆ ಮತ್ತು ಸಿನಿಮಾಗಳಲ್ಲಿ ತಮ್ಮ ಅಭಿನಯದ ಮೂಲಕ ಗುರುತಿಸಿಕೊಂಡಿದ್ದ ಕಲಾವಿದೆಯ ಅಗಲಿಕೆ ಕಲಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ.

# ಪ್ರಯೋಗಶೀಲತೆ, ಹೊಸ ತಂತ್ರಜ್ಞಾನಗಳ ಬಳಕೆಗೆ ಹೆಸರಾಗಿದ್ದ ಖ್ಯಾತ ನಿರ್ದೇಶಕ ಸಿಂಗೀತಂ ಶ್ರೀನಿವಾಸ ರಾವ್ ನಿಧನ

ಬೆಂಗಳೂರು, ಅ. 4 - ಭಾರತೀಯ ಚಿತ್ರರಂಗದಲ್ಲಿ ಪ್ರಯೋಗಶೀಲತೆ, ವಿಭಿನ್ನ ಕಥನಶೈಲಿ ಹಾಗೂ ಹೊಸ ತಂತ್ರಜ್ಞಾನಗಳ ಬಳಕೆಗೆ ಹೆಸರಾಗಿದ್ದ ಖ್ಯಾತ ನಿರ್ದೇಶಕ ಸಿಂಗೀತಂ ಶ್ರೀನಿವಾಸ ರಾವ್ (95) ಅವರು ಚೆನ್ನೈನ ಕಾವೇರಿ ಆಸ್ಪತ್ರೆಯಲ್ಲಿ ವಯೋಸಹಜ ಅನಾರೋಗ್ಯದಿಂದ ಅಕ್ಟೋಬರ್ 3ರ ರಾತ್ರಿ ನಿಧನರಾಗಿದ್ದಾರೆ.

ಐದು ಭಾಷೆಗಳಲ್ಲಿ ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ಸಿನಿ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಅವರ ನಿಧನಕ್ಕೆ ಕನ್ನಡ, ತೆಲುಗು, ತಮಿಳು ಸೇರಿದಂತೆ ಹಲವು ಚಿತ್ರರಂಗಗಳ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸಿಂಗೀತಂ ಅವರ ಸಿನಿಮಾ ಪಯಣ ಸಾಮಾನ್ಯ ನಿರ್ದೇಶಕರಂತಿರಲಿಲ್ಲ. ಖ್ಯಾತ ನಿರ್ದೇಶಕ ಕೆ.ವಿ. ರೆಡ್ಡಿ ಅವರ ಬಳಿ ಸಹಾಯಕನಾಗಿ ವೃತ್ತಿ ಆರಂಭಿಸಿದ ಅವರು, ಮಾಯಾಬಜಾರ್ ಸೇರಿದಂತೆ ಪ್ರಮುಖ ಚಿತ್ರಗಳ ನಿರ್ಮಾಣ ಪ್ರಕ್ರಿಯೆಯನ್ನು ಹತ್ತಿರದಿಂದ ಕಂಡಿದ್ದರು. 1972ರಲ್ಲಿ ತೆಲುಗಿನ ನೀತಿ ನಿಜಾಯಿತಿ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಪಯಣ ಆರಂಭಿಸಿದರು. ನಂತರ ತೆಲುಗು, ಕನ್ನಡ, ತಮಿಳು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಒಟ್ಟು 61 ಚಿತ್ರಗಳನ್ನು ನಿರ್ದೇಶಿಸಿದರು.

**ಕನ್ನಡ ಚಿತ್ರರಂಗದಲ್ಲಿ ಸಿಂಗೀತಂ :**

ಕನ್ನಡ ಚಿತ್ರರಂಗದೊಂದಿಗೆ ಸಿಂಗೀತಂ ಶ್ರೀನಿವಾಸ ರಾವ್ ಅವರಿಗೆ ವಿಶೇಷ ನಂಟಿತ್ತು. ಡಾ. ರಾಜ್‌ಕುಮಾರ್ ಅವರೊಂದಿಗೆ ಕೆಲಸ ಮಾಡಿದ ಅವರು, ಹಾಲು ಜೇನು, ಚಲಿಸುವ ಮೋಡಗಳು ಸೇರಿದಂತೆ ಕನ್ನಡ ಚಿತ್ರರಂಗದ ಹಲವು ಸ್ಮರಣೀಯ ಚಿತ್ರಗಳೊಂದಿಗೆ ಗುರುತಿಸಿಕೊಂಡಿದ್ದರು. ಭಾಗ್ಯದ ಲಕ್ಷ್ಮಿ ಬಾರಮ್ಮ ಚಿತ್ರವನ್ನು ನಿರ್ದೇಶಿಸುವುದರ ಜೊತೆಗೆ ಸಂಗೀತ ಸಂಯೋಜನೆಯಲ್ಲಿಯೂ ಅವರು ತಮ್ಮ ಪ್ರತಿಭೆ ತೋರಿಸಿದ್ದರು.

ಅವರ ಕನ್ನಡ ಸಿನಿಮಾ ಕೊಡುಗೆಗೆ ಮೂರು ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳು ಸೇರಿದಂತೆ ಹಲವು ಗೌರವಗಳು ಸಂದಿವೆ. ಪುಷ್ಪಕ ವಿಮಾನ ಕೂಡ ಭಾರತೀಯ ಸಿನಿಮಾ ಇತಿಹಾಸದಲ್ಲಿ ಅವರ ಹೆಸರನ್ನು ಶಾಶ್ವತಗೊಳಿಸಿದ ಪ್ರಮುಖ ಕೃತಿಗಳಲ್ಲಿ ಒಂದಾಗಿದೆ. ಈ ಚಿತ್ರವು ಸಂಭಾಷಣೆಯಿಲ್ಲದ ಕಪ್ಪು ಹಾಸ್ಯವನ್ನು ದೃಶ್ಯಗಳ ಮೂಲಕ ಕಟ್ಟಿಕೊಟ್ಟು ಹೊಸ ರೀತಿಯ ಸಿನಿಮಾ ಅನುಭವ ನೀಡಿತ್ತು.



**ತೆಲುಗು ಚಿತ್ರರಂಗದಲ್ಲಿ ಹೊಸ ಪ್ರಯೋಗಗಳ ಅಧ್ಯಾಯ :**

ತೆಲುಗು ಚಿತ್ರರಂಗದಲ್ಲಿ ಸಿಂಗೀತಂ ಅವರ ಪ್ರಯೋಗಶೀಲತೆಗೆ ಅತ್ಯುತ್ತಮ ಉದಾಹರಣೆ ಆದಿತ್ಯ 369. ನಂದಮೂರಿ ಬಾಲಕೃಷ್ಣ ಅಭಿನಯದ ಈ ಚಿತ್ರವು ಟೈಮ್ ಟ್ರಾವೆಲ್ ಮತ್ತು ಸೈನ್ಸ್ ಫಿಕ್ಷನ್‌ನ್ನು ತೆಲುಗು ಪ್ರೇಕ್ಷಕರಿಗೆ ವಿಭಿನ್ನ ರೀತಿಯಲ್ಲಿ ಪರಿಚಯಿಸಿತು.

ಭೈರವ ದ್ವೀಪಂ ಮೂಲಕ ಫ್ಯಾಂಟಸಿ-ಅಡ್ವೆಂಚರ್ ಕಥನಕ್ಕೆ ಹೊಸ ಆಯಾಮ ನೀಡಿದ ಅವರು, ಮಯೂರಿ ಮೂಲಕ ನೃತ್ಯ ಕಲಾವಿದೆ ಸುಧಾ ಚಂದ್ರನ್ ಅವರ ಜೀವನವನ್ನು ತೆರೆಗೆ ತಂದಿದ್ದರು. ಮಯೂರಿ ಹಲವು ನಂದಿ ಪ್ರಶಸ್ತಿಗಳನ್ನು ಪಡೆದಿತ್ತು.

ಪುಷ್ಪಕ ವಿಮಾನ ದ ವಿಶೇಷತೆ ಅದರ ಸಂಭಾಷಣೆಯಿಲ್ಲದ ನಿರೂಪಣೆ. ದೃಶ್ಯ ಭಾಷೆಯನ್ನೇ ಮುಖ್ಯ ಸಾಧನವನ್ನಾಗಿ ಮಾಡಿಕೊಂಡ ಈ ಚಿತ್ರ ಭಾರತೀಯ ಸಿನಿಮಾದ ಅತ್ಯಂತ ವಿಭಿನ್ನ ಪ್ರಯೋಗಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಅವರ ಮೊದಲ ತಮಿಳು ನಿರ್ದೇಶನದ ಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ದೊರೆತಿತ್ತು. ನಂತರ ಪುಷ್ಪಕ ವಿಮಾನಕ್ಕೂ ರಾಷ್ಟ್ರೀಯ ಮಟ್ಟದ ಗೌರವ ದೊರೆಯಿತು.

**ಪ್ರಶಸ್ತಿಗಳ ಸರಮಾಲೆ :**

ಸಂಗೀತಂ ಶ್ರೀನಿವಾಸ ರಾವ್ ಅವರ ದೀರ್ಘ ಸಿನಿ ಪಯಣದಲ್ಲಿ ಎರಡು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, ಐದು ನಂದಿ ಪ್ರಶಸ್ತಿಗಳು, ಮೂರು ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳು ಮತ್ತು ಮೂರು ಫಿಲ್ಮ್‌ಫೇರ್ ಪ್ರಶಸ್ತಿಗಳು ಸೇರಿದಂತೆ ಹಲವು ಗೌರವಗಳು ಸಂದಿವೆ. 2011ರಲ್ಲಿ ಫಿಲ್ಮ್ ಫೆಡರೇಶನ್ ಆಫ್ ಇಂಡಿಯಾದಿಂದ ಜೀವಮಾನ ಸಾಧನೆ ಪ್ರಶಸ್ತಿಯನ್ನೂ ಪಡೆದಿದ್ದರು.

**94ನೇ ವಯಸ್ಸಿನಲ್ಲೂ ಕ್ಯಾಮೆರಾ ಹಿಂದೆ :**

ಸಿಂಗೀತಂ ಅವರ ಸಿನಿಪ್ರೇಮಕ್ಕೆ ಅವರ ಕೊನೆಯ ಚಿತ್ರವೇ ಸಾಕ್ಷಿ. ಸಿಂಗ್ ಗೀತಂ ಎಂಬ ಮ್ಯೂಸಿಕಲ್ ಫ್ಯಾಂಟಸಿ ಚಿತ್ರವನ್ನು 2026ರಲ್ಲಿ ನಿರ್ದೇಶಿಸುವ ಮೂಲಕ 90ರ ದಶಕದಲ್ಲಿಯೂ ಸೃಜನಶೀಲವಾಗಿ ಸಕ್ರಿಯರಾಗಿದ್ದರು. ಇದು ಅವರ 61ನೇ ನಿರ್ದೇಶನದ ಚಿತ್ರವಾಗಿತ್ತು. ಈ ಕಾರಣದಿಂದ ಅವರು ಅತ್ಯಂತ ಹಿರಿಯ ವಯಸ್ಸಿನಲ್ಲೂ ಸಿನಿಮಾ ನಿರ್ದೇಶನ ಮುಂದುವರಿಸಿದ ನಿರ್ಮಾಪಕ-ನಿರ್ದೇಶಕರಲ್ಲಿ ಒಬ್ಬರಾಗಿ ಗಮನ ಸೆಳೆದಿದ್ದರು.

ಸಿಂಗೀತಂ ಶ್ರೀನಿವಾಸ ರಾವ್ ಅವರ ಅಗಲಿಕೆಯಿಂದ ಕೇವಲ ಒಬ್ಬ ನಿರ್ದೇಶಕರನ್ನು ಭಾರತೀಯ ಚಿತ್ರರಂಗ ಕಳೆದುಕೊಂಡಿಲ್ಲ; ಭಾಷೆ, ಪ್ರಕಾರ ಮತ್ತು ತಂತ್ರಜ್ಞಾನದ ಗಡಿಗಳನ್ನು ಮೀರಿ ಹೊಸದನ್ನು ಪ್ರಯತ್ನಿಸುವ ಸೃಜನಶೀಲ ಮನಸ್ಸೊಂದನ್ನು ಕಳೆದುಕೊಂಡಿದೆ. ಕನ್ನಡದಿಂದ ತೆಲುಗು, ತಮಿಳು ಹಾಗೂ ಹಿಂದಿವರೆಗೆ ಅವರ ಸಿನಿಮಾಗಳು ಮುಂದಿನ ತಲೆಮಾರಿನ ನಿರ್ದೇಶಕರಿಗೆ ಪ್ರಯೋಗಶೀಲತೆಯ ಪಾಠವಾಗಿ ಉಳಿಯಲಿವೆ.

# ಕರ್ನಾಟಕ : ನೋ ಮ್ಯಾಪಿಂಗ್ ಮತದಾರರ ವಿಚಾರಣೆ ಚುರುಕು

ಬೆಂಗಳೂರು, ಅ. 4 - ಚುನಾವಣಾ ಆಯೋಗದ ವಿರುದ್ಧ ರಾಜ್ಯದಲ್ಲಿ ಪ್ರತಿಭಟನೆ ಹಾಗೂ ಆಕ್ಷೇಪಣೆಗಳು ಕೇಳಿಬರುತ್ತಿರುವ ಬೆನ್ನಲ್ಲೇ, ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಡಿ ನೋ ಮ್ಯಾಪಿಂಗ್ ಮತದಾರರ ವಿಚಾರಣೆ ಚುರುಕುಗೊಂಡಿದೆ.

ರಾಜ್ಯದಲ್ಲಿ ನೋ ಮ್ಯಾಪಿಂಗ್ ಎಂದು ಗುರುತಿಸಲಾದ ಸುಮಾರು 43.43 ಲಕ್ಷ ಮತದಾರರಿಗೆ ನೋಟಿಸ್ ನೀಡಲಾಗಿದ್ದು, ಈ ಪೈಕಿ 33.60 ಲಕ್ಷ ಮತದಾರರ ವಿಚಾರಣೆ ಪೂರ್ಣಗೊಂಡಿದೆ. ಆದರೆ, ಒಟ್ಟು ವಿಚಾರಣೆಯ 81.99ರಷ್ಟು ಪ್ರಕ್ರಿಯೆ ಪೂರ್ಣಗೊಂಡಿದೆ. ಇನ್ನೂ ಸುಮಾರು 7.82 ಲಕ್ಷ ಮತದಾರರ ವಿಚಾರಣೆ ಬಾಕಿ ಇದೆ.

ಕೇಂದ್ರ ಚುನಾವಣಾ ಆಯೋಗದ ಸೂಚನೆಯಂತೆ, ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ತೆರಳಿ ಮತದಾರರ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ. ನಿಗದಿತ ದಾಖಲೆ ಪಡೆದು ಇಸಿಐಎನ್‌ಇಟಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ.

ನೋ ಮ್ಯಾಪಿಂಗ್‌ಗೆ ಸಂಬಂಧಿಸಿದ ವಿಚಾರಣೆ ಪ್ರಕ್ರಿಯೆ ಅ.12ರಂದು ಅಂತ್ಯಗೊಳ್ಳಲಿದೆ. ಆಕ್ಷೇಪಣೆ ಮತ್ತು ಕ್ಲೇಮ್‌ಗಳ ವಿಲೇವಾರಿ ಬಳಿಕ ಅ.22ರಿಂದ 27ರ ಅವಧಿಯಲ್ಲಿ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ಪ್ರಕ್ರಿಯೆ ನಡೆಯಲಿದೆ.

ಇದೇ ವೇಳೆ, ರಾಜ್ಯದಲ್ಲಿ ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು 8.85 ಲಕ್ಷ ಮಂದಿ ಫಾರ್ಮ್-6 ಮೂಲಕ ಅರ್ಜಿ ಸಲ್ಲಿಸಿದ್ದಾರೆ. ವಿದೇಶದಲ್ಲಿರುವ 4,648 ಮಂದಿ ಫಾರ್ಮ್-6ಎ ಮೂಲಕ ಹೊಸದಾಗಿ ನೋಂದಣಿಗೆ ಅರ್ಜಿ ಸಲ್ಲಿಸಿದ್ದಾರೆ.

ಮತ್ತೊಂದೆಡೆ, ತಮ್ಮ ಹೆಸರು ಮತದಾರರ ಪಟ್ಟಿಯಿಂದ ಅಳಿಸಲು 84,900 ಮಂದಿ ಫಾರ್ಮ್-7ರಲ್ಲಿ ಸಲ್ಲಿಸಿದ್ದಾರೆ. ಹೆಸರು ಅಥವಾ ಇತರ ವಿವರಗಳಲ್ಲಿ ತಿದ್ದುಪಡಿ ಕೋರಿ 11.78 ಲಕ್ಷ ಮತದಾರರು ಅರ್ಜಿ ಸಲ್ಲಿಸಿದ್ದಾರೆ.

ಆಯೋಗದ ಅಂಕಿ-ಅಂಶಗಳ ಪ್ರಕಾರ, ಈ ಎಲ್ಲಾ ಅರ್ಜಿಗಳು, ಆಕ್ಷೇಪಣೆಗಳು ಮತ್ತು ದಾಖಲೆಗಳ ಪರಿಶೀಲನೆಯ ಬಳಿಕ ಅಂತಿಮ ಮತದಾರರ ಪಟ್ಟಿಯಲ್ಲಿ ಬದಲಾವಣೆಗಳು ಸಂಭವಿಸಲಿವೆ.

ಕರ್ನಾಟಕ ಮಲ್ಲ

## ಸಂಪಾದಕರ ಮಾತು...

**ಸೋಮವಾರ 05, ಅಕ್ಟೋಬರ್ 2026**

## ಮಹಾರಾಷ್ಟ್ರದಲ್ಲಿ ಹದಗೆಟ್ಟ ಕಾನೂನು ಮತ್ತು ಶಿಸ್ತು

ಮಹಾರಾಷ್ಟ್ರದ ಪುಣೆ ನಗರದಲ್ಲಿ ಸೆಪ್ಟೆಂಬರ್ 29ರಂದು ರಾತ್ರಿ ಸ್ಥಳೀಯ ಶಿವಸೇನೆ (ಯುಬಿಟಿ) ನಾಯಕ ಪ್ರದೀಪ್ ಪೂರ್ಣೇಕರ್ ಹತ್ಯೆ ಘಟನೆ ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತು ಹದಗೆಟ್ಟಿದೆ ಎಂದು ವಿರೋಧ ಪಕ್ಷಗಳ ಟೀಕೆಗೆ ಕಾರಣವಾಗಿದೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದು ಇನ್ನೂ ಮೂವರು ತಲೆ ಮರೆಸಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿಕೊಂಡಿದ್ದಾರೆ. ಇನ್ನೊಂದೆಡೆ ಹತ ಪೂರ್ಣೇಕರ್ ಅವರ ಮಗ ರಾಮ್ ಪೂರ್ಣೇಕರ್ ತನ್ನ ತಂದೆಯ ಕೊಲೆಯಲ್ಲಿ ಥಾಣೆಯ ಮಾಜಿ ಮೇಯರ್ ವಿನಾಕ್ಷಿ ಶಿಂದೆ ಮತ್ತು ಅವರ ಪತಿ ರಾಜೇಂದ್ರ ಶಿಂದೆ ಪಾಲಿದೆ ಎಂದು ಗಂಭೀರ ಆರೋಪ ಮಾಡಿ ದೂರು ನೀಡಿದ್ದಾರೆ. ಆ ಅಪಾದನೆಯನ್ನು ವಿನಾಕ್ಷಿ ಶಿಂದೆ ತಳ್ಳಿ ಹಾಕಿದ್ದು, ಘಟನೆ ಬಗ್ಗೆ ವಿವರವಾಗಿ ತನಿಖೆ ನಡೆಸಿದಾಗ ಸತ್ಯ ಹೊರಗೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಏನಾಗುತ್ತದೆ ಎಂದು ಮುಂದೆ ತಿಳಿಯಬೇಕಿದೆ.

ಪೂರ್ಣೇಕರ್ ಅವರ ಹತ್ಯೆ ಪ್ರಕರಣದಲ್ಲಿ ಪೊಲೀಸರು ತಕ್ಷಣ ಬಂಧಿಸಿದ್ದು ಘಟನೆ ವೇಳೆ ಅವರ ಕಚೇರಿಯಲ್ಲಿ ಇದ್ದ ಅವರ ಮಾಜಿ ಸ್ನೇಹಿತ ಪಾಪ್ಪ ಶಿಂದೆಯನ್ನು. ಪಾಪ್ಪ ಶಿಂದೆ ಮತ್ತು ಪೂರ್ಣೇಕರ್ ನಡುವೆ ಕಳೆದ ಮಹಾನಗರ ಪಾಲಿಕೆಯ ಚುನಾವಣೆ ವೇಳೆ ವೈರತ್ವ ಬೆಳೆದಿತ್ತು. ಪೂರ್ಣೇಕರ್ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಶಿವಸೇನೆ (ಯುಬಿಟಿ) ನಾಯಕರಾದರೆ ಪಾಪ್ಪ ಥಾಣೆಯ ಬಲಿಷ್ಠ ರಾಜಕೀಯ ನಾಯಕ ಉಪ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಶಿವಸೇನೆಯ ಕಾರ್ಯಕರ್ತ. ಈ ಕಾರಣದಿಂದಲೇ ಪ್ರದೀಪ್ ಕೊಲೆಯಲ್ಲಿ ರಾಜಕೀಯ ದ್ವೇಷದ ಹೊಗೆ ಎದ್ದಿದೆ. ಪ್ರದೀಪ್ ಪೂರ್ಣೇಕರ್ ಥಾಣೆ ನಗರದ ಕ್ಲಸ್ಟರ್ ಅಭಿವೃದ್ಧಿ ಯೋಜನೆಯ ಭ್ರಷ್ಟಾಚಾರ ಮತ್ತು ಡ್ರಗ್ಸ್ ದಂಧೆ ವಿರುದ್ಧ ಹೋರಾಟ ಮಾಡುತ್ತಿದ್ದ ಕಾರಣದಿಂದ ಅವರ ಕೊಲೆ ಮಾಡಲಾಗಿದೆ ಎಂದು ರಾಜ್ಯಸಭಾ ಸದಸ್ಯ ಶಿವಸೇನೆ (ಯುಬಿಟಿ) ನಾಯಕ ಸಂಜಯ್ ರಾವುತ್ ನೇರವಾಗಿ ಆಪಾದಿಸಿ, ಹತ್ಯೆಯಲ್ಲಿ ಆಡಳಿತ ಶಿವಸೇನೆಯ ಸಂಚಿದೆ ಎಂದು ಆಪಾದನೆ ಮಾಡಿದ್ದಾರೆ.

ಪೂರ್ಣೇಕರ್ ಕೊಲೆ ಬಗ್ಗೆ ತನಿಖೆಗೆ 23 ಸದಸ್ಯರ ವಿಶೇಷ ತನಿಖಾ ತಂಡ (ಎಸ್ಐಟಿ) ರಚನೆಯಾಗಿದೆ. ಈ ತನಿಖದ ಬಂಧನ ಕಾರ್ಯಾಚರಣೆ ಪ್ರದೀಪ್ ಹತ್ಯೆ ಪೂರ್ವಯೋಜಿತ ಕೃತ್ಯ ಎನ್ನುವುದನ್ನು ಬೊಟ್ಟು ಮಾಡಿದ್ದು, ರಾಜಕೀಯ ಮತ್ತು ವೈಯಕ್ತಿಕ ದ್ವೇಷ ಹತ್ಯೆಯ ಹಿಂದೆ ಎನ್ನುವುದನ್ನು ದೃಢಪಡಿಸಿದೆ. ಪಾಪ್ಪ ಶಿಂದೆ ಪೂರ್ಣೇಕರ್ ಕಚೇರಿಗೆ ಎರಡು ಮೂರು ದಿನಗಳಿಂದ ಭೇಟಿ ನೀಡಿದ್ದ, ಕಚೇರಿಯ ಚಟುವಟಿಕೆಯನ್ನು ಅರಿತುಕೊಂಡಿದ್ದ, ಪೂರ್ಣೇಕರ್ ಕಚೇರಿಯಲ್ಲಿ ಯಾವ ಹೊತ್ತಲ್ಲಿ ಜನರು ಕಡಿಮೆ ಇರುತ್ತಾರೆ ಮತ್ತು ಅಲ್ಲಿ ದುಷ್ಕೃತ್ಯ ಎಸಗಿ ಯಾವ ರೀತಿಯಲ್ಲಿ ತಪ್ಪಿಸಿಕೊಳ್ಳಲು ಅವಕಾಶ ಇದೆ ಎಂದು ಪೂರ್ವಾಭ್ಯಾಸ ನಡೆಸಿದ್ದಲ್ಲದೆ ಹಂತಕರಲ್ಲಿ ಒಬ್ಬನನ್ನು ಸ್ವಯಂ ಕಚೇರಿಗೆ ಕರೆದುಕೊಂಡು ಬಂದಿರುವುದಾಗಿ ಪೊಲೀಸರು ನೀಡಿರುವ ಮಾಹಿತಿಯನ್ನು ಗಮನಿಸಿದರೆ ಸಹಜವಾಗಿ ಹತ್ಯೆ ಹಿಂದೆ ಸಾಕಷ್ಟು ಪೂರ್ವ ಯೋಜಿತ ಪಾಲಿದೆ ಎನ್ನುವುದು ಖಚಿತವಾಗುತ್ತಿದ್ದು ಅದನ್ನು ಎಸ್ಐಟಿ ವಿಳಂಬ ಇಲ್ಲದೆ ಭೇದಿಸಬೇಕು.

ಮಹಾರಾಷ್ಟ್ರದಲ್ಲಿ 2024ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಶಿವಸೇನೆ ಮತ್ತು ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದ ಮೈತ್ರಿ ರಂಗ ಮಹಾಯುತಿ ಭಾರೀ ಬಹುಮತದಿಂದ ಅಧಿಕಾರ ಉಳಿಸಿಕೊಂಡು ಬಿಜೆಪಿ ನಾಯಕ ದೇವೇಂದ್ರ ಫಡ್ನವೀಸ್ ಮುಖ್ಯಮಂತ್ರಿ ಆದ ಬಳಿಕ ಕಾನೂನು ಮತ್ತು ಶಿಸ್ತು ಪಾಲನೆ ವ್ಯವಸ್ಥೆ ಮುರಿದು ಬಿದ್ದಿದೆ ಎಂಬ ಆರೋಪ ಹೆಚ್ಚುತ್ತಾ ಇದೆ. ವಿಧಾನ ಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟ ಆಗುವುದಕ್ಕೆ ಕೇವಲ ಮೂರು ದಿನಗಳ ಮೊದಲು ಎನ್ ಸಿಪಿ ನಾಯಕ ಮಾಜಿ ಸಚಿವ ಬಾಬಾ ಸಿದ್ದಿಕಿ ಅವರನ್ನು ಅವರ ಕಚೇರಿಯ ಬಳಿಯಲ್ಲೇ ದಸರಾ ಆಚರಣೆ ಗದ್ದಲ ನಡುವೆ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದರು. ಬಾಬಾ ಸಿದ್ದಿಕಿ ಅವರ ಕೊಲೆಯ ಹಿಂದೆ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಪಾಲಿದೆ ಎಂದು ಪೊಲೀಸರು ಹೇಳಿದ್ದಾರೆ. ಸಿದ್ದಿಕಿ ಹತ್ಯೆಗೆ ಸಂಬಂಧಿಸಿದಂತೆ ಪ್ರಮುಖ ಶೂಟರ್‌ಗಳ ಸಹಿತ ಕನಿಷ್ಠ 27 ಆರೋಪಿಗಳನ್ನು ಕೊಲೆ ಮತ್ತು ಕೊಲೆ ಸಂಚಿನ ಆರೋಪದಲ್ಲಿ ಬಂಧಿಸಲಾಗಿದೆ.

ರಾಜ್ಯದ ರಾಯಿಗಢ ಜಿಲ್ಲೆಯ ಖೋಪೋಲಿ ಮುನ್ಸಿಪಲ್ ಕೌನ್ಸಿಲ್ ನೂತನ ಕೌನ್ಸಿಲರ್ ಮಾನಸಿ ಕಲೋಖೆ ಅವರ ಪತಿ ಮಂಗೇಶ್ ಕಲೋಖೆ ಅವರನ್ನು 2025ರ ಡಿಸೆಂಬರ್ 26ರಂದು ಮಾರಕಾಸ್ತ್ರಗಳಿಂದ ಅಮಾನುಷವಾಗಿ ಕಡಿದು ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಚುನಾವಣಾ ರಾಜಕೀಯ ದ್ವೇಷದ ಕೊಲೆಯೆಂದು ಅದನ್ನು ಪರಿಗಣಿಸಲಾಗಿದೆ. ಉದ್ಧವ್ ಠಾಕ್ರೆ ಅವರ ಶಿವಸೇನೆ (ಯುಬಿಟಿ) ನಾಯಕ ಅಭಿಷೇಕ್ ಘೋಸಾಳ್ಕರ್ ಅವರನ್ನು 2024ರ ಫೆಬ್ರವರಿ 8ರಂದು ಸಂಜೆ ಫೇಸ್‌ಬುಕ್ ನೇರ ಮಾತುಕತೆಯಲ್ಲಿದ್ದಾಗಲೇ ದುಷ್ಕರ್ಮಿಗಳು ಗುಂಡಿಕ್ಕಿ ಕೊಲೆ ಮಾಡಿದ್ದು ಅದನ್ನೂ ರಾಜಕೀಯ ಹತ್ಯೆ ಎಂದು ತಿಳಿಯಲಾಗಿದೆ. ಪುಣೆಯಲ್ಲಿ ಮಾಜಿ ಕಾರ್ಪೊರೇಟರ್ ಎನ್‌ಸಿಪಿ ನಾಯಕ ವನರಾಜ್ ಅಂಧೇಕರ್ ಅವರನ್ನು 2024ರ ಸೆಪ್ಟೆಂಬರ್ 1ರಂದು ಗುಂಡಿಕ್ಕಿ ಕೊಲೆಗೈದ ಘಟನೆ ಕೂಡಾ ರಾಜಕೀಯ ಸೇಡಿನ ಕೃತ್ಯ ಎಂದು ಪರಿಗಣಿಸಲಾಗಿದೆ.

ಮುಂಬಯಿ, ಪುಣೆ ಸೇರಿದಂತೆ ಮಹಾರಾಷ್ಟ್ರದ ಎಲ್ಲೆಡೆ ಮಹಿಳೆಯರು ಮತ್ತು ಅಪ್ರಾಪ್ತ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ ಮತ್ತು ದೌರ್ಜನ್ಯ ಪ್ರಕರಣಗಳು ಆತಂಕ ಪಡುವ ರೀತಿಯಲ್ಲಿ ನಡೆಯುತ್ತಿವೆ. 2025ರಲ್ಲಿ ರಾಜ್ಯದಲ್ಲಿ 8,643 ಅತ್ಯಾಚಾರ ಪ್ರಕರಣಗಳು ನಡೆದಿವೆ ಎನ್ನುವುದು ನಾಗರಿಕ ಸಮಾಜ ತಲೆ ತಗ್ಗಿಸುವ ವಿಚಾರವಾಗಿದೆ. ಇದರಲ್ಲಿ ಮುಂಬಯಿ ನಗರದಲ್ಲಿ ಶೇಕಡ 13ರಷ್ಟು ಮತ್ತು ಪುಣೆಯಲ್ಲಿ ಶೇಕಡಾ 7ರಷ್ಟು ಘಟನೆಗಳು ನಡೆದಿವೆ ಎನ್ನುವುದನ್ನು ಗಮನಿಸಿದರೆ ಮಹಿಳೆಯರ ಸುರಕ್ಷತೆ ಬಗ್ಗೆ ಕಾನೂನು ಪಾಲನೆ ವಿಫಲ ಆಗಿದೆಯೇ ಎಂಬ ಶಂಕೆ ತಲೆ ಎತ್ತುವುದು ಸಹಜವಾಗಿದೆ. ರಾಜ್ಯದಲ್ಲಿ ಸೈಬರ್ ವಂಚನೆ ಮತ್ತು ಡಿಜಿಟಲ್ ಅರೆಸ್ಟ್ ಎಂಬ ಅಪರಾಧ ಘಟನೆಗಳು ಅತ್ಯಂತ ಆತಂಕಕಾರಿ ಮಟ್ಟಕ್ಕೆ ತಲುಪಿದ್ದು ಪೊಲೀಸ್ ಇಲಾಖೆಯ ತನಿಖಾ ವ್ಯವಸ್ಥೆ ಇನ್ನಷ್ಟು ಕಠಿಣ ಆಗಬೇಕಾಗಿದೆ. ಮುಂಬಯಿ, ಪುಣೆ ಮತ್ತು ಅಹಿಲ್ಯಾ ನಗರದಲ್ಲಿ ಕಳೆದ ವರ್ಷದಲ್ಲಿ 1,031 ಕೋಟಿ ರೂಪಾಯಿ ಸೈಬರ್ ವಂಚನೆ ನಡೆದ ಬಗ್ಗೆ ಪ್ರಕರಣ ದಾಖಲಾಗಿದ್ದು, ಪ್ರಕರಣ ದಾಖಲಾಗದೇ ಇರುವ ಪ್ರಕರಣಗಳು ಮತ್ತಷ್ಟು ಇರುವ ಸಾಧ್ಯತೆ ಇದ್ದೇ ಇದೆ.

ಇನ್ನೊಂದೆಡೆ ರಾಜ್ಯದಲ್ಲಿ ವೈದ್ಯರುಗಳು ಮತ್ತು ಆಸ್ಪತ್ರೆಗಳ ಸಿಬ್ಬಂದಿಗಳ ಮೇಲೆ ದಾಳಿ, ಹಲ್ಲೆ ಸಾಮಾನ್ಯ ಎಂಬ ಸ್ಥಿತಿ ತಲುಪಿದೆ. ಥಾಣೆ ಜಿಲ್ಲೆಯ ಕಲ್ಯಾಣ್ ಶಾಸ್ತ್ರಿ ನಗರದ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ಮೇಲೆ ಶಿವಸೇನೆ ಕಾರ್ಪೊರೇಟರ್ ರಮೇಶ್ ಮ್ಹಾತ್ರೆ ಮತ್ತು ಅವರ ಬೆಂಬಲಿಗರು ನಡೆಸಿರುವ ಹಲ್ಲೆ, ಪಾಲ್ಘರ್ ರಿಲೀಫ್ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ಮೇಲೆ ಶಿವಸೇನೆ ನಾಯಕರುಗಳಾದ ರಾಹುಲ್ ಘರಾತ್, ರೋಹಿತ್ ಗಾವಿತ್ ಮತ್ತು 20ಕ್ಕೂ ಹೆಚ್ಚು ಶಿವಸೇನೆ ಕಾರ್ಯಕರ್ತರು ನಡೆಸಿರುವ ದಾಳಿ ಮತ್ತು ಥಾಣೆ ಸಬ್ ಇನ್ಸ್‌ಪೆಕ್ಟರ್ ಮೇಲೆ ಶಿವಸೇನೆ ಕಾರ್ಯಕರ್ತರು ನಡೆಸಿರುವ ದಾಳಿ ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ನಡೆಯುತ್ತಿರುವ ಹಲ್ಲೆ ಮತ್ತು ದಾಳಿ ಘಟನೆಗಳು ರಾಜ್ಯದಲ್ಲಿ ನಡೆಯುತ್ತಿರುವುದು ಕಾನೂನು ಮತ್ತು ಶಿಸ್ತು ವೈಫಲ್ಯವನ್ನು ಬೊಟ್ಟು ಮಾಡಿವೆ.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಗೃಹ ಖಾತೆ ಜತೆಗೆ ಅಜಿತ್ ಪವಾರ್‌ಅವರ ಅಕಾಲಿಕ ಮರಣ ಬಳಿಕ ಅರ್ಥ ಖಾತೆಯನ್ನೂ ವಹಿಸಿಕೊಂಡಿದ್ದಾರೆ. ಜವಾಬ್ದಾರಿಯುತ ಎರಡು ಖಾತೆಗಳನ್ನು ನಿಭಾಯಿಸುವ ಒತ್ತಡದಿಂದ ಫಡ್ನವೀಸ್ ಅವರ ಗೃಹ ಖಾತೆ ಬಗ್ಗೆ ಗಮನ ನೀಡಲು ಸಮಯ ಸಿಗುತ್ತಿಲ್ಲವೇ? ವಿರೋಧ ಪಕ್ಷಗಳು ಈಗಾಗಲೇ ಫಡ್ನವೀಸ್ ಅವರು ಗೃಹ ಸಚಿವರಾಗಿ ಕರ್ತವ್ಯ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲ ಆಗಿದ್ದಾರೆ ಎಂದು ಆರೋಪ ಮಾಡುತ್ತಿವೆ. ಉಪ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಪ್ರಭಾವ ಇರುವ ಥಾಣೆ, ಪಾಲ್ಘರ್ ಮತ್ತು ಇತರ ಕಡೆಗಳಲ್ಲಿ ಫಡ್ನವೀಸ್ ಯಾವುದೇ ತೀರ್ಮಾನ ತೆಗೆದುಕೊಳ್ಳಲು ರಾಜಕೀಯ ಒತ್ತಡ ಎದುರಿಸುತ್ತಿದ್ದಾರೆ ಎಂದು ವಿರೋಧ ಪಕ್ಷಗಳು ಟೀಕೆ ಮಾಡುತ್ತಿವೆ. ಇಂತಹ ಶಂಕೆಯನ್ನು ಬಿಜೆಪಿಯ ವಲಯದಲ್ಲೂ ಕಾಣಬಹುದಾಗಿದೆ. ಅದಕ್ಕೆ ಸಚಿವ ಗಣೇಶ್ ನಾಯ್ಕ್ ಅವರು ಬಹಿರಂಗವಾಗಿಯೇ ಏಕನಾಥ್ ಶಿಂದೆ ಅವರ ಜತೆಗೆ ಸಂಘರ್ಷ ನಡೆಸುತ್ತಿದ್ದಾರೆ. ವೈದ್ಯರುಗಳು ಮತ್ತು ಆಸ್ಪತ್ರೆಗಳ ಸಿಬ್ಬಂದಿಗಳ ಮೇಲೆ ನಡೆದಿರುವ ಹಲ್ಲೆ ಮತ್ತು ದಾಳಿಯನ್ನು ಬಾಂಬೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಅತ್ಯಂತ ಗಂಭೀರ ಹಿಂಸಾ ಕೃತ್ಯಗಳು ಎಂದು ಛೀಮಾರಿ ಹಾಕಿದ್ದು ಆರೋಪಿಗಳಿಗೆ ಜಾಮೀನು ನೀಡುವುದನ್ನೇ ತಳ್ಳಿ ಹಾಕುವ ಮೂಲಕ ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತು ಕಾಪಾಡುವ ಆಡಳಿತ ಯಂತ್ರದ ವೈಫಲ್ಯವನ್ನು ಗಂಭೀರವಾಗಿ ಪರಿಗಣಿಸಿದ್ದು ಎಚ್ಚೆತ್ತುಕೊಳ್ಳಬೇಕಾಗಿರುವುದು ರಾಜ್ಯ ಸರಕಾರದ ಜವಾಬ್ದಾರಿಯಾಗಿದೆ.

# ಮುಂದಿನ ತಲೆಮಾರಿಗೆ ಸ್ಫೂರ್ತಿಯಾದ ಕ್ಯಾಪ್ಟನ್ ಸ್ಮಿತ್ ಮಚ್ಛಾರ್ ಶೌರ್ಯಗಾಥೆ



ಸಾವಿರಾರು ಅಡಿ ಎತ್ತರದ ಮುಗಿಲಿನಲ್ಲಿ ಸಾವು ಕಣ್ಣೆದುರೇ ಬಂದು ನಿಂತಾಗಲೂ ಎದೆಗುಂದದೆ, ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ನೂರಾರು ಪ್ರಯಾಣಿಕರ ಜೀವ ಉಳಿಸಿದ ಭಾರತೀಯ ಮೂಲದ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಛಾರ್ ಇಂದು ಜಗತ್ತಿನಾದ್ಯಂತ 'ರಿಯಲ್ ಹೀರೋ' ಆಗಿ ಹೊರಹೊಮ್ಮಿದ್ದಾರೆ.ಸ್ಮಿತ್ ಮಚ್ಛಾರ್ ಅವರು ಮುಂಬಯಿನಲ್ಲಿ ಜನಿಸಿ ಬೆಳೆದವರು.ಇವರ ಕುಟುಂಬದ ಮೂಲ ಗುಜರಾತ್‌ಗೆ ಸೇರಿದ್ದಾಗಿದೆ.ಮುಂಬಯಿಯ ಘಾಟ್ಕೋಪರ್ ಪೂರ್ವದ 'ಧವಳಗಿರಿ' ಬಿಲ್ಡಿಂಗ್‌ನಲ್ಲಿ ತನ್ನ ಕುಟುಂಬವನ್ನು ಹೊಂದಿರುವ ಮಚ್ಛಾರ್ ಆರಂಭದಲ್ಲಿ ಜವಳಿ ಉದ್ಯಮದತ್ತ ಮುಖ ಮಾಡಿದವರು. ಟೆಕ್ಸ್‌ಟೈಲ್ ಎಂಜಿನಿಯರಿಂಗ್ ಹಾಗೂ ಮುಂಬಯಿಯ ಪ್ರಸಿದ್ಧ ವೆಲಿಂಗ್ಕರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, 19ನೇ ವಯಸ್ಸಿನಲ್ಲಿ ಆಕಸ್ಮಿಕವಾಗಿ ಭಾಗವಹಿಸಿದ ವಿಮಾನಯಾನ ಸೆಮಿನಾರ್ ಅವರ ಬದುಕಿನ ಹಾದಿಯನ್ನೇ ಬದಲಿಸಿಬಿಟ್ಟಿತು.

ನ್ಯೂಜಿಲೆಂಡ್‌ನಲ್ಲಿ ಪೈಲಟ್ ತರಬೇತಿ ಪೂರೈಸಿದ ಅವರು ವಾಣಿಜ್ಯ ವಿಮಾನಯಾನ ಕ್ಷೇತ್ರದಲ್ಲಿ 13 ವರ್ಷಗಳಿಗೂ ಹೆಚ್ಚು ಕಾಲ ಸುದೀರ್ಘ ಅನುಭವ ಗಳಿಸಿರುವುದು ಅವರ ಶ್ರೇಷ್ಠತೆಗೆ ಸಾಕ್ಷಿಯಾಗಿದೆ.ಬೋಯಿಂಗ್ 737 ವಿಮಾನಗಳಲ್ಲಿ ಸುಮಾರು 9,750 ಗಂಟೆಗಳ ಕಾಲ ವಿಮಾನ ಹಾರಾಟ ನಡೆಸಿರುವ ಇವರು 2022ರ ಜೂನ್‌ನಲ್ಲಿ ಕಮಾಂಡರ್ ಆಗಿ 'ಫ್ಲೈದುಬೈ' ಸಂಸ್ಥೆಯನ್ನು ಸೇರಿಕೊಂಡಿದ್ದರು.ಆದರೆ ಈಗಿನ 'ಫ್ಲೈದುಬೈ' ಘಟನೆವರೆಗೂ ಯಾರಿಗೂ ಪರಿಚಿತರಾಗಿಲ್ಲದ ಮಚ್ಛಾರ್ ಈ ಒಂದು ಘಟನೆಯಿಂದಾಗಿ ಜಗತ್ತಿನಾದ್ಯಂತ ಸುದ್ದಿಯಾದರು ಮಾತ್ರವಲ್ಲ ಭಾರತೀಯರ ಪಾಲಿಗೆ ನಿಜವಾದ ಹೀರೋ ಆದರು.

ದುಬೈನಿಂದ ಇಸ್ರೇಲ್‌ನ ಟೆಲ್ ಅವೀವ್‌ಗೆ ತೆರಳುತ್ತಿದ್ದ 'ಫ್ಲೈದುಬೈ ಎಫ್‌ಝಡ್ 1073' ವಿಮಾನದಲ್ಲಿ ಕ್ಯಾಪ್ಟನ್ ಮಚ್ಛಾರ್ ಕರ್ತವ್ಯದಲ್ಲಿದ್ದರು. ಸುಮಾರು 14,000 ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತಿದ್ದಾಗ, ವಿಮಾನವನ್ನು ಪತನ ಇಲ್ಲವೆ ಹೈಜಾಕ್ ಮಾಡುವ ದುರುದ್ದೇಶದಿಂದ ಸಹ-ಪೈಲಟ್ ಹಮಾಮ್ ಅಲ್ ಹಮ್ಮಿ ಏಕಾಏಕಿ ಕ್ಯಾಪ್ಟನ್ ಮೇಲೆ ಚಾಕುವಿನಿಂದ ತೀವ್ರವಾಗಿ ಹಲ್ಲೆ ನಡೆಸಿದ.ಎದೆ, ಹೊಟ್ಟೆ ಹಾಗೂ ಕೈ-ಕಾಲುಗಳ ಭಾಗಕ್ಕೆ ಗಂಭೀರ ಗಾಯಗಳಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದರೂ ಮಚ್ಛಾರ್ ಧೈರ್ಯ ಕಳೆದುಕೊಳ್ಳಲಿಲ್ಲ. ತಮ್ಮ ಅದಮ್ಯ ಸಾಹಸದಿಂದ ಕಾಕ್‌ಪಿಟ್ ಬಾಗಿಲನ್ನು ತೆರೆಯುವಲ್ಲಿ ಯಶಸ್ವಿಯಾದರು.ಇದರಿಂದಾಗಿ ವಿಮಾನದಲ್ಲಿದ್ದ ಇಸ್ರೇಲಿ ಪ್ರಯಾಣಿಕರು ಮತ್ತು ಎಮಿರೇಟ್ಸ್ ಸಿಬ್ಬಂದಿ ತಕ್ಷಣವೇ ಒಳಗೆ ಪ್ರವೇಶಿಸಿ ದಾಳಿಕೋರ ಸಹ-ಪೈಲಟ್‌ನನ್ನು ಹದ್ದುಬಸ್ತಿಗೆ ತಂದರು.

ಬಳಿಕ, ವಿಮಾನದಲ್ಲಿದ್ದ ಇಬ್ಬರು ಆಫ್-ಡ್ಯೂಟಿ ಪೈಲಟ್‌ಗಳ ನೆರವಿನಿಂದ ವಿಮಾನವನ್ನು ಸೌದಿ ಅರೇಬಿಯಾದ ತಬುಕ್ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ತುರ್ತು ಭೂಸ್ಪರ್ಶ ಮಾಡಿಸಲಾಯಿತು. ಮಚ್ಛಾರ್ ಅವರ ಕ್ಷಣಾರ್ಧದ ಸಮಯಪ್ರಜ್ಞೆ ಮತ್ತು ಅದಮ್ಯ ಧೈರ್ಯದಿಂದಾಗಿ ವಿಮಾನದಲ್ಲಿದ್ದ 174ಕ್ಕೂ ಹೆಚ್ಚು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾದರು.

ಮೃತ್ಯುವಿನ ದವಡೆಯಿಂದ ನೂರಾರು ಜೀವಗಳನ್ನು ರಕ್ಷಿಸಿದ ಕ್ಯಾಪ್ಟನ್ ಮಚ್ಛಾರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್,ದುಬೈ ಯುವರಾಜ ಹಮ್ದಾನ್ ಬಿನ್ ರಶೀದ್ ಅಲ್ ಮಕ್ತೂಮ್ ಸೇರಿದಂತೆ ವಿಶ್ವದ ಪ್ರಮುಖ ನಾಯಕರು ಮತ್ತು ಗಣ್ಯರು ಶ್ಲಾಘನೆ ವ್ಯಕ್ತಪಡಿಸಿದರು.ಮಚ್ಛಾರ್ ಜೀವ ರಕ್ಷಣೆಗಾಗಿ ದೇಶ - ವಿದೇಶಗಳಲ್ಲಿ ಪ್ರಾರ್ಥನೆ, ಯಜ್ಞಗಳು ನಡೆದಿದ್ದು ವಿಶೇಷ.ಪ್ರಸ್ತುತ ಸೌದಿ ಅರೇಬಿಯಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಚ್ಛಾರ್ ಅವರು ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿಕೊಳ್ಳುತ್ತಿದ್ದು,ಪತ್ನಿ ಸೋನಾಲ್ ಕೂಡ ಪತಿಯ ಸಾಧನೆಗಾಗಿ ಹೆಮ್ಮೆ ಪಡುತ್ತಿದ್ದಾರೆ.ಅವರ ಈ ಶೌರ್ಯಗಾಥೆ ಮುಂದಿನ ತಲೆಮಾರಿಗೆ ಸ್ಫೂರ್ತಿಯಾಗಿದೆ.

ಭಾರತೀಯ ವಾಣಿಜ್ಯ ವಿಮಾನ ಪೈಲಟ್ ಆದ ಕ್ಯಾಪ್ಟನ್ ಮಚ್ಛಾರ್ ತಮ್ಮ ಅಪಾರ ಅನುಭವ ಮತ್ತು ಅಸಾಮಾನ್ಯ ಸಾಹಸಿಕ ಕಾರ್ಯದಿಂದ ಜಾಗತಿಕ ಮಟ್ಟದಲ್ಲಿ ಸೌಂದರ್ಯ ಹಾಗೂ ಧೈರ್ಯದ ಸಂಕೇತವಾಗಿ ಹೊರಹೊಮ್ಮಿದ್ದಾರೆ.

ಕಾಕ್‌ಪಿಟ್‌ನಲ್ಲಿ ನಡೆದ ಗಂಭೀರ ಹಲ್ಲೆ/ಘರ್ಷಣೆಯ ಸಂದರ್ಭದಲ್ಲಿ ಗಾಯಗೊಂಡರೂ ಕೂಡ ಅವರು ಅಸಾಧಾರಣ ಸ್ಥಿರತೆ ತೋರಿದರು.ರಕ್ತಸ್ರಾವವಾಗುತ್ತಿದ್ದರೂ ವಿಮಾನವನ್ನು ಸುರಕ್ಷಿತವಾಗಿ ತುರ್ತು ಭೂಸ್ಪರ್ಶ ಮಾಡಿಸಿ ವಿಮಾನದಲ್ಲಿದ್ದ 174 ಕ್ಕೂ ಹೆಚ್ಚು ಪ್ರಯಾಣಿಕರು ಮತ್ತು ಸಿಬ್ಬಂದಿಯ ಜೀವರಕ್ಷಣೆ ಮಾಡಿದರು. ಈ ಸಾಹಸಿಕ ಜೀವರಕ್ಷಕ ಕಾರ್ಯಕ್ಕಾಗಿ ಪ್ರಧಾನಿ ಮೋದಿ ಅವರು ಕ್ಯಾಪ್ಟನ್ ಮಚ್ಛಾರ್ ಅವರೊಂದಿಗೆ ನೇರವಾಗಿ ಮಾತುಕತೆ ನಡೆಸಿ ಅವರ ಧೈರ್ಯವನ್ನು ಶ್ಲಾಘಿಸಿದರು. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೇರಿದಂತೆ ವಿಶ್ವದ ಪ್ರಮುಖ ನಾಯಕರು ಅವರ ಅಪೂರ್ವ ಧೈರ್ಯವನ್ನು 'ಅಸಾಧಾರಣ ವೀರತೆ'ಎಂದು ಬಣ್ಣಿಸಿ ಅಭಿನಂದಿಸಿದರು.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಚ್ಛಾರ್‌ಗೆ ವೀಡಿಯೊ ಕರೆ ಮಾಡಿದಾಗ ಮಚ್ಛಾರ್ ಅಬುಧಾಬಿಯ ಆಸ್ಪತ್ರೆಯಿಂದ ಘಟನೆ ಬಗ್ಗೆ ಪೂರ್ಣವಾಗಿ ವಿವರಿಸಿದರು.ಸಹ- ಪೈಲಟ್ ಓಮಾನಿ ಪ್ರಜೆ 'ಪ್ರಾರ್ಥನೆ ಮಾಡಲು ಬಯಸಿರುವುದಾಗಿ' ಹೇಳಿ ತನ್ನ ಮೇಲೆ ದಾಳಿ ಮಾಡಿದ ಎಂದು ಮಚ್ಛಾರ್ ನೆತನ್ಯಾಹುಗೆ ಸೆ.30ರ ಘಟನೆಯ ಭಯಾನಕ ಕ್ಷಣವನ್ನು ವಿವರಿಸಿದರು.

ಮಚ್ಛಾರ್ ಇಸ್ರೇಲಿ ಪ್ರಧಾನಿಗೆ ನೀಡಿದ ಮಾಹಿತಿಯ ಪ್ರಕಾರ, ವಿಮಾನದ ಹಾರಾಟವು ತುಂಬಾ ಸಾಮಾನ್ಯ ರೀತಿಯಲ್ಲಿ ಆರಂಭವಾಯಿತು. ಇದ್ದಕ್ಕಿದ್ದಂತೆ ಒಮಾನಿ ಸಹ-ಪೈಲಟ್ ಪ್ರಾರ್ಥನೆ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದ.ಇದು ಸ್ಥಳೀಯರಲ್ಲಿ ಸಾಮಾನ್ಯ ವಿಷಯವಾಗಿದ್ದರಿಂದ, ಕ್ಯಾಪ್ಟನ್ ಮಚ್ಛಾರ್ ಗೌರವದ ಸಂಕೇತವಾಗಿ ತನ್ನ ತಲೆಯನ್ನು ಬದಿಗೆ ತಿರುಗಿಸಿ ಮುಂದೆ ನೋಡಲು ಆರಂಭಿಸಿದರು. ಆದಾಗ್ಯೂ, ಕೇವಲ 4-5 ನಿಮಿಷಗಳಲ್ಲಿ ಸಹ-ಪೈಲಟ್ ಚಾಕುವಿನಿಂದ ಅವರಿಗೆ ತಿವಿದ.ಆರಂಭದಲ್ಲಿ, ವಿಮಾನದಲ್ಲಿ ಏನೋ ತಾಂತ್ರಿಕ ದೋಷವಿದೆ ಎಂದು ಮಚ್ಛಾರ್ ಭಾವಿಸಿದ್ದರು, ಆದರೆ ಹೊಟ್ಟೆಯಿಂದ ರಕ್ತಸ್ರಾವವಾದಾಗ ಸಹ-ಪೈಲಟ್ ಮಾರಕ ದಾಳಿ ನಡೆಸುತ್ತಿದ್ದಾರೆ ಎಂದು ಅವರು ಅರಿತುಕೊಂಡರು.

ದಾಳಿಯಿಂದಾಗಿ ರಕ್ತಸಿಕ್ತವಾಗಿದ್ದ ಮಚ್ಛಾರ್ ಅವರ ದೃಷ್ಟಿ ಮಸುಕಾಗಿತ್ತು. ಅದೇ ಸಮಯದಲ್ಲಿ ವಿಮಾನವು ತುಂಬಾ ವೇಗವಾಗಿ ಇಳಿಯುತ್ತಿದೆ ಎಂದು ಅವರು ಅರಿತುಕೊಂಡರು. ಫ್ಲೈಟ್ ರಾಡಾರ್ ಮಾಹಿತಿಯ ಪ್ರಕಾರ, ವಿಮಾನವು ಕೇವಲ 2 ನಿಮಿಷಗಳಲ್ಲಿ 17,000 ಅಡಿಗಳಿಗಿಂತ ಹೆಚ್ಚು ಇಳಿಯಿತು. ಪ್ರಯಾಣಿಕರ ಕಿರುಚಾಟ ಮತ್ತು ವಿಮಾನದಿಂದ ಗಾಳಿಯ ಶಬ್ದ ಬರುತ್ತಿತ್ತು.ಕಾಕ್‌ಪಿಟ್‌ನ ನೆಲದ ಮೇಲೆ ಬಿದ್ದಾಗ ಮಚ್ಛಾರ್ ವಿಮಾನವನ್ನು ವಿಪತ್ತಿನಿಂದ ರಕ್ಷಿಸಲು ಇದು ತನ್ನ ಕೊನೆಯ ಅವಕಾಶ ಎಂದು ಅರಿತುಕೊಂಡರು. ಮುಚ್ಚಿದ ಕಾಕ್‌ಪಿಟ್ ಬಾಗಿಲನ್ನು ಒಳಗಿನಿಂದ ತೆರೆಯಲು ಅವರು ತಮ್ಮ ಎಲ್ಲಾ ಶಕ್ತಿಯನ್ನು ಬಳಸಿದರು. ಬಾಗಿಲು ತೆರೆದ ತಕ್ಷಣ ಹೊರಗೆ ಕಾಯುತ್ತಿದ್ದ ಪ್ರಯಾಣಿಕರು ಮತ್ತು ಸಿಬ್ಬಂದಿ ಬೇಗನೆ ಕಾಕ್‌ಪಿಟ್‌ಗೆ ಪ್ರವೇಶಿಸಿ ದಾಳಿಕೋರ ಸಹ-ಪೈಲಟ್‌ನನ್ನು ವಶಕ್ಕೆ ಪಡೆದರು. ವಿಮಾನವು ಸೌದಿ ಅರೇಬಿಯಾದ ತಬೂಕ್‌ನಲ್ಲಿ ತುರ್ತು ಭೂಸ್ಪರ್ಶ ಮಾಡಿತು.

ಇಸ್ರೇಲ್ ಪ್ರಧಾನಿ ನೆತನ್ಯಾಹು ಮಚ್ಛಾರ್ ಅವರ ಅಪ್ರತಿಮ ಧೈರ್ಯವನ್ನು ಶ್ಲಾಘಿಸಿ, ಅವರನ್ನು ಭಾರತ, ಇಸ್ರೇಲ್ ಮತ್ತು ಪ್ರಪಂಚದ ನಾಯಕ ಎಂದು ಕರೆದರು. ಇಸ್ರೇಲ್‌ನ ಮುಂಬರುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಜ್ಯೋತಿ ಬೆಳಗಿಸಲು ಅವರನ್ನು ಆಹ್ವಾನಿಸಲಾಗಿದೆ.

ಸಾಧಕ ಮಚ್ಛಾರ್ ಅವರ ಅತ್ಯುತ್ತಮ ಸಾಧನೆ ಹಾಗೂ ಕೊಡುಗೆಯನ್ನು ಗುರುತಿಸಿ ಪ್ರಶಸ್ತಿ, ನಗದು ಬಹುಮಾನಗಳು ಹಾಗೂ ಹಾರ್ದಿಕ ಶುಭಾಶಯಗಳು ಹರಿದುಬಂದಿವೆ.ಗುಜರಾತ್ ಸರಕಾರ ಅವರಿಗೆ ನಗದು ಬಹುಮಾನ ಜತೆಗೆ ರಾಜ್ಯ ಪ್ರಶಸ್ತಿ ಘೋಷಿಸಿದೆ.ವಿಶ್ವ ಹಿಂದೂ ಪರಿಷತ್ ಮಚ್ಛಾರ್‌ಗೆ ವಿಶಿಷ್ಟ ಶೌರ್ಯಕ್ಕಾಗಿ ಪ್ರತಿಷ್ಠಿತ 'ಅಶೋಕ ಚಕ್ರ'ನೀಡಿ ಗೌರವಿಸಲು ಒತ್ತಾಯಿಸಿದೆ.ಭಾರತೀಯ ವಾಯುಪಡೆ ಮಚ್ಛಾರ್ ಸಾಧನೆಗೆ ಪರ್ಯಾಯವಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದೆ.ಕೇಂದ್ರ ಸರಕಾರದಿಂದ ಅವರಿಗೆ ಅತ್ಯುನ್ನತ ನಾಗರಿಕ ಗೌರವಕ್ಕಾಗಿ ಒತ್ತಾಯ ಕೇಳಿಬಂದಿದೆ.

# ನಾಗ್ಪುರ: ಟ್ರಕ್ ಅಪಘಾತದಲ್ಲಿ ದಂಪತಿ, ಮಗ ಸಾವು; ಮತ್ತೊಂದು ಮಗುವಿಗೆ ಗಾಯ

ನಾಗ್ಪುರ, ಅ.4 - ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯಲ್ಲಿ ಕಂಟೈನರ್ ಟ್ರಕ್ ಒಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಮತ್ತು ಅವರ ನಾಲ್ಕು ವರ್ಷದ ಮಗ ಮೃತಪಟ್ಟಿದ್ದು, ಮತ್ತೊಂದು ಮಗು ಗಂಭೀರವಾಗಿ ಗಾಯಗೊಂಡಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಶನಿವಾರ ರಾತ್ರಿ 9.15ರ ಸುಮಾರಿಗೆ ಹಿಂಗ್ನಾ ಪೊಲೀಸ್ ಠಾಣಾ ವ್ಯಾಪ್ತಿಯ ವಾರ್ಧಾ ರಸ್ತೆಯಲ್ಲಿರುವ ಗವಾಸಿ ಮನಪುರ ಬಳಿ ಈ ಅಪಘಾತ ಸಂಭವಿಸಿದೆ ಎಂದು ಅವರು ಹೇಳಿದ್ದಾರೆ.

ದಂಪತಿ ಮತ್ತು ಅವರ ಇಬ್ಬರು ಮಕ್ಕಳು ಸ್ಕೂಟರ್‌ನಲ್ಲಿ ಪ್ರಯಾಣಿಸುತ್ತಿದ್ದಾಗ, ಹಿಂದಿನಿಂದ ಬಂದ ಕಂಟೈನರ್ ಟ್ರಕ್ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದಾಗಿ ವಾಹನದಲ್ಲಿದ್ದ ನಾಲ್ವರೂ ರಸ್ತೆಗೆ ಎಸೆಯಲ್ಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ದಂಪತಿ ಮತ್ತು ಅವರ ಒಬ್ಬ ಮಗ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರೆ, 6 ವರ್ಷದ ಇನ್ನೊಬ್ಬ ಮಗ ಗಾಯಗಳೊಂದಿಗೆ ಬದುಕುಳಿದಿದ್ದು, ಆತನನ್ನು ಚಿಕಿತ್ಸೆಗಾಗಿ ತಕ್ಷಣವೇ ಖಿಪ್ರಿಯ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ಮೃತರನ್ನು ಯೋಗೇಶ್ ನಾಯಕ್ (35), ಸುನೀತಾ ಯೋಗೇಶ್ ನಾಯಕ್ ಮತ್ತು ಗುಲ್ಮನ್ ಅಲಿಯಾಸ್ ಗೋಲು ಯೋಗೇಶ್ ನಾಯಕ್ (4) ಎಂದು ಗುರುತಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಂಟೈನರ್‌ಟ್ರಕ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಆತನ ಪತ್ತೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ನಾನು ನಿಧಿ ತಂದ ಶಾಲೆ ಎನ್‌ಸಿಪಿ ಸಂಸದನಿಂದ ಉದ್ಘಾಟನೆ: ಸುನಿಲ್ ತಟ್ಕರೆ ವಿರುದ್ಧ ಶಿವಸೇನೆ ಎಂಎಲ್‌ಎ ಗರಂ

ಮುಂಬಯಿ,ಅ.4 - ರಾಯಗಢ ಜಿಲ್ಲೆಯಲ್ಲಿ ಆಡಳಿತರೂಢ ಮಹಾಯುತಿಯೊಳಗಿನ ಆಂತರಿಕ ವಿವಾದಗಳು ಪದೇ ಪದೇ ಬಯಲಿಗೆ ಬರುತ್ತಿವೆ. ಅಭಿವೃದ್ಧಿ ಕೆಲಸದ ಕ್ರೆಡಿಟ್‌ಗಾಗಿ ಶಿವಸೇನೆ ಶಾಸಕ ಮಹೇಂದ್ರ ದಳವಿ ಮತ್ತು ಎನ್‌ಸಿಪಿ ಸಂಸದ ಸುನಿಲ್ ತಟ್ಕರೆ ಮಧ್ಯೆ ಮತ್ತೆ ಘರ್ಷಣೆ ಆರಂಭವಾಗಿದೆ. ರೋಹಾ ತಾಲೂಕಿನಲ್ಲಿರುವ ಖೈರಲೆ ಖುರ್ದ್ ಉರ್ದು ಶಾಲೆಗೆ ಹಣಕಾಸು ನೆರವು ಮತ್ತು ಉದ್ಘಾಟನೆ ವಿಚಾರದಲ್ಲಿ ದಳವಿ ಅವರು ತಟ್ಕರೆ ಅವರನ್ನು ಗುರಿಯಾಗಿಸಿಕೊಂಡಿದ್ದಾರೆ.

ರೋಹಾ ತಾಲೂಕಿನಲ್ಲಿರುವ ಖೈರಲೆ ಖುರ್ದ್ ಉರ್ದು ಶಾಲೆಗೆ ತಾವು ಹಣ ತಂದಿರುವುದಾಗಿ ದಳವಿ ಹೇಳಿಕೊಂಡಿದ್ದಾರೆ, ಆದರೆ ಸಂಸದ ತಟ್ಕರೆ ಈ ಶಾಲೆಯನ್ನು ಉದ್ಘಾಟಿಸಿದರು. ಶಿಷ್ಟಾಚಾರದ ಪ್ರಕಾರ, ನಮ್ಮೆಲ್ಲರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸುವುದು ಅಗತ್ಯವಾಗಿತ್ತು, ಆದರೆ ಎಂದಿನಂತೆ ತಟ್ಕರೆ ಅವರನ್ನು ಆಹ್ವಾನಿಸಲಿಲ್ಲ ಎಂದು ದಳವಿ ಆರೋಪಿಸಿದ್ದಾರೆ.

ರೋಹಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಷ್ಟಾಚಾರದ ಪ್ರಕಾರ ಉಸ್ತುವಾರಿ ಸಚಿವರ ಹೆಸರನ್ನು ಉಲ್ಲೇಖಿಸಲಾಗಿಲ್ಲ ಎಂದು ಹೇಳುವ ಮೂಲಕ ದಳವಿ,ತಟ್ಕರೆ ಅದನ್ನು ಮಾಡಿ ಜನರಿಗೆ ತೋರಿಸಬೇಕಿತ್ತು ಎಂದು ತಿಳಿಸಿದ್ದಾರೆ.

ಜನರು ಈಗ ಬುದ್ಧಿವಂತರು ಮತ್ತು ಜ್ಞಾನವುಳ್ಳವರು.ಕೆಲಸ ಮಾಡಿದವರು, ನಿಧಿ ತಂದವರು ಮಾತ್ರ ಕೆಲಸ ಮಾಡಬೇಕು ಎಂದು ದಳವಿ ತಟ್ಕರೆಯನ್ನು ಟೀಕಿಸಿದ್ದಾರೆ. ಜಿಲ್ಲೆಯ ಉದ್ಯಮದ ಎಲ್ಲಾ ನಿಧಿಗಳು ರೋಹಾದಲ್ಲಿ ಮತ್ತು ಒಂದೇ ಯೋಜನೆಗೆ ಏಕೆ ಎಂದು ಪ್ರಶ್ನಿಸಿರುವ ದಳವಿ ಅವರು,ಈ ಎಲ್ಲಾ ಸಮಸ್ಯೆಗಳಿಗೆ ಉಸ್ತುವಾರಿ ಸಚಿವರು ಡಿಪಿಸಿ ಸಭೆಯಲ್ಲಿ ಪ್ರತಿಕ್ರಿಯಿಸುತ್ತಾರೆ ಎಂದು ಹೇಳಿದ್ದಾರೆ.

# ಥಾಣೆ ಬುಲೆಟ್ ರೈಲು ನಿಲ್ದಾಣದ ಸುತ್ತಮುತ್ತ 'ಕೆಲಸದ ಸ್ಥಳಕ್ಕೆ ನಡೆದುಕೊಂಡು ಹೋಗುವ ಸಂಸ್ಕೃತಿ' ಉತ್ತೇಜಿಸಲು ಕ್ರೆಡೈ ಎಂಸಿಎಚ್‌ಐ ಒತ್ತು

ಥಾಣೆ, ಅ.4 - ಥಾಣೆಯ ಬುಲೆಟ್ ರೈಲು ನಿಲ್ದಾಣದ ಸುತ್ತಮುತ್ತ ಸ್ಪಷ್ಟವಾದ 'ಸಾರಿಗೆ-ಆಧಾರಿತ ಅಭಿವೃದ್ಧಿ' ನಿಯಮಗಳು, ಸರಳೀಕೃತ ವಾಣಿಜ್ಯ ಅಭಿವೃದ್ಧಿ ಪ್ರಕ್ರಿಯೆಗಳು ಮತ್ತು 'ಕೆಲಸದ ಸ್ಥಳಕ್ಕೆ ನಡೆದುಕೊಂಡು ಹೋಗುವ ಸಂಸ್ಕೃತಿ'ಯನ್ನು ಬೆಂಬಲಿಸುವ ಮೂಲಸೌಕರ್ಯಗಳ ಅಗತ್ಯವನ್ನು 'ಕ್ರೆಡೈ ಎಂಸಿಎಚ್‌ಐ ಥಾಣೆ' ಪ್ರತಿಪಾದಿಸಿದೆ.

ದಿಲ್ಲಿಯ ವಿಜ್ಞಾನ ಭವನದಲ್ಲಿ ನಡೆದ ಉನ್ನತ ಮಟ್ಟದ 'ಮುಕ್ತ ದೃಶ್ಯೀಕರಣ ವಿಚಾರ ಸಂಕಿರಣ'ದಲ್ಲಿ ಮುಂಬಯಿ - ಅಹ್ಮದಾಬಾದ್ ಹೈ-ಸ್ಪೀಡ್ ರೈಲು ಕಾರಿಡಾರ್‌ನಲ್ಲಿ ಬರಲಿರುವ ಥಾಣೆ ನಿಲ್ದಾಣದ ಅಭಿವೃದ್ಧಿ ನೀಲನಕ್ಷೆಯು ಪ್ರಮುಖ ಚರ್ಚಾ ವಿಷಯವಾಗಿತ್ತು ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

'ಜನ-ಕೇಂದ್ರಿತ, ಸುಸ್ಥಿರ ಮತ್ತು ಸಂಪರ್ಕಿತ ನಗರಗಳಿಗಾಗಿ ನಿಲ್ದಾಣ ಪ್ರದೇಶದ ಅಭಿವೃದ್ಧಿ' ಎಂಬ ವಿಷಯದಡಿ ನಡೆದ ಈ ವಿಚಾರ ಸಂಕಿರಣವು, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ರೈಲ್ವೆ ಸಚಿವಾಲಯ ಮತ್ತು ಜಪಾನ್ ಇಂಟರ್‌ನ್ಯಾಷನಲ್ ಕೋಆಪರೇಷನ್ ಏಜೆನ್ಸಿಗಳ ಜಂಟಿ ಉದ್ಯಮವಾದ 'ಪ್ರಾಜೆಕ್ಟ್-ಸ್ಮಾರ್ಟ್' ಮೇಲೆ ಗಮನ ಕೇಂದ್ರೀಕರಿಸಿತು.

ಸಾರಿಗೆ-ಆಧಾರಿತ ಅಭಿವೃದ್ಧಿ ಮೂಲಕ ಬುಲೆಟ್ ರೈಲು ನಿಲ್ದಾಣಗಳನ್ನು ಆರ್ಥಿಕ ಕೇಂದ್ರಗಳನ್ನಾಗಿ ಪರಿವರ್ತಿಸುವುದು ಇದರ ಗುರಿಯಾಗಿದೆ. ಈ ಕಾರಿಡಾರ್‌ನಲ್ಲಿರುವ 12 ನಿಲ್ದಾಣಗಳ ಪೈಕಿ, ಸಮಗ್ರ ಅಭಿವೃದ್ಧಿಗಾಗಿ ನಾಲ್ಕು ನಿಲ್ದಾಣಗಳನ್ನು ಮಾದರಿ ನಿಲ್ದಾಣಗಳಾಗಿ ಆಯ್ಕೆ ಮಾಡಲಾಗಿದೆ.ಮಹಾರಾಷ್ಟ್ರದ ಥಾಣೆ ಮತ್ತು ವಿರಾರ್, ಹಾಗೂ ಗುಜರಾತ್‌ನ ಸೂರತ್ ಮತ್ತು ಸಬರಮತಿ ಅದರಲ್ಲಿ ಸೇರಿವೆ ಎಂದು ಪ್ರಕಟಣೆ ತಿಳಿಸಿದೆ. ಥಾಣೆಯ ವಿಷಯದಲ್ಲಿ, 'ಲಾಸ್ಟ್-ಮೈಲ್ ಕನೆಕ್ಟಿವಿಟಿ' (ಅಂತಿಮ ಹಂತದ ಸಂಪರ್ಕ) ಹಾಗೂ ವಾಣಿಜ್ಯ, ಚಿಲ್ಲರೆ ವ್ಯಾಪಾರ ಮತ್ತು ವಸತಿ ಬೆಳವಣಿಗೆಯನ್ನು ಸಂಯೋಜಿಸಲು ಎಂಎಂಆರ್‌ಡಿಎನಂತಹ ರಾಜ್ಯ ಪ್ರಾಧಿಕಾರಗಳ ಸಹಯೋಗದೊಂದಿಗೆ ಸುತ್ತಮುತ್ತಲಿನ ಪ್ರದೇಶವನ್ನು ಮೂರು ಬಫರ್‌ವಲಯಗಳಾಗಿ ವಿಂಗಡಿಸುವ ಯೋಜನೆಯನ್ನು ಇದು ಒಳಗೊಂಡಿದೆ ಎಂದು ಅದು ಸೇರಿಸಿದೆ.

ಖಾಸಗಿ ಪಾಲುದಾರರಾಗಿ ಕ್ರೆಡೈ ಎಂಸಿಎಚ್‌ಐ ಥಾಣೆ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿತ್ತು. ಥಾಣೆಯ ಹೈ-ಸ್ಪೀಡ್ ರೈಲು ನಿಲ್ದಾಣದ ಸುತ್ತಮುತ್ತ ಸ್ಪಷ್ಟವಾದ ಟಿಒಡಿ ನಿಯಮಗಳು, ಸರಳೀಕೃತ ವಾಣಿಜ್ಯ ಅಭಿವೃದ್ಧಿ ಪ್ರಕ್ರಿಯೆಗಳು ಮತ್ತು ಕೆಲಸದ ಸ್ಥಳಕ್ಕೆ ನಡೆದುಕೊಂಡು ಹೋಗುವ ಸಂಸ್ಕೃತಿಯನ್ನು ಬೆಂಬಲಿಸುವ ಮೂಲಸೌಕರ್ಯಗಳ ಅಗತ್ಯವನ್ನು ಕ್ರೆಡೈ ಎಂಸಿಎಚ್‌ಐ ಥಾಣೆ ಅಧ್ಯಕ್ಷ ಸಚಿನ್ ಮಿರಾನಿ ಒತ್ತಿ ಹೇಳಿದರು ಎಂದು ಪ್ರಕಟಣೆ ತಿಳಿಸಿದೆ.

# ಥಾಣೆ: ನಾಗ್ಪುರ ವ್ಯಕ್ತಿಯ ಹತ್ಯೆಗೈದ ಪತ್ನಿಯ ಬಂಧನ

ಥಾಣೆ, ಅ.4 - ಒಂದೂವರೆ ತಿಂಗಳ ಹಿಂದೆ ನಾಗ್ಪುರದಲ್ಲಿ ನಡೆದ ತನ್ನ ಪತಿಯ ಹತ್ಯೆಗೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಮಹಿಳೆಯೊಬ್ಬಳನ್ನು ಥಾಣೆ ಪೊಲೀಸರು ಬಂಧಿಸಿದ್ದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ದೀಪಾಲಿ ಅಲಿಯಾಸ್ ಬಾಲಿ ವಿಜಯ್ ಸಾಳುಂಕೆ ಎಂದು ಗುರುತಿಸಲಾದ 29 ವರ್ಷದ ಆರೋಪಿಯು ವಿವಾಹೇತರ ಸಂಬಂಧವನ್ನು ಹೊಂದಿದ್ದಳು ಎನ್ನಲಾಗಿದೆ. ಈ ವಿಷಯ ಆಕೆಯ ಪತಿ, ನಾಗ್ಪುರದ ಅಜ್ನಿ ನಿವಾಸಿ ಹಾಗೂ ಆಟೋರಿಕ್ಷಾ ಚಾಲಕನಾಗಿದ್ದ ಗೌರವ್ ರಗ್ಡೆ (27) ಜತೆಗೆ ಕಲಹಕ್ಕೆ ಕಾರಣವಾಗಿತ್ತು ಎಂದು ಇಲ್ಲಿನ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ದಂಪತಿ ಆಗಸ್ಟ್‌ನಲ್ಲಿ ನಡೆದ ಘಟನೆಗೆ ಸುಮಾರು 8 ತಿಂಗಳ ಮೊದಲು ಅಂತರ್ಜಾತಿ ಪ್ರೇಮ ವಿವಾಹವಾಗಿದ್ದರು. ಆದರೆ, ದೀಪಾಲಿ ಮತ್ತು ರಿಷಿಕೇಶ್ ಖೋಡೆ ನಡುವಿನ ಸಂಬಂಧದ ಬಗ್ಗೆ ರಗ್ಡೆಗೆ ತಿಳಿದ ಬಳಿಕ ಅವರ ನಡುವೆ ಜಗಳಗಳು ಆರಂಭವಾದವು. ಬಳಿಕ ಆ ಮಹಿಳೆ ತನ್ನ ಪತಿಯ ಮನೆಯನ್ನು ತೊರೆದು ಪ್ರತ್ಯೇಕವಾಗಿ ವಾಸಿಸಲಾರಂಭಿಸಿದಳು ಎಂದು ಪೊಲೀಸರು ತಿಳಿಸಿದ್ದಾರೆ.

ಆ.20ರ ಮಧ್ಯಾಹ್ನ, ರಗ್ಡೆ ತನ್ನ ತಂದೆಗೆ ವಿಷಯ ತಿಳಿಸಿ, ದೀಪಾಲಿ ಮತ್ತು ಖೋಡೆ ಅವರೊಂದಿಗಿನ ವಿವಾದವನ್ನು ಬಗೆಹರಿಸಿಕೊಳ್ಳಲು ನಾಗ್ಪುರದ ನರೇಂದ್ರ ನಗರಕ್ಕೆ ತೆರಳಿದ್ದರು. ಖೋಡೆ ಆ ಸಮಯದಲ್ಲಿ ಸುಂದರ್‌ಬನ್ ಲೇಔಟ್‌ನಲ್ಲಿ ತನ್ನ ಇಬ್ಬರು ಸಹಚರರೊಂದಿಗೆ ಮದ್ಯಪಾನ ಮಾಡುತ್ತಿದ್ದ.

ಅಂದು ಸಂಜೆ 5 ಗಂಟೆ ಸುಮಾರಿಗೆ, ರಗ್ಡೆ ಮತ್ತು ಆ ಗುಂಪಿನ ನಡುವೆ ತೀವ್ರ ವಾಗ್ವಾದ ನಡೆಯಿತು. ಸಂತ್ರಸ್ತನ ತಂದೆಯ ಪ್ರಕಾರ, ದೀಪಾಲಿಯ ಪ್ರಚೋದನೆಯ ಮೇರೆಗೆ ಖೋಡೆ ಮತ್ತು ಆತನ ಸಹಚರರು ನರೇಂದ್ರ ನಗರದ ಚರಂಡಿ ಸೇತುವೆಯ ಬಳಿ ರಗ್ಡೆ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದರು. ಗಂಭೀರವಾಗಿ ಗಾಯಗೊಂಡಿದ್ದ ರಗ್ಡೆಯನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಅಲ್ಲಿ ವೈದ್ಯರು ಆತ ಮೃತಪಟ್ಟಿರುವುದಾಗಿ ಘೋಷಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಥಾಣೆಯ ಡಾ. ಬಾಬಾಸಾಹೇಬ್ ಅಂಬೇಡ್ಕರ್ ರೋಡ್ ನಿವಾಸಿಯಾಗಿರುವ ಆರೋಪಿ ಮಹಿಳೆ ಬಳಿಕ ತಲೆಮರೆಸಿಕೊಂಡಿದ್ದಳು. ಆಕೆಯನ್ನು ಶನಿವಾರ ಇಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ ಮಹಿಳೆ ಅಪರಾಧದಲ್ಲಿ ತನ್ನ ಶಾಮೀಲನ್ನು ಒಪ್ಪಿಕೊಂಡಿದ್ದಾಗಿ ಥಾಣೆ ಅಪರಾಧ ವಿಭಾಗದ ಸುಲಿಗೆ ವಿರೋಧಿ ಘಟಕದ ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್‌ಶೈಲೇಶ್ ಸಾಳ್ವಿ ತಿಳಿಸಿದ್ದಾರೆ. ಆಕೆಯನ್ನು ನಾಗ್ಪುರದ ಬೆಲ್ತಾರೋಡಿ ಪೊಲೀಸರಿಗೆ ಒಪ್ಪಿಸಲಾಗಿದ್ದು,ಇತರ ಆರೋಪಿಗಳ ಬಗ್ಗೆ ತಮ್ಮ ಬಳಿ ಯಾವುದೇ ಮಾಹಿತಿ ಇಲ್ಲ ಎಂದೂ ಅವರು ಹೇಳಿದ್ದಾರೆ.

# ಬೀಡ್ : 13 ವರ್ಷದ ಬಾಲಕಿ ಜತೆಗೆ 25 ವರ್ಷದ ವ್ಯಕ್ತಿಯ ವಿವಾಹ; ತನಿಖೆಗೆ ಮಕ್ಕಳ ಕಲ್ಯಾಣ ಸಮಿತಿ ಆದೇಶ

ಬೀಡ್, ಅ.4 - ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ 13 ವರ್ಷದ ಬಾಲಕಿ ಮತ್ತು 25 ವರ್ಷದ ವ್ಯಕ್ತಿಯ ಮಧ್ಯೆ ನಡೆದಿದೆ ಎನ್ನಲಾದ ವಿವಾಹ ಪ್ರಕರಣದ ಕುರಿತು ತನಿಖೆ ನಡೆಸಲು ಮಕ್ಕಳ ಕಲ್ಯಾಣ ಸಮಿತಿಯು ಆದೇಶಿಸಿದೆ ಎಂದು '1098 ಚೈಲ್ಡ್‌ಲೈನ್' ನೊಂದಿಗೆ ಗುರುತಿಸಿಕೊಂಡಿರುವ ಕಾರ್ಯಕರ್ತರೊಬ್ಬರು ತಿಳಿಸಿದ್ದಾರೆ.

ಕಾರ್ಯಕರ್ತ ಟಾಟಾವಶೀಲ್ ಕಾಂಬ್ಳೆ ಅವರ ಪ್ರಕಾರ, ಈ ಕಾನೂನುಬಾಹಿರ ವಿವಾಹವು ಅಷ್ಟಿ ತಾಲೂಕಿನ ಅಂಬೋರಾ ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮವೊಂದರಲ್ಲಿ ಜು.30 ರಂದು ನಡೆದಿದೆ ಎಂದು ವರದಿಯಾಗಿದೆ.

ದೂರು ಸ್ವೀಕರಿಸಿದ ಬಳಿಕ ಮಕ್ಕಳ ಕಲ್ಯಾಣ ಸಮಿತಿಯು ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ತಹಸೀಲ್ದಾರ್ ಮತ್ತು ಬ್ಲಾಕ್ ಅಭಿವೃದ್ಧಿ ಅಧಿಕಾರಿ ಸೇರಿದಂತೆ ಜಿಲ್ಲಾ ಅಧಿಕಾರಿಗಳಿಗೆ ಈ ವಿಷಯದ ಬಗ್ಗೆ ತನಿಖೆ ನಡೆಸುವಂತೆ ಆದೇಶಿಸಿದೆ ಎಂದು ಚೈಲ್ಡ್‌ಲೈನ್ ಕಾರ್ಯಕರ್ತರು ತಿಳಿಸಿದ್ದಾರೆ.

'ಚೈಲ್ಡ್‌ಲೈನ್' ಅಥವಾ '1098' ಸಂಖ್ಯೆಯು ಸಂಕಷ್ಟದಲ್ಲಿರುವ ಮಕ್ಕಳಿಗಾಗಿ ದೇಶಾದ್ಯಂತ ಲಭ್ಯವಿರುವ 24 ಗಂಟೆಯ ಉಚಿತ ತುರ್ತು ದೂರವಾಣಿ ಸೇವೆಯಾಗಿದೆ.

ಈ ಬಾಲ್ಯವಿವಾಹಕ್ಕೆ ಸಮ್ಮತಿ ಸೂಚಿಸಿದ ಪೋಷಕರು ಮತ್ತು ಸಂಬಂಧಿಕರು ಹಾಗೂ ಇದಕ್ಕೆ ಸಹಕರಿಸಿದ ಪುರೋಹಿತರು ಅಥವಾ ಮಧ್ಯವರ್ತಿಗಳು 'ಬಾಲ್ಯವಿವಾಹ ನಿಷೇಧ ಕಾಯ್ದೆ'ಯ ಅಡಿಯಲ್ಲಿ ಕ್ರಿಮಿನಲ್ ಆರೋಪಗಳನ್ನು ಎದುರಿಸಬೇಕಾಗಬಹುದು ಎಂದು ಅವರು ಹೇಳಿದರು. ಆ ಬಾಲಕಿಯ ಸುರಕ್ಷತೆ ಮತ್ತು ರಕ್ಷಣೆಗಾಗಿ ಆಕೆಯನ್ನು ತಕ್ಷಣವೇ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವುದನ್ನು ಖಚಿತಪಡಿಸುವಂತೆ ಕಾಂಬ್ಳೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಕಾಂಬ್ಳೆ ಅವರ ಪ್ರಕಾರ, ಮಹಾರಾಷ್ಟ್ರ ವಿಧಾನ ಪರಿಷತ್ತಿನ ಉಪಸಭಾಪತಿ ನೀಲಂ ಗೋರ್ಹೆ ಅವರು ಕೂಡ ಈ ವಿಷಯದಲ್ಲಿ ಕಾನೂನು ಕ್ರಮ ಕೈಗೊಳ್ಳುವಂತೆ ಬೀಡ್ ಜಿಲ್ಲಾಧಿಕಾರಿ ವಿವೇಕ್ ಜಾನ್ಸನ್ ಅವರಿಗೆ ಸೂಚಿಸಿದ್ದಾರೆ.

# ನಾಗ್ಪುರ: ಕಬ್ಬಿಣದ ಗೇಟ್ ಕುಸಿದು ಭದ್ರತಾ ಸಿಬ್ಬಂದಿ ಸಾವು, ಮತ್ತೊಬ್ಬರಿಗೆ ಗಾಯ

ನಾಗ್ಪುರ, ಅ.4 - ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯಲ್ಲಿರುವ ವಿಮಾನಯಾನ ಸೌಲಭ್ಯ ಕೇಂದ್ರವೊಂದರಲ್ಲಿ ಕಬ್ಬಿಣದ ಗೇಟ್ ಕುಸಿದು ಬಿದ್ದ ಪರಿಣಾಮ 46 ವರ್ಷದ ಭದ್ರತಾ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆ 'ಮಿಹಾನ್ ಎಸ್‌ಇಝಡ್'ನಲ್ಲಿರುವ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇ ಪಕ್ಕದಲ್ಲಿರುವ 'ಇಂಡೆಮಾರ್ ಏವಿಯೇಷನ್'ನ ವಿಮಾನ ನಿರ್ವಹಣೆ ಮತ್ತು ದುರಸ್ತಿ ಯೋಜನಾ ಸ್ಥಳದಲ್ಲಿ ಈ ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪೊಲೀಸರ ಪ್ರಕಾರ, ತಾಂತ್ರಿಕ ದೋಷವೊಂದರ ಕಾರಣದಿಂದಾಗಿ ವಿಮಾನವನ್ನು ನಿರ್ವಹಣೆಗಾಗಿ ಈ ಕೇಂದ್ರಕ್ಕೆ ತರಲಾಗಿತ್ತು. ವಿಮಾನವನ್ನು ಒಳಗೆ ಕರೆದೊಯ್ಯಲು ಗೇಟ್ ತೆರೆಯುತ್ತಿದ್ದಾಗ ಕಬ್ಬಿಣದ ಗೇಟ್ ಕುಸಿದು ಬಿದ್ದಿದೆ. ಆ ಸಮಯದಲ್ಲಿ ಆ ಪ್ರದೇಶದಲ್ಲಿ 6 ಮಂದಿ ಭದ್ರತಾ ಸಿಬ್ಬಂದಿ ಕರ್ತವ್ಯದಲ್ಲಿದ್ದರು.ಭಾರವಾದ ಗೇಟ್‌ನ ಒಂದು ಭಾಗವು ಹತ್ತಿರದಲ್ಲಿದ್ದ ಇಬ್ಬರ ಮೇಲೆ ಇದ್ದಕ್ಕಿದ್ದಂತೆ ಕುಸಿದು ಬಿದ್ದಿದ್ದರಿಂದ ಅವರು ಅದರಡಿ ಸಿಕ್ಕಿಹಾಕಿಕೊಂಡರು ಎಂದು ಪೊಲೀಸರು ತಿಳಿಸಿದ್ದಾರೆ.

ಮಾಹಿತಿ ತಿಳಿದ ಕೂಡಲೇ ಸೋನೆಗಾಂವ್ ಪೊಲೀಸರು ಸ್ಥಳಕ್ಕೆ ಧಾವಿಸಿದರು. ಇತರ ಕಾರ್ಮಿಕರು ಕುಸಿದ ಗೇಟ್‌ನ್ನು ತೆರವುಗೊಳಿಸಲು ಸಹಾಯ ಮಾಡಿದರು ಮತ್ತು ಗಾಯಗೊಂಡ ಸಿಬ್ಬಂದಿಯನ್ನು ತಕ್ಷಣವೇ ಏಮ್ಸ್ ನಾಗ್ಪುರಕ್ಕೆ ಕರೆದೊಯ್ಯಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ. ಹಿಂಗ್ನಾದ ದೇವೋಲಿ ನಿವಾಸಿ ಕೈಲಾಸ್ ಪುಂಡಲಿಕ್‌ರಾವ್ ಚಾಪೇಕರ್ ಅವರನ್ನು ಆಸ್ಪತ್ರೆಗೆ ಕರೆತಂದಾಗ ವೈದ್ಯರು ಮೃತಪಟ್ಟಿದ್ದಾಗಿ ಘೋಷಿಸಿದರು; ಕಲಮ್ನಾದ ನಿವಾಸಿ ಅಭಿಷೇಕ್ ಸುಖದೇವ್ ಸಂಗೋಡೆ (25) ಚಿಕಿತ್ಸೆ ಪಡೆಯುತ್ತಿರುವುದಾಗಿ ಅವರು ತಿಳಿಸಿದ್ದಾರೆ. ಪೊಲೀಸರು ಘಟನೆ ಸಂಬಂಧ ಆಕಸ್ಮಿಕ ಸಾವು ಪ್ರಕರಣವನ್ನು ದಾಖಲಿಸಿಕೊಂಡಿದ್ದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.

## ಸುಡೊಕು 1932

| | | | | | | | | |
|---|---|---|---|---|---|---|---|---|
| 2 | | 8 | 5 | 1 | 9 | 6 | | 7 |
| | | | | | 8 | | | 1 |
| | | 7 | 4 | 6 | | 8 | | 9 |
| 3 | 2 | | | | 7 | | | 8 |
| 1 | | 9 | | 4 | | 7 | | 5 |
| 4 | | | 2 | | | | 9 | 3 |
| 6 | | 3 | | 5 | 1 | 9 | | |
| 8 | | | 3 | | | | | |
| 7 | | 1 | 9 | 2 | 6 | 3 | | 4 |

MANGAL SENACHA, BANGALORE

1ರಿಂದ 9 ರ ನಡುವಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1931

| | | | | | | | | |
|---|---|---|---|---|---|---|---|---|
| 7 | 1 | 9 | 8 | 5 | 3 | 2 | 6 | 4 |
| 4 | 5 | 3 | 6 | 2 | 9 | 7 | 1 | 8 |
| 6 | 2 | 8 | 4 | 7 | 1 | 9 | 5 | 3 |
| 9 | 8 | 2 | 7 | 3 | 5 | 1 | 4 | 6 |
| 1 | 3 | 6 | 9 | 4 | 8 | 5 | 7 | 2 |
| 5 | 7 | 4 | 1 | 6 | 2 | 8 | 3 | 9 |
| 8 | 4 | 7 | 5 | 9 | 6 | 3 | 2 | 1 |
| 3 | 6 | 1 | 2 | 8 | 7 | 4 | 9 | 5 |
| 2 | 9 | 5 | 3 | 1 | 4 | 6 | 8 | 7 |

## ಪದಬಂಧ - 2015



**ಎಡದಿಂದ ಬಲಕ್ಕೆ**

1.ಅಧ್ಯಾಪಕರ ಪಾಠ ಕಲಿಸುವಿಕೆ -4
3.ಪ್ರವಾಸಿ ಹೊಂದಿದ ಏಳ್ಗೆ -4
5.ಯಾವುದೇ ವಸೂಲಿ ಇಲ್ಲದೆ, ಎಲ್ಲರನ್ನೂ ಕ್ಷಮಿಸುವ ಇಳೆ -4
6.ರಸಸ್ವಾದಕ್ಕೆ ಉಂಟಾಗುವ ಅಡ್ಡಿ -4
8.ಜಮೀನಿನ ಹರವು, ಪ್ರಸಿದ್ಧಿ-4
10.ನಮ್ಮ ನಾಯಕರನ್ನು ಆಯ್ಕೆ ಮಾಡಲು ಅಗತ್ಯವಾದ ಅರ್ಹತೆ -4
12.ಶುದ್ಧವಾದ ಮನಸ್ಸುಳ್ಳವನು -4
14.ರಾಜ್ಯಕ್ಕೇ ಪಾಲಕನಂತಿರುವ ಗೌವರ್ನರ್ -4
15.ಸೂರ್ಯನ ಹೊಳಪು -4
16.ನಕ್ಷತ್ರ, ಗ್ರಹ ಮುಂತಾದವುಗಳಿಂದ ಉಂಟಾಗುವ ಲಾಭ -4

**ಮೇಲಿನಿಂದ ಕೆಳಕ್ಕೆ**

1.ಅವನಿಗೆ ಬಲು ಆತುರ-4
2.ದೇವಾಲಯದ ಸಭಾಮಂಟಪ -4
3.ಪರರಿಂದ ಸಿಗುವ ದಾನವನ್ನು ಪಡೆಯುವುದು -4
4.ಮನುಷ್ಯನಂತೆ ಇರುವ ವಿಷ್ಣು -4
7.ಸಮವಾಗಿದ್ದು, ಸರಿಯಾಗಿದೆ -4
9.ವರ್ತಮಾನದಲ್ಲಿ ನೆನಪಾಗುವ ಇವನು ಮಹಾವೀರ -4
10.ಮಮತೆ ಹೆಚ್ಚಾಗಿ ಕಾರವಾಗಿದೆ -4
11.ನಾಟ್ಯ ಶಿವನ ರೂಪ-4
12.ಪುಷ್ಪದಂತಿರುವ ಈಕೆ ಕರ್ಣನೆಂದೇ ಪ್ರಸಿದ್ಧನಾಗಿರುವ ಕನ್ನಡದ ಹಿರಿಯ ನಟನ ಹೆಂಡತಿ-4
13.ತಗ್ಗು- ದಿಣ್ಣೆಗಳಿಲ್ಲದ ಒಂದೇ ರೀತಿಯ ನೆಲ -4

ಉತ್ತರ - 2014



# ಬಿಲ್ಲವರ ಎಸೋಸಿಯೇಶನ್ ಮುಂಬಯಿ ನಾಲಾಸೋಪಾರ-ವಿರಾರ್ ಸ್ಥಳೀಯ ಕಚೇರಿಯಲ್ಲಿ 172ನೇ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ





ನಾಲಾಸೋಪಾರ, ಅ.4 - ಬಿಲ್ಲವರ ಎಸೋಸಿಯೇಶನ್ ಮುಂಬಯಿಯ ನಾಲಾಸೋಪಾರ-ವಿರಾರ್ ಸ್ಥಳೀಯ ಕಚೇರಿ ವತಿಯಿಂದ ಬ್ರಹ್ಮಶ್ರೀ ನಾರಾಯಣ ಗುರುಗಳ 172ನೇ ಜಯಂತ್ಯೋತ್ಸವವನ್ನು ಸೆಪ್ಟೆಂಬರ್ 6ರ ಭಾನುವಾರದಂದು ನಾಲಾಸೋಪಾರ ಪೂರ್ವದ ಫೈಯರ್ ಬ್ರಿಗೇಡ್ ಸಮೀಪದ ಗ್ಯಾಲಕ್ಸಿ ಸಭಾಗೃಹದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳೊಂದಿಗೆ ಭಕ್ತಿಭಾವದಿಂದ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಬಿಲ್ಲವರ ಎಸೋಸಿಯೇಶನ್ ಮುಂಬಯಿಯ ಅಧ್ಯಕ್ಷ ಹರೀಶ್ ಜಿ. ಅಮೀನ್, ಗೌರವ ಪ್ರಧಾನ ಕಾರ್ಯದರ್ಶಿ ಹರೀಶ್ ಜಿ. ಸಾಲ್ಯಾನ್, ಗೌ. ಅಧ್ಯಕ್ಷ ಎಲ್. ವಿ. ಅಮೀನ್, ಜೊತೆ ಕಾರ್ಯದರ್ಶಿಗಳಾದ ಕೇಶವ ಕೆ. ಕೋಟ್ಯಾನ್, ವಿಶ್ವನಾಥ ತೋನ್ಸೆ, ಯುವಾಭ್ಯುದಯ ಉಪ ಸಮಿತಿಯ ಕಾರ್ಯಾಧ್ಯಕ್ಷ ನಿಲೇಶ್ ಪೂಜಾರಿ ಪಲಿಮಾರು ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದು ಶುಭ ಹಾರೈಸಿದರು.

ಅರ್ಚಕ ರಮೇಶ್ ಶಾಂತಿ ನೇತೃತ್ವದಲ್ಲಿ ಶ್ರೀ ನಾರಾಯಣ ಗುರುಗಳ ಪ್ರತಿಮೆಗೆ ಗುರುಪೂಜೆ ನೆರವೇರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಸ್ಥಳೀಯ ಕಚೇರಿಯ ಸದಸ್ಯರಿಂದ ಭಜನಾ ಕಾರ್ಯಕ್ರಮ ನಡೆಯಿತು. ನಂತರ ಮಹಾ ಮಂಗಳಾರತಿ ನೆರವೇರಿಸಲಾಯಿತು.





ಸಮಾಜಮುಖಿ ಕಾರ್ಯದ ಅಂಗವಾಗಿ, ಆರ್ಥಿಕವಾಗಿ ಹಿಂದುಳಿದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗುವ ಉದ್ದೇಶದಿಂದ ಬಿಲ್ಲವರ ಎಸೋಸಿಯೇಶನ್ ಮುಂಬಯಿಯ ಅಧ್ಯಕ್ಷ ಹರೀಶ್ ಜಿ. ಅಮೀನ್ ಶೈಕ್ಷಣಿಕ ಧನ ಸಹಾಯವನ್ನು ವಿತರಿಸಿದರು. ಕಾರ್ಯಕ್ರಮಕ್ಕೆ ಸ್ಥಳಾವಕಾಶ ಒದಗಿಸಿದ ಶಶಿಧರ್ ಶೆಟ್ಟಿ (ಗ್ಯಾಲಕ್ಸಿ ಹೋಟೆಲ್) ಅವರಿಗೆ ಕೃತಜ್ಞತೆ ಸಲ್ಲಿಸಲಾಯಿತು. ಅನ್ನ ಸಂತರ್ಪಣೆಗೆ ಅಶೋಕ್ ಸಾಲ್ಯಾನ್ (ಆರಾಮ್ ಹೋಟೆಲ್) ಹಾಗೂ ಶ್ರೀಧರ್ ಪೂಜಾರಿ (ಶುಭ್ ಸಾಗರ್ ಹೋಟೆಲ್) ಸಹಕಾರ ನೀಡಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸಮಾಜ ಸೇವಕರಾದ ಮೋಹನ್ ಶೆಟ್ಟಿ, ಪ್ರಕಾಶ್ ಶೆಟ್ಟಿ, ಸುರೇಶ್ ಪೂಜಾರಿ (ಎನ್. ಕೆ. ಬಾರ್) ಹಾಗೂ ಅವರ ಪರಿವಾರ, ವಸ್ಯಾ ಸ್ಥಳೀಯ ಕಚೇರಿಯ ಕಾರ್ಯಾಧ್ಯಕ್ಷ ಕರುಣಾಕರ ಅಮೀನ್ ಹಾಗೂ ಸಮಿತಿಯ ಸದಸ್ಯರು ಭಾಗವಹಿಸಿದ್ದರು ಹಾಗೂ ವಸ್ಯಾಯ ಮಹಿಳಾ ಸದಸ್ಯೆಯರಿಂದ ಕುಣಿತ ಭಜನೆಯು ನಡೆಯಿತು.

ತೇಜಾ ಅಂಚನ್ ಅರ್ನಾಲಾ ಹಾಗೂ ಅವರ ಪರಿವಾರ, ವಿಠ್ಠಲ್ ಪೂಜಾರಿ ಹಾಗೂ ವಿಕಾಸ್ ಸಾಲ್ಯಾನ್ ಸೇರಿದಂತೆ ಸಮಾಜದ ಗಣ್ಯರು ಉಪಸ್ಥಿತರಿದ್ದರು. ವಿರಾರ್-ನಾಲಾಸೋಪಾರ ಕರ್ನಾಟಕ ಸಂಘದ ಅಧ್ಯಕ್ಷ ಪ್ರವೀಣ್ ಕಣಂಜಾರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭ ಹಾರೈಸಿದರು. ತುಳುಕೂಟದ ಮಹಿಳಾ ಅಧ್ಯಕ್ಷೆ ಯಶೋಧಾ ಕೋಟ್ಯಾನ್ ಉಪಸ್ಥಿತರಿದ್ದರು.

ನಾಲಾಸೋಪಾರ-ವಿರಾರ್ ಸ್ಥಳೀಯ ಕಚೇರಿಯ ಅಧ್ಯಕ್ಷ ಗಣೇಶ್ ವಿ. ಸುವರ್ಣ, ಕಾರ್ಯದರ್ಶಿ ಆನಂದ ಕೋಟ್ಯಾನ್, ಕೋಶಾಧಿಕಾರಿ ಶೋಭಾ ಸುವರ್ಣ ಹಾಗೂ ಎಲ್ಲಾ ಸಮಿತಿಯ ಸದಸ್ಯರು ಕಾರ್ಯಕ್ರಮದ ಯಶಸ್ವಿಗೆ ಸಂಪೂರ್ಣ ಸಹಕಾರ ನೀಡಿದರು. ಅವರ ಮಾರ್ಗದರ್ಶನ ಹಾಗೂ ಸದಸ್ಯರ ಒಗ್ಗಟ್ಟಿನ ಪ್ರಯತ್ನದಿಂದ ಕಾರ್ಯಕ್ರಮವು ಸುಸೂತ್ರವಾಗಿ ಹಾಗೂ ಅರ್ಥಪೂರ್ಣವಾಗಿ ನೆರವೇರಿತು.

ಶ್ರೀ ನಾರಾಯಣ ಗುರುಗಳ 'ಒಂದೇ ಜಾತಿ, ಒಂದೇ ಮತ, ಒಂದೇ ದೇವರು' ಎಂಬ ಮಾನವೀಯ ಸಂದೇಶವನ್ನು ಸ್ಮರಿಸುತ್ತಾ ನಡೆದ ಜಯಂತ್ಯೋತ್ಸವದಲ್ಲಿ ಸಮಾಜದ ಪದಾಧಿಕಾರಿಗಳು, ಸದಸ್ಯರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಏಷ್ಯನ್ ಗೇಮ್ಸ್‌ಗೆ ವರ್ಣರಂಜಿತ ತೆರೆ; 85 ಪದಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದ ಭಾರತ



ನಗೋಯಾ, ಅ.4 - ಜಪಾನ್‌ನ ಐಚಿ-ನಗೋಯಾದಲ್ಲಿ 15 ದಿನಗಳ ಕಾಲ ನಡೆದಿದ್ದ 20ನೇ ಆವೃತ್ತಿಯ ಏಷ್ಯನ್ ಗೇಮ್ಸ್‌ಗೆ ಭಾನುವಾರ ವರ್ಣರಂಜಿತವಾಗಿ ತೆರೆ ಬಿದ್ದಿತು. ಸಂಗೀತ, ನೃತ್ಯ, ಸಾಂಸ್ಕೃತಿಕ ಪ್ರದರ್ಶನಗಳು ಸಮಾರೋಪ ಸಮಾರಂಭದ ಸೊಬಗು ಹೆಚ್ಚಿಸಿದವು. ಅಂತಿಮವಾಗಿ, 2030ರ ಏಷ್ಯಾಡ್ ಆತಿಥ್ಯ ವಹಿಸಲಿರುವ ಕತಾರ್‌ನ ದೋಹಾ ನಗರಕ್ಕೆ ಏಷ್ಯನ್ ಒಲಿಂಪಿಕ್ ಕೌನ್ಸಿಲ್‌ನ ಧ್ವಜ ಹಸ್ತಾಂತರಿಸಲಾಯಿತು.

ಸಮಾರೋಪ ಸಮಾರಂಭದ ಕ್ರೀಡಾಪಟುಗಳ ಪಥ ಸಂಚಲನದಲ್ಲಿ 2 ಚಿನ್ನ ಸಹಿತ ತ್ರಿವಳಿ ಪದಕ ವಿಜೇತೆ ಶೂಟರ್ ನೀರೂ ಢಂಡಾ ತ್ರಿವರ್ಣ ಧ್ವಜದೊಂದಿಗೆ ಭಾರತ ತಂಡವನ್ನು ಮುನ್ನಡೆಸಿದರು.

1951ರಲ್ಲಿ ನವದೆಹಲಿಯಲ್ಲಿ ನಡೆದ ಮೊಟ್ಟಮೊದಲ ಏಷ್ಯನ್ ಕ್ರೀಡಾಕೂಟದ ಜ್ಯೋತಿ ಮತ್ತು ಧ್ವಜವನ್ನು ಕ್ರೀಡಾಂಗಣಕ್ಕೆ ಮೆರವಣಿಗೆಯಲ್ಲಿ ತರಲಾಯಿತು ಮತ್ತು ಕತಾರ್‌ನ ಪ್ರಧಾನಿ ಮೊಹಮ್ಮದ್ ಬಿನ್ ಅಬ್ದುಲ್ ರೆಹಮಾನ್ ಬಿನ್ ಜಾಸ್ಸಿಮ್ ಅಲ್ ಥಾನಿ ಅವರಿಗೆ ಹಸ್ತಾಂತರಿಸಲಾಯಿತು. ಅಂತಿಮವಾಗಿ ಧ್ವಜವನ್ನು ಟೋಕಿಯೊ 2020 ರ ಒಲಿಂಪಿಕ್ ಚಾಂಪಿಯನ್ ಮತ್ತು ಹೈಜಂಪ್‌ನಲ್ಲಿ ಮೂರು ಬಾರಿ ವಿಶ್ವ ಚಾಂಪಿಯನ್ ಆಗಿರುವ ಕತಾರ್‌ನ ಮುತಾಜ್ ಎಸ್ಸಾ ಬರ್ಶಿಮ್ ಅವರಿಗೆ ಹಸ್ತಾಂತರಿಸಲಾಗಿದೆ. 2006ರ ನಂತರ ದೋಹಾ 2ನೇ ಬಾರಿ ಏಷ್ಯಾಡ್ ಆತಿಥ್ಯ ವಹಿಸಿಕೊಂಡಿದೆ.

ಭಾರತವು 21 ಚಿನ್ನ , 27 ಬೆಳ್ಳಿ ಮತ್ತು 37 ಕಂಚು ಸೇರಿದಂತೆ ಒಟ್ಟು 85 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವನ್ನು ಪಡೆಯಿತು. ಇದರಲ್ಲಿ ಅಥ್ಲೆಟಿಕ್ಸ್ ಅತಿ ಹೆಚ್ಚು 24 ಪದಕಗಳನ್ನು ತಂದುಕೊಟ್ಟರೆ, ಶೂಟಿಂಗ್‌ನಲ್ಲಿ 15 ಪದಕ ಲಭಿಸಿತು. ಭಾರತವು ಗೆದ್ದ ಒಟ್ಟು ಚಿನ್ನದ ಪದಕಗಳ ಪೈಕಿ ಬಿಲ್ಲುಗಾರಿಕೆ ಐದು ಪ್ರಶಸ್ತಿಗಳೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ಶೂಟಿಂಗ್ ಮತ್ತು ಬಾಕ್ಸಿಂಗ್ ತಲಾ ಮೂರು ಪದಕಗಳನ್ನು ತಮ್ಮದಾಗಿಸಿಕೊಂಡವು. ಕುಸ್ತಿ, ಕ್ರಿಕೆಟ್, ಹಾಕಿ ಮತ್ತು ಕಬಡ್ಡಿ ತಲಾ ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡವು.

ಹ್ಯಾಂಗ್‌ಝೌನಲ್ಲಿ ಗೆದ್ದ ದಾಖಲೆಯ 107 ಪದಕಗಳಿಗಿಂತ ಕಡಿಮೆಯಿದ್ದರೂ, ಅಂತಿಮ ಹಂತದಲ್ಲಿನ ಗಮನಾರ್ಹ ಚೇತರಿಕೆ, ಐತಿಹಾಸಿಕ ಸಾಧನೆಗಳು ಹಾಗೂ ವೈಯಕ್ತಿಕ ಮತ್ತು ತಂಡದ ವಿಭಾಗಗಳಲ್ಲಿನ ಚಿನ್ನದ ಪದಕಗಳು ಭಾರತದ ಅಭಿಯಾನವು ಅತ್ಯುತ್ತಮವಾಗಿ ಅಂತ್ಯಗೊಳ್ಳುವುದನ್ನು ಖಚಿತಪಡಿಸಿದವು.

ಸತತ 12ನೇ ಆವೃತ್ತಿಯಲ್ಲಿ ಚೀನಾ ಅಗ್ರಸ್ಥಾನ ಗಳಿಸಿತು . ಅದು 169 ಚಿನ್ನ, 89 ಬೆಳ್ಳಿ ಮತ್ತು 83 ಕಂಚು ಸೇರಿದಂತೆ ಒಟ್ಟು 341 ಪದಕಗಳನ್ನು ಗೆದ್ದಿದೆ. ಇದು ವಿದೇಶದಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನವಾಗಿದೆ. ಆತಿಥೇಯ ಜಪಾನ್ 269 ಪದಕಗಳೊಂದಿಗೆ (83 ಚಿನ್ನ, 95 ಬೆಳ್ಳಿ ಮತ್ತು 91 ಕಂಚು) ಎರಡನೇ ಸ್ಥಾನ ಪಡೆದರೆ, ದಕ್ಷಿಣ ಕೊರಿಯಾ 39 ಚಿನ್ನ, 43 ಬೆಳ್ಳಿ ಮತ್ತು 68 ಕಂಚಿನೊಂದಿಗೆ 3ನೇ ಸ್ಥಾನ ಪಡೆದಿದೆ. ಒಸಿಎ ಮುಖ್ಯಸ್ಥ ಶೇಖ್ ಜೋವಾನ್ ಬಿನ್ ಹಮದ್ ಅಲ್ ಥಾನಿ ಅವರು, ಕ್ರೀಡಾಪಟುಗಳು ಮತ್ತು ಅವರ ಪ್ರದರ್ಶನವನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಜೊತೆಗೆ, ಕ್ರೀಡಾಪಟುಗಳಿಗೆ ನೀಡಿದ ಬೆಂಬಲಕ್ಕಾಗಿ ಅವರು ಎಲ್ಲಾ ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳು ಹಾಗೂ ನಗೋಯಾ ನಗರಕ್ಕೆ ಧನ್ಯವಾದ ಅರ್ಪಿಸಿದರು.


ಇಂದು ಸಂಜೆ ಘನ್ಸೋಲಿಯಲ್ಲಿ ''ನಂದಗೋಕುಲ''

ಶ್ರೀ ಯಕ್ಷಿಣಿ ಬ್ರಹ್ಮಲಿಂಗೇಶ್ವರ ದೇವರ ಸಂಪೂರ್ಣ ಅನುಗ್ರಹದೊಂದಿಗೆ
ಯಕ್ಷ ನಕ್ಷತ್ರ ಟ್ರಸ್ಟ್ (ರಿ.) ಶ್ರೀ ಕಿರಾಡಿ ಮೇಳ ಇವರಿಂದ

ಇಂದು ತಾ. 05-10-2026ನೇ ಸೋಮವಾರ ಸಂಜೆ 5.30ಕ್ಕೆ

ಯಕ್ಷಕಾಶಿ ಶ್ರೀ ಮೂಕಾಂಬಿಕಾ ದೇವಸ್ಥಾನ ಘನ್ಸೋಲಿ ಇಲ್ಲಿ
ಧರ್ಮದರ್ಶಿ ಅಣ್ಣಿ ಸಿ. ಶೆಟ್ಟಿಯವರ ಶುಭ ಆಶೀರ್ವಾದದೊಂದಿಗೆ



''ನಂದಗೋಕುಲ''



ಸಭಾ ಕಾರ್ಯಕ್ರಮ

ಸಭಾಧ್ಯಕ್ಷರು : ಅಣ್ಣಿ ಸಿ. ಶೆಟ್ಟಿ (ಧರ್ಮದರ್ಶಿ, ಶ್ರೀ ಮೂಕಾಂಬಿಕಾ ಮಂದಿರ, ಘನ್ಸೋಲಿ)
ಮುಖ್ಯ ಅತಿಥಿಗಳು : ಸುರೇಶ್ ಕಾಂಚನ್
(ಗೌ. ಅಧ್ಯಕ್ಷರು, ಮೊಗವೀರ ಸೇವಾ ಸಂಘ ಬಗ್ವಾಡಿ ಹೋಬಳಿ, ಮುಂಬಯಿ)
ಜಯಾನಂದ ದೇವಾಡಿಗ (ಕಲಾ ಸಂಘಟಕರು, ಮುಂಬಯಿ)
ಸಂತೋಷ್ ಶೆಟ್ಟಿ (ಹೋಟೆಲ್ ಸ್ವಾದ್, ಮುಲುಂಡ್)
ಸತೀಶ್ ಶೆಟ್ಟಿ ನಂದ್ರೊಳ್ಳಿ (ಹೋಟೆಲ್ ಇಗೋ ಡೊಂಬಿವಲಿ)
ಇಂದು ಸಂಜೆ
ಭಾಸ್ಕರ ಶ್ರೀಯಾನ್ (ಉದ್ಯಮಿ, ಮುಂಬಯಿ)
ಇಂದು ಸಂಜೆ
ಗಣೇಶ ಮೆಂಡನ್
(ಗೌ. ಪ್ರ. ಕಾರ್ಯದರ್ಶಿ, ಮೊಗವೀರ ಸೇವಾ ಸಂಘ ಬಗ್ವಾಡಿ ಹೋಬಳಿ, ಮುಂಬಯಿ)
ರತ್ನಾಕರ ಕುಂದರ್ (ಉದ್ಯಮಿ, ಮುಂಬಯಿ)
ಅಶೋಕ ಮೊಗವೀರ ಮರತುರ್, ಅಶೋಕ ಮೆಂಡನ್ ಮೊಳಹಳ್ಳಿ
ಯೋಗೀಶ (ಉದ್ಯಮಿ, ಮುಂಬಯಿ)
ಜಯರಾಮ ಶೆಟ್ಟಿ ಎಣ್ಣೆಹೊಳೆ (ಕಲಾಸಂಘಟಕರು, ಮುಂಬಯಿ)
ಸಂತೋಷ ಪುತ್ರನ್ (ಅಧ್ಯಕ್ಷರು, ಮೊಗವೀರ ಮಹಾಜನ ಸೇವಾ ಸಂಘ, ಮುಂಬಯಿ)

ಸರ್ವರಿಗೂ ಆದರದ ಸ್ವಾಗತ


# ಜಮ್ಮು - ಕಾಶ್ಮೀರ ತಂಡ ಸೋಲಿಸಿ ಇರಾನಿ ಕಪ್ ಗೆದ್ದ 'ರೆಸ್ಟ್ ಆಫ್ ಇಂಡಿಯಾ'



ಶ್ರೀನಗರ, ಅ.4 - ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಜಮ್ಮು ಮತ್ತು ಕಾಶ್ಮೀರ ತಂಡವನ್ನು 167 ರನ್‌ಗಳಿಂದ ಸೋಲಿಸಿದ 'ರೆಸ್ಟ್ ಆಫ್ ಇಂಡಿಯಾ' ತಂಡವು 2026-27ರ ಇರಾನಿ ಕಪ್ ಅನ್ನು ಗೆದ್ದುಕೊಂಡಿತು. ಈ ಪಂದ್ಯದಲ್ಲಿ ಮುಕೇಶ್ ಕುಮಾರ್ ಮತ್ತು ಆಕಾಶ್ ದೀಪ್ ಅವರ ಸಾಂಘಿಕ ದಾಳಿಯ ಪರಿಣಾಮವಾಗಿ, ಹಾಲಿ ರಣಜಿ ಟ್ರೋಫಿ ಚಾಂಪಿಯನ್ ತಂಡವು 111 ರನ್‌ಗಳಿಗೆ ಆಲೌಟ್ ಆಯಿತು. ಗೆಲುವಿಗೆ 279 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಜಮ್ಮು ಮತ್ತು ಕಾಶ್ಮೀರ ತಂಡವು, ಊಟದ ವಿರಾಮದ ನಂತರ ಕೇವಲ 22 ರನ್‌ಗಳಿಗೆ ತಮ್ಮ ಕೊನೆಯ ಏಳು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಹಂತದಲ್ಲಿ ಮುಕೇಶ್ 33 ರನ್‌ಗಳಿಗೆ 6 ವಿಕೆಟ್ ಹಾಗೂ ಆಕಾಶ್ ದೀಪ್ 25 ರನ್‌ಗಳಿಗೆ 3 ವಿಕೆಟ್ ಪಡೆದರು. ಈ ಫಲಿತಾಂಶದೊಂದಿಗೆ 'ರೆಸ್ಟ್ ಆಫ್ ಇಂಡಿಯಾ' ತಂಡವು ತನ್ನ 31ನೇ ಇರಾನಿ ಕಪ್ ಪ್ರಶಸ್ತಿಯನ್ನು (ಒಂದು ಪ್ರಶಸ್ತಿಯನ್ನು ಹಂಚಿಕೊಂಡಿದ್ದನ್ನೂ ಒಳಗೊಂಡಂತೆ) ಮುಡಿಗೇರಿಸಿಕೊಂಡಿತು ಹಾಗೂ ಕಳೆದ ಐದು ಸೀಸನ್‌ಗಳಲ್ಲಿ ಮೂರನೇ ಬಾರಿಗೆ ಈ ಸಾಧನೆ ಮಾಡಿತು. ಜಮ್ಮು ಮತ್ತು ಕಾಶ್ಮೀರಕ್ಕೆ ಈ ಗುರಿ ಕಠಿಣವೆನಿಸಿದರೂ, ಮೊದಲ ಇನ್ನಿಂಗ್ಸ್‌ನಲ್ಲಿ 41 ರನ್‌ಗಳ ಮುನ್ನಡೆ ಸಾಧಿಸಿದ್ದರಿಂದ ಪ್ರಶಸ್ತಿ ಗೆಲ್ಲಲು ಅವರಿಗೆ ಪಂದ್ಯವನ್ನು ಡ್ರಾ ಮಾಡಿಕೊಂಡರೆ ಸಾಕಿತ್ತು. ಶುಭಂ ಖಜುರಿಯಾ(36) ಮತ್ತು ಕಮ್ರಾನ್ ಇಕ್ಬಾಲ್(32) ಆರಂಭಿಕ ವಿಕೆಟ್‌ಗೆ 54 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿಕೊಟ್ಟರು.

ಕಳೆದ ರಣಜಿ ಟ್ರೋಫಿ ಫೈನಲ್‌ನಲ್ಲಿ ಶತಕ ಬಾರಿಸಿದ ಇಕ್ಬಾಲ್ ಅವರನ್ನು ದೀರ್ಘಕಾಲದ ಬಳಿಕ ಕಣಕ್ಕಿಳಿದ ವೇಗದ ಬೌಲರ್ ಆಕಾಶ್ ದೀಪ್, ಎಲ್‌ಬಿಡಬ್ಲ್ಯೂ ಬಲೆಗೆ ಬೀಳಿಸಿದರು. ನಂತರ ಮುಕೇಶ್ ಕುಮಾರ್15ನೇ ಓವರ್‌ನಲ್ಲಿ ಎರಡು ವಿಕೆಟ್‌ಗಳನ್ನು ಕಬಳಿಸಿದರು. ಅವರು ಶುಭಂ ಪುಂಡೀರ್ ಅವರನ್ನು ಎಲ್‌ಬಿಡಬ್ಲ್ಯೂ ಮೂಲಕ ಔಟ್ ಮಾಡಿದರು ಮತ್ತು ನಂತರ ಜಮ್ಮು-ಕಾಶ್ಮೀರದ ನಾಯಕ ಪರಸ್ ಡೋಗ್ರಾ ಅವರನ್ನು ಬೌಲ್ಡ್ ಮಾಡುವ ಮೂಲಕ ಆತಿಥೇಯ ತಂಡದ ಮೊತ್ತವನ್ನು 3 ವಿಕೆಟ್‌ಗೆ 65 ರನ್‌ಗಳಿಗೆ ಸೀಮಿತಗೊಳಿಸಿದರು. ಜಮ್ಮು ಮತ್ತು ಕಾಶ್ಮೀರ ತಂಡವು ಭೋಜನ ವಿರಾಮದ ವೇಳೆಗೆ 3 ವಿಕೆಟ್‌ಗೆ 89 ರನ್ ಗಳಿಸಿತ್ತು; ಆಗ ಖಜುರಿಯಾ ಮತ್ತು ಅಬ್ದುಲ್ ಸಮದ್ ಕ್ರೀಸ್‌ನಲ್ಲಿದ್ದರು. ಆದರೆ, ವಿರಾಮದ ನಂತರದ ಮೊದಲ ಎಸೆತದಲ್ಲೇ ಆಕಾಶ್ ದೀಪ್ ಖಜುರಿಯಾ ಅವರನ್ನು ಔಟ್ ಮಾಡಿದರು ಮತ್ತು ಆ ನಂತರ ತಂಡದ ಇನ್ನಿಂಗ್ಸ್ ವೇಗವಾಗಿ ಕುಸಿಯಿತು.

ಮುಕೇಶ್ ಕುಮಾರ್ ಅವರು ಕನ್ಹಯ್ಯ ವಾಧವನ್ ಅವರನ್ನು ಔಟ್ ಮಾಡಿದ ನಂತರ ಆಬಿದ್ ಮುಷ್ತಾಕ್, ಉಮರ್ ನಜೀರ್ ಮತ್ತು ಸುನಿಲ್ ಕುಮಾರ್ ಅವರ ವಿಕೆಟ್‌ಗಳನ್ನು ಕಬಳಿಸುವ ಮೂಲಕ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 11ನೇ ಬಾರಿಗೆ ಐದು ವಿಕೆಟ್‌ಗಳ ಸಾಧನೆ ಮಾಡಿದರು. ಆಕಾಶ್ ದೀಪ್ ಅವರು ಸಾಹಿಲ್ ಲೋತ್ರಾ ಅವರ ವಿಕೆಟ್ ಪಡೆದರು. ಇದರೊಂದಿಗೆ ಜಮ್ಮು ಮತ್ತು ಕಾಶ್ಮೀರ ತಂಡವು 28.4 ಓವರ್‌ಗಳಲ್ಲಿ 111 ರನ್‌ಗಳಿಗೆ ಆಲೌಟ್ ಆಯಿತು.

ಇದಕ್ಕೂ ಮುನ್ನ, 'ರೆಸ್ಟ್ ಆಫ್ ಇಂಡಿಯಾ' ತಂಡವು 319 ರನ್‌ಗಳಿಗೆ ಆಲೌಟ್ ಆಗುವ ಮೂಲಕ ತನ್ನ ಎರಡನೇ ಇನ್ನಿಂಗ್ಸ್‌ಗೆ ತೆರೆ ಎಳೆದಿತು. ಮೊದಲ ಇನ್ನಿಂಗ್ಸ್‌ನಲ್ಲಿ 68 ರನ್ ಗಳಿಸಿದ್ದ ಕನ್ನಡಿಗ ಸ್ಮರಣ್, ಎರಡನೇ ಇನ್ನಿಂಗ್ಸ್‌ನಲ್ಲಿ 135 ರನ್ ಗಳಿಸಿ ತಂಡದ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಮುಕೇಶ್ ಚೌಧರಿ ಔಟ್ ಆಗುವ ಮೊದಲು, ಸ್ಮರಣ್ ಮತ್ತು ಅವರು ಒಂಬತ್ತನೇ ವಿಕೆಟ್‌ಗೆ 113 ರನ್‌ಗಳನ್ನು ಸೇರಿಸಿ 'ರೆಸ್ಟ್ ಆಫ್ ಇಂಡಿಯಾ' ತಂಡದ ಮೊತ್ತವನ್ನು 8 ವಿಕೆಟ್‌ಗೆ 197 ರನ್‌ಗಳಿಂದ 310 ರನ್‌ಗಳಿಗೆ ಏರಿಸಿದರು. ತಮ್ಮ ಮೊದಲ ಇನ್ನಿಂಗ್ಸ್‌ನಲ್ಲಿ 237 ರನ್‌ಗಳಿಗೆ ಆಲೌಟ್ ಆದ ನಂತರ 'ರೆಸ್ಟ್ ಆಫ್ ಇಂಡಿಯಾ' ತಂಡವು ಒತ್ತಡಕ್ಕೆ ಸಿಲುಕಿತ್ತು. ಇದಕ್ಕೆ ಪ್ರತಿಯಾಗಿ ಜಮ್ಮು ಮತ್ತು ಕಾಶ್ಮೀರ ತಂಡವು 278 ರನ್‌ಗಳನ್ನು ಗಳಿಸಿತ್ತು. ಆದರೆ, ಸ್ಮರಣ್ ಅವರು ಎರಡನೇ ಇನ್ನಿಂಗ್ಸ್‌ನಲ್ಲಿ ಗಳಿಸಿದ ಶತಕವು ಹಾಲಿ ಚಾಂಪಿಯನ್‌ಗಳಿಗೆ ಬೃಹತ್ ಗುರಿಯನ್ನು ಒಡ್ಡಿತು, ಅದನ್ನು ತಲುಪಲು ಅಥವಾ ನಿಭಾಯಿಸಲು ಅವರಿಗೆ ಸಾಧ್ಯವಾಗಲಿಲ್ಲ.

## ಫೀಲ್ಡಿಂಗ್ ಲೋಪವೇ ಸೋಲಿಗೆ ಕಾರಣ : ನಾಯಕ ಶುಭಮನ್ ಗಿಲ್



ಚಂಡೀಗಢ, ಅ.4 - ಮೂರನೇ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ ವೆಸ್ಟ್ ಇಂಡೀಸ್ ವಿರುದ್ಧ ಹೀನಾಯ ಸೋಲು ಕಾಣುವ ಸರಣಿಯನ್ನು 3-0ಯಲ್ಲಿ ಕ್ಲೀನ್ ಸ್ವೀಪ್ ಮಾಡುವ ಅವಕಾಶ ತಪ್ಪಿಸಿಕೊಂಡಿತು. ಅದ್ಭುತ ಬ್ಯಾಟಿಂಗ್ ಮೂಲಕ 352 ರನ್‌ಗಳ ಬೃಹತ್ ಗುರಿಯನ್ನು ರಕ್ಷಿಸಿಕೊಳ್ಳುವಲ್ಲಿ ವಿಫಲವಾಯಿತು. ಪಂದ್ಯದ ನಂತರ ಮಾತನಾಡಿದ ನಾಯಕ ಶುಭಮನ್ ಗಿಲ್ , ಮೈದಾನದಲ್ಲಿ ಆಟಗಾರರು ಮಾಡಿದ ತಪ್ಪುಗಳೇ ಈ ಸೋಲಿಗೆ ಪ್ರಮುಖ ಕಾರಣ ಎಂದು ತಿಳಿಸಿದ್ದಾರೆ.

ಸರಣಿಯನ್ನು 2-1 ಅಂತರದಿಂದ ಗೆದ್ದಿರುವುದಕ್ಕೆ ತೃಪ್ತಿ ವ್ಯಕ್ತಪಡಿಸಿದರೂ, ತಂಡವು ಇನ್ನೂ ಸುಧಾರಿಸಿಕೊಳ್ಳಬೇಕಾದ ಕ್ಷೇತ್ರಗಳಿವೆ ಎಂದು ಗಿಲ್ ಒತ್ತಿ ಹೇಳಿದ್ದಾರೆ. ಪಂದ್ಯವು ತಮ್ಮ ನಿಯಂತ್ರಣದಲ್ಲಿದ್ದಂತೆ ಕಂಡಿತಾದರೂ, ಅಂತಿಮ ಓವರ್‌ಗಳಲ್ಲಿ ವೆಸ್ಟ್ ಇಂಡೀಸ್ ಬ್ಯಾಟರ್‌ಗಳು ಪಂದ್ಯದ ಚಿತ್ರಣವನ್ನೇ ಬದಲಿಸಿ ಗೆಲುವನ್ನು ತಮ್ಮದಾಗಿಸಿಕೊಂಡರು ಎಂದು ಗಿಲ್ ತಿಳಿಸಿದ್ದಾರೆ. ಈ ಪಂದ್ಯದಲ್ಲಿ ನಮ್ಮ ಫೀಲ್ಡಿಂಗ್ ಕಳಪೆಯಾಗಿತ್ತು. ಫೀಲ್ಡಿಂಗ್ ಲೋಪಗಳು ಮತ್ತು ನಿಧಾನಗತಿಯ ಓವರ್-ರೇಟ್‌ನಿಂದಾಗಿ ನಿಗದಿತ ಸಮಯಕ್ಕಿಂತ ನಾಲ್ಕು ಓವರ್‌ಗಳಷ್ಟು ಹಿಂದೆ ಬಿದ್ದಿದ್ದು ತಂಡಕ್ಕೆ ದುಬಾರಿಯಾಯಿತು ಎಂದು ತಿಳಿಸಿದ್ದಾರೆ.


ಕರ್ನಾಟಕ CLASSIFIED
ಬೇಕಾಗಿದ್ದಾರೆ ಶೈಕ್ಷಣಿಕ ವ್ಯಾಪಾರ ವಿವಾಹ ಸ್ಥಳ ಸಂಬಂಧಿ ಟ್ರಾವೆಲ್ಸ್ ಆಟೋ ಮೊಬೈಲ್ಸ್
ಕ್ಲಾಸಿಫೈಡ್‌ಗಾಗಿ ಇ-ಮೇಲ್ ಐಡಿ adambika@gmail.com • ಇಂದೇ ಸಂಪರ್ಕಿಸಿ - 8108110772
"ಕರ್ನಾಟಕ ಮಲ್ಲ - ಜಾಹೀರಾತಿನ ವಿಶ್ವಾಸರ್ಹ ಜೊತೆಗಾರ" ಅಗತ್ಯ ನಿಮ್ಮದು ಜಾಹೀರಾತು ನಮ್ಮದು

ಜ್ಯೋತಿಷ್ಯ
ಸಾಗರ್ ಜ್ಯೋತಿಷ್ಯ, ಉದ್ಯೋಗ -ವ್ಯಾಪಾರ, ಪ್ರೇಮವಿವಾಹ, ಶತ್ರು ನಾಶ, ಗುಪ್ತಸಮಸ್ಯೆ, ವಶೀಕರಣ ಯಂತ್ರ, ಜನ್ಮಕುಂಡಲಿ. 9870126299 ನವಿ ಮುಂಬಯಿ
LAL2026-09Y.5-012157

ಹುಟ್ಟುಹಬ್ಬ
ಕರ್ನಾಟಕ ಹುಟ್ಟು ಹಬ್ಬದ ಧಮಾಕಾ
ಸಣ್ಣ ಮಕ್ಕಳಿಗಾಗಿ ಹುಟ್ಟಿದ ದಿನದ ಶುಭ ಕಾಮನೆಗಳು ವಿಶೇಷವಾಗಿ 12 ವರ್ಷದವರೆಗಿನ ಮಕ್ಕಳಿಗಾಗಿ
ಸೈಜ್ 4 X 6
ರೂಪಾಯಿ 250/-
ವಾರ್ಷಿಕ ಚಂದಾದಾರಿಕೆ ಗ್ರಾಹಕರಿಗೆ ಉಚಿತ ಜಾಹೀರಾತು
ಸಂಪರ್ಕ: ವಿಶ್ವಜಿತ್ ಚವ್ಹಾಣ್
7720898111
8108110772
LAL2026-08S.127-009201

ಓದುಗರಿಗೆ ಮಾಹಿತಿ
ಓದುಗರು ಯಾವುದೇ ಹಣಕಾಸಿನ ವಹಿವಾಟುಗಳನ್ನು ಮಾಡುವ ಮೊದಲು "ಕರ್ನಾಟಕ ಮಲ್ಲ" ಪತ್ರಿಕೆಯಲ್ಲಿ ಪ್ರಕಟವಾಗುವ ವಿವಿಧ ಜಾಹೀರಾತುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು.
"ಕರ್ನಾಟಕ ಮಲ್ಲ" ಪತ್ರಿಕೆಯು ಜಾಹೀರಾತುದಾರರು ತಮ್ಮ ಉತ್ಪನ್ನಗಳು ಅಥವಾ ಸೇವೆಗಳ ಕುರಿತು ಮಾಡುವ ಯಾವುದೇ ಹಕ್ಕುಗಳನ್ನು ಖಾತರಿಪಡಿಸುವುದಿಲ್ಲ.
ಜಾಹೀರಾತುದಾರರು ಜಾಹೀರಾತಿನಲ್ಲಿ ಮಾಡಿದ ಹಕ್ಕುಗಳನ್ನು ಪೂರೈಸಲು ವಿಫಲವಾದರೆ, ಯಾವುದೇ ಪರಿಣಾಮಗಳಿಗೆ ದೈನಂದಿನ "ಕರ್ನಾಟಕ ಮಲ್ಲ" ಪತ್ರಿಕೆ ಗುಂಪಿನ ಮುದ್ರಕ, ಪ್ರಕಾಶಕರು, ಸಂಪಾದಕರು ಮತ್ತು ಮಾಲೀಕರು ಜವಾಬ್ದಾರರಾಗಿರುವುದಿಲ್ಲ.
ಓದುಗರು ದಯವಿಟ್ಟು ಇದನ್ನು ಗಮನಿಸಬೇಕು.
WAL2026-09SA0-000117

ವಿಶೇಷ ಸೂಚನೆ
ಜಾಹೀರಾತಿನ ಫಾರ್ಮ್‌ನಲ್ಲಿ ನೀಡಲಾದ ಮೂಲ ಶಬ್ದಗಳ ಗೆರೆಗಳ ಪ್ರಕಾರ ಜಾಹೀರಾತಿನ ಬಿಲ್ ನೀಡಲಾಗುತ್ತದೆ. ಈ ಬಗ್ಗೆ ತಿಳಿಸುವುದೇನೆಂದರೆ ಪ್ರಕಟಿಸಲು ನೀಡಲಾದ ಜಾಹೀರಾತು ಇಂಗ್ಲೀಷ್‌ನಲ್ಲಿದ್ದಲ್ಲಿ ಜಾಹೀರಾತು ಫಾರ್ಮ್‌ನಲ್ಲಿ ಮೂಲ ಇಂಗ್ಲೀಷ್ ಗೆರೆಗಳ ಪ್ರಕಾರವೇ ಜಾಹೀರಾತಿನ ಬಿಲ್ ತೆಗೆದುಕೊಳ್ಳಲಾಗುವುದು. ಅದಕ್ಕಾಗಿ ಭಾಷಾಂತರ ಮಾಡಿದ (ಕನ್ನಡ) ಶಬ್ದಗಳ ಗೆರೆಗಳ ಪ್ರಕಾರ ತೆಗೆದುಕೊಳ್ಳಲಾಗುವುದಿಲ್ಲ. ಜಾಹೀರಾತು ಫಾರ್ಮ್‌ನಲ್ಲಿದ್ದ ಗೆರೆ ಮತ್ತು ಪ್ರಕಟಿಸಲಾದ ಜಾಹೀರಾತಿನ ಗೆರೆಗಳಲ್ಲಿ ವ್ಯತ್ಯಾಸವಿರಬಹುದು. ಇದನ್ನು ಏಜೆನ್ಸಿ ಮತ್ತು ಜಾಹೀರಾತುದಾರರು ಗಮನಿಸಬೇಕಾಗಿ ವಿನಂತಿ.
-ವ್ಯವಸ್ಥಾಪಕ
WAL2026-09SA0-000116


## 'ಗ್ರೇಟ್ ಮ್ಯಾನ್ ಧೋನಿ' ಅವರ ಸಲಹೆ ಈ ಚೇಸ್‌ಗೆ ಕಾರಣ: ವಿಂಡೀಸ್ ನಾಯಕ ಶಾಯ್ ಹೋಪ್



ಚಂಡೀಗಢ, ಅ.4 - ಆತಿಥೇಯ ಭಾರತ ವಿರುದ್ಧದ ಮೂರನೇ ಏಕದಿನ ಪಂದ್ಯದಲ್ಲಿ ವೆಸ್ಟ್ ಇಂಡೀಸ್‌ಗೆ ಐತಿಹಾಸಿಕ ಗೆಲುವು ತಂದುಕೊಟ್ಟ ನಾಯಕ ಶಾಯ್ ಹೋಪ್ ಅವರು ತಮ್ಮ ಅದ್ಭುತ ಚೇಸಿಂಗ್ ಹಿಂದೆ ಇರುವುದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಎಂ.ಎಸ್. ಧೋನಿ ಅವರ ಸಲಹೆ ಎಂದು ಬಹಿರಂಗಪಡಿಸಿದ್ದಾರೆ. ಧೋನಿ ಅವರು ನೀಡಿದ ಅಮೂಲ್ಯ ಸಲಹೆ ಒತ್ತಡದ ಸಂದರ್ಭದಲ್ಲಿ ಹೇಗೆ ಆಡಬೇಕು, ಪಂದ್ಯವನ್ನು ಹೇಗೆ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು ಎಂದು ಕಲಿಸಿದೆ ಎಂದು ಹೋಪ್ ಹೇಳಿದ್ದಾರೆ.

ಭಾರತ ನೀಡಿದ್ದ 352 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ವೆಸ್ಟ್ ಇಂಡೀಸ್ ತಂಡಕ್ಕೆ ಶಾಯ್ ಹೋಪ್ ಅಜೇಯ 162 ರನ್‌ಗಳ ನೆರವಿನಿಂದ ಭರ್ಜರಿ ಗೆಲುವು ತಂದುಕೊಟ್ಟರು. ಪಂದ್ಯದ ಬಳಿಕ ಮಾತನಾಡಿದ ಹೋಪ್, ತಂಡದ ಮೇಲೆ ನಿಯಂತ್ರಣ ಸಾಧಿಸಲು ಧೋನಿ ನೀಡಿದ ಸಲಹೆ ಸಹಾಯಕ್ಕೆ ಬಂದಿತು ಎಂದಿದ್ದಾರೆ. ಧೋನಿ ಗ್ರೇಟ್ ಮ್ಯಾನ್. ಅವರು ನನಗೆ ಒಂದು ವಿಷಯ ಹೇಳಿದ್ದರು, ನೀವು ಎಷ್ಟೇ ದೊಡ್ಡ ಗುರಿಯನ್ನು ಬೆನ್ನಟ್ಟುತ್ತಿದ್ದರೂ ಆರಂಭದಲ್ಲೇ ಆ ದೊಡ್ಡ ಗುರಿಯ ಬಗ್ಗೆ ಚಿಂತಿಸಬೇಡಿ. ಆರಂಭದಲ್ಲಿ ನಿಧಾನವಾಗಿ ಹಂತಹಂತವಾಗಿ ಇನಿಂಗ್ಸ್ ಕಟ್ಟಿ ಮತ್ತು ನೀವು ಆಡುವ ಆ ಕ್ಷಣದ ಆಟದ ಮೇಲೆ ಮಾತ್ರ ಗಮನಹರಿಸಿ ಎಂದು ಧೋನಿ ಸಂದೇಶ ನೀಡಿದ್ದರು. ಆ ಸಲಹೆ ಇಂದು ನೆರವಿಗೆ ಬಂದಿತು ಎಂದಿದ್ದಾರೆ.

**352 ರನ್‌ಗಳ ಗುರಿ ಇದ್ದರೂ ಆತಂಕಪಡದ ಹೋಪ್**

ವೆಸ್ಟ್ ಇಂಡೀಸ್‌ಗೆ ಗೆಲ್ಲಲು 352 ರನ್‌ಗಳ ಬೃಹತ್ ಗುರಿ ಇತ್ತು. ಈ ಬೃಹತ್ ಗುರಿ ಕಂಡಾಗ ಆರಂಭದಲ್ಲೇ ಒತ್ತಡಕ್ಕೆ ಸಿಲುಕುವ ಸಾಧ್ಯತೆ ಇರುತ್ತದೆ. ಆದರೆ ಹೋಪ್ ಮಾತ್ರ ತಮ್ಮ ಇನಿಂಗ್ಸ್ ಅನ್ನು ನಿಧಾನವಾಗಿ ಕಟ್ಟುತ್ತಾ ವಿಕೆಟ್ ಕಾಪಾಡಿಕೊಂಡರು. ಮಾತ್ರವಲ್ಲ, ಅಗತ್ಯವಿದ್ದಾಗ ಸುಲಭ ಬಾಲ್‌ಗಳಿಗೆ ಬೌಂಡರಿ ಪಡೆಯುತ್ತಾ ರನ್‌ರೇಟ್ ಕುಸಿಯದಂತೆ ನೋಡಿಕೊಂಡರು. ಅಂತಿಮ ಹಂತದವರೆಗೂ ಅಜೇಯರಾಗಿ ಉಳಿದ ಅವರು 162 ರನ್‌ಗಳಿಸಿ ವೆಸ್ಟ್ ಇಂಡೀಸ್‌ಗೆ ಐತಿಹಾಸಿಕ ಗೆಲುವು ತಂದುಕೊಟ್ಟರು.

## ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿ: ಯುವರಾಜ್ ಸಿಂಗ್ ಸಿಡಿಲಬ್ಬರಕ್ಕೆ ತತ್ತರಿಸಿದ ಆಸ್ಟ್ರೇಲಿಯಾ



ಶಾರ್ಜಾ, ಅ.4 - ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿಯ ಮೊದಲ ಪಂದ್ಯದಲ್ಲೇ ಭರ್ಜರಿ ಜಯ ಸಾಧಿಸಿ ಇಂಡಿಯಾ ಚಾಂಪಿಯನ್ಸ್ ಶುಭಾರಂಭ ಮಾಡಿದೆ. ಶಾರ್ಜಾ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ಚಾಂಪಿಯನ್ಸ್ ತಂಡದ ನಾಯಕ ಉಸ್ಮಾನ್ ಖ್ವಾಜಾ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿ ಇಂಡಿಯಾ ಚಾಂಪಿಯನ್ಸ್ ನಿರೀಕ್ಷಿತ ಆರಂಭ ಪಡೆದಿರಲಿಲ್ಲ.

ಆರಂಭಿಕ ದಾಂಡಿಗ ಅಂಬಾಟಿ ರಾಯುಡು ಕೇವಲ 4 ರನ್‌ಗಳಿಸಿ ಔಟಾದರೆ, ಆ ಬಳಿಕ ಬಂದ ಸ್ಟುವರ್ಟ್ ಬಿನ್ನಿ 13 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಇನ್ನು ಮತ್ತೋರ್ವ ಆರಂಭಿಕ ಬ್ಯಾಟರ್‌ನಮನ್ ಓಜಾ 26 ಎಸೆತಗಳಲ್ಲಿ ಕಲೆಹಾಕಿದ್ದು ಕೇವಲ 31 ರನ್‌ಗಳು ಮಾತ್ರ. ಈ ಹಂತದಲ್ಲಿ 4ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಯುವರಾಜ್ ಸಿಂಗ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದರು. ಆಸ್ಟ್ರೇಲಿಯಾ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಯುವಿ 6 ಭರ್ಜರಿ ಸಿಕ್ಸರ್ ಹಾಗೂ 5 ಫೋರ್‌ಗಳೊಂದಿಗೆ ಕೇವಲ 44 ಎಸೆತಗಳಲ್ಲಿ 71 ರನ್ ಚಚ್ಚಿದರು. ಯುವರಾಜ್ ಸಿಂಗ್‌ಗೆ ಉತ್ತಮ ಸಾಥ್ ನೀಡಿದ ಯೂಸುಫ್ ಪಠಾಣ್ ಕೇವಲ 20 ಎಸೆತಗಳಲ್ಲಿ 4 ಸಿಕ್ಸರ್‌ಗಳೊಂದಿಗೆ 37 ರನ್ ಬಾರಿಸಿದರು. ಇನ್ನು ಅಂತಿಮ ಹಂತದಲ್ಲಿ ಅಬ್ಬರಿಸಿದ ರಿಷಿ ಧವನ್ 12 ಎಸೆತಗಳಲ್ಲಿ 4 ಸಿಕ್ಸ್ ಹಾಗೂ 1 ಫೋರ್‌ನೊಂದಿಗೆ 35 ರನ್ ಚಚ್ಚಿದರು. ಈ ಮೂಲಕ ಇಂಡಿಯಾ ಚಾಂಪಿಯನ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 196 ರನ್ ಕಲೆಹಾಕಿತು.

**197 ರನ್‌ಗಳ ಕಠಿಣ ಗುರಿ:**

20 ಓವರ್‌ಗಳಲ್ಲಿ 197 ರನ್‌ಗಳ ಗುರಿ ಪಡೆದ ಆಸ್ಟ್ರೇಲಿಯಾ ಚಾಂಪಿಯನ್ಸ್ ತಂಡಕ್ಕೆ ಡಾರ್ಸಿ ಶಾರ್ಟ್ ಉತ್ತಮ ಆರಂಭ ಒದಗಿಸಿದರು. ಮೊದಲ ಓವರ್‌ನಿಂದಲೇ ಬಿರುಸಿನ ಬ್ಯಾಟಿಂಗ್‌ಗೆ ಒತ್ತು ನೀಡಿದ ಶಾರ್ಟ್ ಕೇವಲ 28 ಎಸೆತಗಳಲ್ಲಿ 7 ಸಿಕ್ಸರ್ ಹಾಗೂ 4 ಫೋರ್‌ಗಳೊಂದಿಗೆ 65 ರನ್ ಬಾರಿಸಿದರು.

ಇದಾಗ್ಯೂ ಶಾರ್ಟ್ ಅವರ ಈ ಭರ್ಜರಿ ಬ್ಯಾಟಿಂಗ್‌ಗೆ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಸಾಥ್ ಸಿಕ್ಕಿರಲಿಲ್ಲ. ಪರಿಣಾಮ ಆಸ್ಟ್ರೇಲಿಯಾ ಚಾಂಪಿಯನ್ಸ್ ತಂಡವು 16.2 ಓವರ್‌ಗಳಲ್ಲಿ 150 ರನ್‌ಗಳಿಸಿ ಆಲೌಟ್ ಆಯಿತು. ಈ ಮೂಲಕ ಇಂಡಿಯಾ ಚಾಂಪಿಯನ್ಸ್ ತಂಡವು 46 ರನ್‌ಗಳ ಭರ್ಜರಿ ಜಯ ಸಾಧಿಸಿ ಶುಭಾರಂಭ ಮಾಡಿದೆ.


ನಾಳೆ ಸಂಜೆ ಸಾಂತಾಕ್ರೂಜ್ ಪೇಜಾವರ ಮಠದಲ್ಲಿ 'ಸೀತಾಪಹರಣ'

ಶ್ರೀ ಇಡಗುಂಜಿ ಮೇಳ ಕೆರೆಮನೆ (ರಿ) ಇದರ ಅಭಿಮಾನಿ ಬಳಗ ಮುಂಬಯಿ
ಇವರ ಪ್ರಾಯೋಜಕತ್ವದಲ್ಲಿ
ಶ್ರೀ ಇಡಗುಂಜಿ ಮಹಾ ಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ (ರಿ)
(ಯುನೆಸ್ಕೋ ಮಾನ್ಯ ಪಡೆದ ಸಂಸ್ಥೆ)

ನಾಳೆ ತಾ. 06/10/2026ನೇ ಮಂಗಳವಾರ ಸಂಜೆ 6:00ರಿಂದ

ಶ್ರೀ ಪೇಜಾವರ ಮಠ, ಪ್ರಭಾತ್ ಕಾಲೊನಿ, ನಾಲ್ಕನೇ ರಸ್ತೆ, ಯೋಗ ಇನ್ಸ್ಟಿಟ್ಯೂಟ್ ಹತ್ತಿರ, ಸಾಂತಾಕ್ರೂಜ್ ಪೂರ್ವ ಇಲ್ಲಿ ಪಾರ್ಥಿಸುಬ್ಬ ವಿರಚಿತ



ಸೀತಾಪಹರಣ
ಯಕ್ಷಗಾನ ಪ್ರದರ್ಶನ
ನಿರ್ದೇಶನ : ಡಾ. ಕೆರೆಮನೆ ಶಿವಾನಂದ ಹೆಗಡೆ







ಸಭಾ ಕಾರ್ಯಕ್ರಮ:

ಅಧ್ಯಕ್ಷತೆ: ಪೊಲ್ಯ ಉಮೇಶ್ ಶೆಟ್ಟಿ
(ಅಧ್ಯಕ್ಷರು: ಹೋಟೆಲ್ ಅಸೋಸಿಯೇಷನ್ ಥಾಣೆ ಹಾಗೂ ಮಾಜಿ ಅಧ್ಯಕ್ಷರು ವಿಶ್ವ ಹಿಂದೂ ಪರಿಷತ್ ಥಾಣೆ ಘಟಕ)
ದೀಪ ಪ್ರಜ್ವಲನೆ : ಐಕಳ ಹರೀಶ್ ಶೆಟ್ಟಿ
(ಅಧ್ಯಕ್ಷರು: ಜಾಗತಿಕ ಬಂಟರ ಸಂಘಗಳ ಒಕ್ಕೂಟ)
ನಾಳೆ
ನಾಳೆ
ಗೌರವ ಉಪಸ್ಥಿತಿ : ವಿಶ್ವನಾಥ್ ಜೆ. ಶೆಟ್ಟಿ ಕಳತ್ತೂರು
(ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ: ನ್ಯಾಷನಲ್ ಕಾಂಗ್ರೆಸ್ ಪಾರ್ಟಿ ಮಹಾರಾಷ್ಟ್ರ ಘಟಕ)
ಶಶಿಧರ್ ಶೆಟ್ಟಿ ಇನ್ನಂಜೆ (ಜೊತೆ ಕೋಶಾಧಿಕಾರಿ: ಬಂಟರ ಸಂಘ ಮುಂಬಯಿ)
ಮುಖ್ಯ ಅತಿಥಿಗಳು : ದೇವಲ್ಕುಂದ ಭಾಸ್ಕರ್ ಶೆಟ್ಟಿ (ಯಕ್ಷ ಗುರುಗಳು, ಭಾಗವತರು)
ಶ್ರೀಧರ್ ವಿ. ಆಚಾರ್ಯ (ಶ್ರೀನಿವಾಸ್ ಆರ್‌ನಮೆಂಟ್ಸ್ ಬೊರಿವಲಿ)
ಜಿ.ಟಿ. ಆಚಾರ್ಯ (ಮಾಜಿ ಅಧ್ಯಕ್ಷರು: ಕರ್ನಾಟಕ ವಿಶ್ವಕರ್ಮ ಅಸೋಸಿಯೇಷನ್ ಮುಂಬಯಿ)
ಸುಧೀರ್ ಶೆಟ್ಟಿ, ಕೆಂಚನೂರು (ಕಲಾ ಪೋಷಕರು)
ರಾಮದಾಸ್ ಭಟ್ (ಪ್ರಬಂಧಕರು: ಪೇಜಾವರ ಮಠ ಸಾಂತಾಕ್ರೂಜ್)
ಕೆ. ಎಲ್. ಶಾಂತರಾಮ (ಇಂಜಿನಿಯರಿಂಗ್ ಯುಟಿಲಿಟಿ ಎಕ್ಸ್ ಪರ್ಟ್ ಮೆಟ್ರೋ 3 (ಅಕ್ವಾ ಲೈನ್)
ಕಾರ್ಯಕ್ರಮ ನಿರೂಪಣೆ: ರವಿ ಎಸ್. ಹೆಗ್ಡೆ ಹೆರ್ಮುಂಡೆ (ಉಪಾಧ್ಯಕ್ಷರು: ನವೋದಯ ಕನ್ನಡ ಸೇವಾ ಸಂಘ)
ಸನ್ಮಾನಿಸಲ್ಪಡುವವರು: ಕೆರೆಮನೆ ಶಿವಾನಂದ ಹೆಗಡೆ ಇಡಗುಂಜಿ ಮೇಳ
(ರಾಷ್ಟ್ರ ಪ್ರಶಸ್ತಿ ಪದಕ ವಿಜೇತರು -ಸಂಗೀತ ನಾಟಕ ಅಕಾಡೆಮಿ)

ಸಂಪೂರ್ಣ ಸಹಕಾರ: • ಜಯರಾಮ್ ಶೆಟ್ಟಿ, ಲಕ್ಷದೀಪ ಹೋಟೆಲ್, ಸಾಂತಾಕ್ರೂಸ್ ಪಶ್ಚಿಮ
• ವಿದ್ಯಾ ಆರ್. • ಹರಿಶ್ಚಂದ್ರ ಕರ್ಕೇರ • ಗಣೇಶ್ ಜಿ . ಭಟ್ • ಜಿ. ಎಸ್. ಸಿದ್ದೇಶ್ವರ
• ಗಿರೀಶ್ ಗೌಡ (ಹವ್ಯಾಸಿ ಯಕ್ಷಗಾನ ಕಲಾವಿದ) • ಮಹೇಂದ್ರ ಶೆಟ್ಟಿ ನಂದ್ರೊಳ್ಳಿ (ಕಲಾಪೋಷಕರು)
• ಸುರೇಶ್ ಶೆಟ್ಟಿ, ನಂದ್ರೊಳ್ಳಿ (ಯಕ್ಷಗಾನ ಕಲಾವಿದರು) • ಸುಕುಮಾರ್ ಶೆಟ್ಟಿ ಬೆಳ್ಳಂಜೆ
• ಸತೀಶ್ ಕೊಠಾರಿ (ಸ್ವಾಮಿ ಕ್ಯಾಟರರ್ಸ್) • ಸಂತೋಷ್ ಶೆಟ್ಟಿ ಕಳಿ (ಹೋಟೆಲ್ ಸೆಂಟ್ರಲ್ ಪಾರ್ಕ್, ಕಲ್ಯಾಣ್)
• ಗಜಾನನ ನಾಯಕ್ ಬಳ್ಕೂರು • ಆದ್ಯಪಾಡಿ ಬಾಲಕೃಷ್ಣ ಶೆಟ್ಟಿ (ಅಧ್ಯಕ್ಷರು, ರಂಗಭೂಮಿ ಫೈನ್ ಆರ್ಟ್ಸ್ ನವಿ ಮುಂಬಯಿ)

ಕಲಾಭಿಮಾನಿಗಳನ್ನು ಆದರದಿಂದ ಆಮಂತ್ರಿಸುವ
ಶ್ರೀ ಇಡಗುಂಜಿ ಮೇಳ ಕೆರೆಮನೆ (ರಿ) ಇದರ ಅಭಿಮಾನಿ ಬಳಗ.
ಮುಂಬಯಿ ಸಂಚಾಲಕರು : ಸೀತಾರಾಮ್ ಶೆಟ್ಟಿ ಮಾರಣಕಟ್ಟೆ

# ಕರ್ನಾಟಕ ಪುಟಾಣಿ ಮಲ್ಲ

KARNATAKA MALLA, KANNADA DAILY, MUMBAI

05-10-2026
ಸೋಮವಾರ
ಪುಟ-6

ಇದು ಚಿಣ್ಣರ ಜ್ಞಾನದ ಲೋಕ


## ವಿಶ್ವದ ಅತ್ಯಂತ ದುಬಾರಿ ಆಹಾರಗಳು!

ಜಗತ್ತಿನಲ್ಲಿ ಕೇವಲ ರುಚಿಗಾಗಿ ಮಾತ್ರವಲ್ಲದೆ, ಅಪರೂಪದ ಕಾರಣಗಳಿಂದಾಗಿ ಬಂಗಾರದಷ್ಟೇ ಬೆಲೆಬಾಳುವ ಕೆಲವು ಆಹಾರ ಪದಾರ್ಥಗಳಿವೆ. ಇವುಗಳನ್ನು ಖರೀದಿಸುವುದು ಶ್ರೀಮಂತರಿಗೂ ದೊಡ್ಡ ಸವಾಲಿನ ಕೆಲಸ. ಅಂತಹ ವಿಶ್ವದ ಅತ್ಯಂತ ದುಬಾರಿ ಆಹಾರಗಳ ಪಟ್ಟಿ ಇಲ್ಲಿದೆ.

ನಾವು ಹೋಟೆಲ್‌ಗೆ ಹೋಗಿ ಅನ್ನ,ಸಾಂಬಾರ್ ತಿಂದ್ರೆ 40 ರಿಂದ 50 ರೂಪಾಯಿ ಬಿಲ್ ಮಾಡುತ್ತೇವೆ! ಆದರೆ ಜಗತ್ತಿನಲ್ಲಿ ಕೆಲವು ಆಹಾರಗಳಿವೆ, ಅವುಗಳ ಬೆಲೆ ಕೇಳಿದರೆ ತಲೆ ತಿರುಗುತ್ತದೆ.ರುಚಿಗಾಗಿ ಮಾತ್ರವಲ್ಲ,ಅಪರೂಪತೆ ಮತ್ತು ತಯಾರಿಕೆಯ ಕಾರಣದಿಂದ ಈ ಆಹಾರಗಳು ಭಾರೀ ಬೆಲೆ ಬಾಳುತ್ತವೆ.ಅದ್ಭುತ,ಜಗತ್ತಿನ ಅತ್ಯಂತ ದುಬಾರಿ ಆಹಾರಗಳ ಪಟ್ಟಿ ಇಲ್ಲಿದೆ.



**1.ಯುಬಾರಿ ಕಿಂಗ್ ಖರ್ಬೂಜ** (Yubari King Melon)

ವಿಶ್ವದ ಅತ್ಯಂತ ದುಬಾರಿ ಹಣ್ಣು ಎಂದು ಪ್ರಸಿದ್ಧಿಯಾಗಿರುವ ಇದು, ಜಪಾನಿನ ಹೊಕ್ಕೈಡೋ ದ್ವೀಪದಲ್ಲಿ ಅತ್ಯಂತ ಕಟ್ಟುನಿಟ್ಟಾದ ಹಸಿರು ಮನೆಯ ವಾತಾವರಣದಲ್ಲಿ ಬೆಳೆಯಲಾಗುತ್ತದೆ.ಇದರ ಒಂದು ಜೋಡಿ ಹಣ್ಣುಗಳು ಹರಾಜಿನಲ್ಲಿ ಸುಮಾರು ರೂ.15 ಲಕ್ಷದಿಂದ ರೂ.35 ಲಕ್ಷದವರೆಗೆ ಮಾರಾಟವಾಗುತ್ತವೆ.



**2.ಅಲ್ಮಾಸ್ ಕ್ಯಾವಿಯರ್ ಮೊಟ್ಟೆ**(Almas Caviar Egg)

ಇದು ವಿಶ್ವದ ಅತ್ಯಂತ ದುಬಾರಿ ಆಹಾರ.ಇದು ಅತ್ಯಂತ ಅಪರೂಪದ 'ಅಲ್ಬಿನೋ ಸ್ಟರ್ಜನ್' ಎಂಬ ಮೀನಿನ ಮೊಟ್ಟೆ ಆಗಿದ್ದು,ಇದರ ಬೆಲೆ ಸುಮಾರು $25,000 ಅಂದಾಜು ರೂ.20 ಲಕ್ಷ.



**3. ಬಿಳಿ ಟ್ರಫಲ್ಸ್** (White Truffles)

ಉತ್ತರ ಇಟಲಿಯಲ್ಲಿ ಬೆಳೆಯುವ ಒಂದು ವಿಶೇಷ ರೀತಿಯ ಮಶ್ರೂಮ್(ಅಣಬೆ) ಇದು.ಇದನ್ನು ತರಬೇತಿ ಪಡೆದ ನಾಯಿಗಳ ಸಹಾಯದಿಂದ ಹುಡುಕಲಾಗುತ್ತದೆ.ಇದರ ಬೆಲೆ ಕೆಜಿಗೆ ರೂ.2.5 ಲಕ್ಷಕ್ಕಿಂತಲೂ ಹೆಚ್ಚು.

**4. ಕೇಸರಿ** (Saffron)

'ಕೆಂಪು ಚಿನ್ನ' ಎಂದೇ ಕರೆಯಲ್ಪಡುವ ಇದು ವಿಶ್ವದ ಅತ್ಯಂತ ದುಬಾರಿ ಮಸಾಲೆ ಪದಾರ್ಥ. 1ಕೆಜಿ ಕೇಸರಿ ಪಡೆಯಲು ಸುಮಾರು 75,000 ಹೂವುಗಳನ್ನು ಕೈಯಿಂದ ಕೊಯ್ಲು ಮಾಡಬೇಕು. ಹಾಗಾಗಿಯೇ ಇದರ ಬೆಲೆ ಕೆಜಿಗೆ ರೂ.3 ಲಕ್ಷದವರೆಗೂ ಇರುತ್ತದೆ.



**5. ಕೋಪಿ ಲುವಾಕ್** (Kopi Luwak)

ಇಂಡೋನೇಷ್ಯಾದಲ್ಲಿ ಸಿಗುವ ಈ ಕಾಫಿಯು





ಅತ್ಯಂತ ದುಬಾರಿ.ಸಿವೆಟ್ ಎಂಬ ಬೆಕ್ಕು ತಿಂದ ಕಾಫಿ ಬೀಜಗಳನ್ನು,ಅದರ ಹಿಕ್ಕೆಗಳಿಂದ ಸಂಗ್ರಹಿಸಿ ಇದನ್ನು ತಯಾರಿಸಲಾಗುತ್ತದೆ.ಆದರಿಂದ,1 ಕೆ.ಜಿ.ಗೆ 1 ಲಕ್ಷ ರೂಪಾಯಿಗೂ ಹೆಚ್ಚು ಎನ್ನಲಾಗಿದೆ.



**6. ಗೋಲ್ಡನ್ ಒಪ್ಯುಲೆನ್ಸ್ ಸಂಡೆ** (Golden Opulence Sundae)

ನ್ಯೂಯಾರ್ಕ್ ನಗರದಲ್ಲಿ ಸಿಗುವ ವಿಶ್ವದ ಅತ್ಯಂತ ದುಬಾರಿ ಐಸ್‌ಕ್ರೀಮ್ ಇದೆ. ಇದರ ಬೆಲೆ $1000 ಅಂದ್ರೆ ಸುಮಾರು ರೂ.84,000 ಎನ್ನಲಾಗಿದ್ದು, ಇದನ್ನು 23 ಕ್ಯಾರೆಟ್ ಖಾದ್ಯ ಚಿನ್ನದ ಎಲೆಗಳಿಂದ ಹಾಗೂ ವಿಶ್ವದ ಅತ್ಯಂತ ಅಪರೂಪದ ಚಾಕೊಲೇಟ್‌ಗಳು, ಪ್ಯಾರಿಸ್‌ನಿಂದ ತಂದ ಕ್ಯಾಂಡಿ ಹಣ್ಣುಗಳನ್ನು ಸೇರಿಸಿ ಮಾಡಲಾಗುತ್ತದೆ.



**7. ವಾಗ್ಯು** (Kobe Wagyu Beef)

ಜಪಾನ್ ದೇಶದ ಈ ಮಾಂಸವು ತನ್ನ ವಿಶೇಷವಾದ ರುಚಿಗೆ ಹೆಸರುವಾಸಿಯಾಗಿದೆ.ಹಸುವಿಗೆ ವಿಶೇಷ ಆಹಾರ ನೀಡಿ, ಸಂಗೀತವನ್ನು ಕೇಳಿಸಿ ಇದನ್ನು ಬೆಳೆಸ ಲಾಗುತ್ತದೆ.

ಇದರ 1 ಕೆಜಿ ಮಾಂಸದ ಬೆಲೆ ರೂ. 20,000 ದಿಂದ ಆರಂಭವಾಗುತ್ತದೆ.

## ಲಾವಂಚ

ಈ ನಡುವೆ ನಾನು ನಿಮಗೊಂದು ಹುಲ್ಲಿನ ಪರಿಚಯ ಮಾಡಿಸುತ್ತಿದ್ದೇನೆ. ಹುಲ್ಲು ಯಾರಿಗೊತ್ತಿಲ್ಲ ಹೇಳಿ.. ಅದೇನ್ ಮಹಾ! ಅಂತೀರಾ? ಅದು ಮಹತ್ ಅಂತಾನೇ ನಿಮಗೆ ಪರಿಚಯಿಸ್ತಿದ್ದೇನೆ ಗೊತ್ತಾ? ನಮ್ಮ ಹಿರಿಯರು ಈ ಹುಲ್ಲಿನ ಬೇರನ್ನು ಚೆನ್ನಾಗಿ ತೊಳೆದು ಒಣಗಿಸಿ ತಮ್ಮ ಮನೆಗಳಲ್ಲಿ ಮರದ ಕಲಿಂದ (ದೊಡ್ಡ ಪೆಟ್ಟಿಗೆ) ಯಲ್ಲಿದ್ದ ಅಕ್ಕಿ, ದಿಂಬು, ಹೊದಿಕೆ, ಬಟ್ಟೆಗಳ ನಡುವೆ ಮಾತ್ರವಲ್ಲದೆ ಅಕ್ಕಿ, ಅಮ್ಮ ಕಬ್ಬಿಣದ ಪೆಟ್ಟಿಗೆಯೊಳಗಿನ ತಮ್ಮ ಸೀರೆಗಳ ನಡುವೆ ಜೋಪಾನವಾಗಿ ಜೋಡಿಸಿಡುತ್ತಿದ್ದರು. ಸೊಳ್ಳೆ, ಕೀಟ, ತಿಗಣೆ, ಜಿರಳೆಗಳ ನಿವಾರಣೆಗೆ ಈ ಬೇರು ಉಪಯುಕ್ತವಾಗಿತ್ತು.

ಮಣ್ಣಿನ ಪಾತ್ರೆಯಲ್ಲಿ ಕುಡಿಯಲೆಂದು ಇರಿಸಿದ್ದ ನೀರಿಗೆ,ತಲೆಗೆ ಹಾಕಲೆಂದು ಇಟ್ಟ ಎಣ್ಣೆಗೆ, ಮನೆಯ ಕಿಟಕಿಗಳಿಗೆ ಜಾಲರಿಯಂತೆ ಈ ಬೇರನ್ನು ಬಳಸುತ್ತಿದ್ದರು. ಕುಡಿಯುವ ನೀರು ಶುದ್ಧವಾಗುವ ಜೊತೆ ತಂಪಾಗಿ ಸುವಾಸನೆ ಹೊಂದಿರದೆ ಎಣ್ಣೆಯು ತಲೆಗೆ ತಂಪು ನೀಡುತ್ತಿತ್ತು. ಕಿಟಕಿಯಿಂದ ಬರುವ ಗಾಳಿ ಹಿತವಾಗಿರುತ್ತಿತ್ತು. ಹಾಗಾದರೆ ಈ ಬೇರನ್ನು ನೀಡುವ ಸಸ್ಯ ಯಾವುದೆಂದು ಅಚ್ಚರಿಯೆ?

ಅದೊಂದು ಬಗೆಯ ಹುಲ್ಲು ! ಈ ನಿಷ್ಪಾಪಿ ಸಸ್ಯ ಅಥವಾ ಹುಲ್ಲಿನ ಹೆಸರೇ ಲಾವಂಚ. ಕನ್ನಡದಲ್ಲಿ ಲಾವಂಚ, ಕಾಡುಬಳ್ಳ,ಕರಿಹಿಕ್ಕೆ ಹುಲ್ಲು, ಮಡಿವಾಳ ಗಿಡ ಎಂದೆಲ್ಲ ಕರೆಸಿಕೊಳ್ಳುವ ಇದನ್ನು ತುಳುವಿನಲ್ಲಿ ಮಲ್ಲಿವಾಳ್, ಮುದ್ದೆಲ, ರಾಮಂಚ ಎನ್ನುವರು.ಸಂಸ್ಕೃತದಲ್ಲಿ ಉಶಿರಾ. ವೆಟಿವೇರಿಯ ಜಿಜನಿಯೋಡೆಸ್ ಎಂಬ ಸಸ್ಯ ಶಾಸ್ತ್ರೀಯ ಹೆಸರಿದ್ದು ಪೊಯೇಸೀ (Poaceae ) ಕುಟುಂಬಕ್ಕೆ ಸೇರಿದೆ. ಬಹುವಾರ್ಷಿಕ ಸಸ್ಯವಾಗಿ ಮರಳು ಮಣ್ಣು ಹೊರತು ಪಡಿಸಿ ಬೇರೆಲ್ಲಾ ಬೆಳೆಯಬಲ್ಲದು.ಒಂದು ಒಂದೂವರೆ ಅಡಿಯಷ್ಟು ಎತ್ತರ ಬೆಳೆಯುವ ಹುಲ್ಲು ಯಾವುದೇ ತೇವಾಂಶಕ್ಕೂ ಸೈ ಎನ್ನುತ್ತದೆ. ಮೈದಾನ, ಗುಡ್ಡದ ತಪ್ಪಲು,ನದಿ ದಡಗಳಲ್ಲಿ ಸಹಜವಾಗಿ ಬೆಳೆಯುವ ಲಾವಂಚಕ್ಕೆ ತೆಳ್ಳನೆಯ ಒಂದು ಒಂದೂವರೆ ಮೀಟರ್‌ಉದ್ದ ನೀಳ ತಿಳಿ ಹಸಿರು ವರ್ಣದ ಎಲೆಗಳಿರುತ್ತವೆ.ಎರಡು



ಮೂರು ಅಡಿ ಬೆಳೆಯುವ ಬೇರು ಮೃದುವಾಗಿದ್ದು ಸುವಾಸನೆಯಿಂದ ಕೂಡಿರುತ್ತದೆ. ತಿಳಿ ಹಳದಿ, ಹಳದಿ, ಕಂದು, ತಿಳಿಗೆಂಪು ಬಣ್ಣದ 15ರಿಂದ 40 ಸೆಂ.ಮೀ. ಉದ್ದನೆಯ ಕಿರು ಹೂಗಳ ತೆನೆಯಾಗುತ್ತದೆ. ಭತ್ತದ ಸಸಿಯಂತೆ ಲಾವಂಚವನ್ನು ಬೇರು ಸಮೇತ ನೆಟ್ಟು ಹತ್ತು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಈ ಸಸ್ಯ ತನ್ನ ಸುತ್ತಲಿನ ಪ್ರದೇಶವನ್ನು ತಂಪಾಗಿಸುತ್ತದೆ.

ಭಾರತದಲ್ಲೇ ಅಲ್ಲದೆ ಆಸ್ಟ್ರೇಲಿಯಾ, ಚೀನಾ, ಥೈಲ್ಯಾಂಡ್,ವಿಯೆಟ್ನಾಂ ಮೊದಲಾದೆಡೆ ಬೆಳೆಯುವುದೇ ಅಲ್ಲದೆ ಇದರಿಂದ ನಾನಾ ರೀತಿಯ ಪ್ರಯೋಜನಗಳನ್ನು ಪಡೆಯುತ್ತಾರೆ. ಲಾವಂಚದ ಬೇರು ಹಲವು ಆಯುರ್ವೇದ ಔಷಧಿಗಳಲ್ಲಿ ಬಳಸಲ್ಪಡುತ್ತದೆ. ಮೈಕೈ ನೋವು,ವಾತ,ಹೊಟ್ಟೆ ನೋವು, ಜಂತುಹುಳದ ಸಮಸ್ಯೆ,ಮಲಬದ್ಧತೆ, ತಲೆನೋವು,ನರಮಂಡಲದ ಶಾಂತತೆ, ಒತ್ತಡ ನಿವಾರಣೆ,ರಕ್ತ ಪರಿಚಲನೆಯ ಸುಧಾರಣೆ, ಜೀರ್ಣಾಂಗ ವ್ಯವಸ್ಥೆ ಸರಿಪಡಿಸಲು,ಉರಿಮೂತ್ರ, ಕೈಕಾಲು ನೋವು,ನರಗಳ ನಿಶ್ಯಕ್ತಿ,ಮೊಡವೆ, ಸಂಧಿವಾತ, ನಂಜು ನಿವಾರಕ, ಜ್ವರ,ಬೆನ್ನು ನೋವು ಇತ್ಯಾದಿಗಳಿಗೆ ಔಷಧಿಯಾಗಿದೆ.ಬೇಸಿಗೆಯಲ್ಲಿ ಬಿಸಿಲಬೇಗೆಯಿಂದ ಉಂಟಾಗುವ ಕಾಯಿಲೆಗೆ ರಕ್ಷಣೆ ಲಾವಂಚದ ಬೇರು ಹಾಕಿರಿಸಿದ ನೀರು. ತೈಲವು ಚರ್ಮ ರಕ್ಷಣೆಗೆ ಪ್ರಮುಖವಾಗಿರುವುದರಿಂದ ಕ್ರೀಮ್,ಸಾಬೂನುಗಳಲ್ಲಿ ಬಳಸುತ್ತಾರೆ.

ಶ್ರೀಗಂಧ, ರಂಜೆ(ಬಕುಳ) ಹೂ, ಸೊರಗಿ ಹೂ ನಮ್ಮ ಪರಂಪರಾಗತ ಸುಗಂಧ ದ್ರವ್ಯವಾಗಿದ್ದು ಲಾವಂಚವೂ ಇದೇ ವರ್ಗಕ್ಕೆ ಸೇರುತ್ತದೆ. ಲಾವಂಚವನ್ನು ಈಗೀಗ ರೈತರು ಸ್ವತಂತ್ರ ವಾಗಿ ಅಥವಾ ಕಾಫಿ,ಕೋಕೋ,ಚಹಾ ತೋಟದಲ್ಲಿಯೂ ಬೆಳೆಯಲಾರಂಭಿಸಿದ್ದಾರೆ. ಹಾಗೆ ಬಿಟ್ಟರೂ ಬೀಜದ ಮೂಲಕ ಸಸಿಗಳು ಹರಡುವ ಕಾರಣ ಕಳೆ ಸಸ್ಯವಾಗಿ ಹರಡುವ ಭೀತಿಯಿಲ್ಲ..ನಾಟಿಗೆ ಮಳೆಗಾಲವೇ ಸೂಕ್ತ. ಬೆಳೆಗೆ ನೀರು ಗೊಬ್ಬರ ಬೇಕಾಗಿಲ್ಲ..ಬೇರುಗಳನ್ನೇ ನೇರ ಮಾರುಕಟ್ಟೆಗೆ ಇಲ್ಲದ ಕಾರಣ ನೆರಳಿಗೆ ಒಣಗಿಸಿ ಶುಚಿಗೊಳಿಸಿ ಭಟ್ಟಿ ಇಳಿಸುವಿಕೆಯ ಮೂಲಕ, ಬಾಷ್ಪೀಕರಣ ಮಾಡಿ ತೈಲವನ್ನು ಪಡೆಯುತ್ತಾರೆ. ಭಾಷ್ಪೀಕರಣದಿಂದ ತೈಲ ಪಡೆಯಲು ಕನಿಷ್ಟ14 ತಾಸುಗಳು ಬೇಕಾಗುವುದೇ ಅಲ್ಲದೆ ಕೆಲವೆಡೆ ಮೂರು ದಿನಗಳ ಶ್ರಮವನ್ನೂ ಬೇಡುವುದುಂಟು. ಹೀಗೆ ತೆಗೆದ ತೈಲದಲ್ಲಿ ಸುವಾಸನೆ,ಬಣ್ಣ ಬರಲು ಆರು ತಿಂಗಳು ಭದ್ರವಾಗಿ ಭರಣಿಯಲ್ಲಿ ಮುಚ್ಚಿಡಲಾಗುತ್ತದೆ.ಹೆಕ್ಟೇರಿಗೆ ಗರಿಷ್ಠ ನಾಲ್ಕು ಟನ್ ಬೇರು ದೊರೆಯುವುದಾದರೂ ಕೇಂದ್ರೀಯ ಔಷಧ ಮತ್ತು ಸುಗಂಧ ದ್ರವ್ಯ ಮಂಡಳಿ ಸುಧಾರಿತ ತಳಿ ರೂಪಿಸಿದ್ದು ಹೆಕ್ಟೇರಿಗೆ 21 ಟನ್ ಇಳುವರಿ ನೀಡಿ 14% ತೈಲ ಕೊಡಬಲ್ಲದೆಂದರೆ ನಂಬಲೇ ಬೇಕು. ಬೆಂಗಳೂರಿನ ಯಲಹಂಕ ದ CIMAP ಭೇಟಿ ನೀಡಿದರೆ ಧರಣಿ, ಗುಲಾಬಿ, ಕೇಸರಿ, ವೃದ್ಧಿ, KS1_2, ಏಕ್ 15 ಮೊದಲಾದ ತಳಿಯ ಒಂದೊಂದು ಸಸಿಯು ಎರಡು ರೂ. ಐದು ರೂ. ಗಳಿಗೆ ದೊರಕುತ್ತದೆ.

ಲಾವಂಚದ ಬೇರುಗಳಿಂದ ಹೆಣೆದ ಬೀಸಣಿಗೆಗೆ ನೀರು ಚಿಮುಕಿಸಿ ಗಾಳಿ ಹಾಕುವ ಕ್ರಮ ಮೊಗಲ್ ದೊರೆಗಳ ಕಾಲದಲ್ಲಿತ್ತು. ಪ್ರಭು ಶ್ರೀರಾಮ ಚಂದ್ರ ಸೀತೆ,ಲಕ್ಷ್ಮಣರ ಜೊತೆ ವನವಾಸದಲ್ಲಿದ್ದಾಗ ಕುಡಿಯುವ ನೀರು ಶುದ್ಧೀಕರಿಸಲು ಲಾವಂಚ ಬಳಸುತ್ತಿದ್ದರೆನ್ನಲಾಗುತ್ತದೆ.ಅದ್ದರಿಂದಲೇ ರಾಮಾಂಚ ಎಂಬ ಹೆಸರು ಬಂದಿದೆ ಎಂಬ ಪ್ರತೀತಿಯಿದೆ. ಹಿರಿಯ ಕಾದಂಬರಿಕಾರ SL ಭೈರಪ್ಪನವರ 'ಪರ್ವ' ಕಾದಂಬರಿಯಲ್ಲಿ ದ್ರೌಪದಿ ತನ್ನ ಮಕ್ಕಳಿಗೆ ತಂಪಾಗಿರಲೆಂದು ಬೇಸಿಗೆಯಲ್ಲಿ ಕಿಟಕಿಗಳಿಗೆ ಲಾವಂಚದ ಬೇರಿನ ಹೆಣೆದ ಪರದೆ ಹಾಕಿ ಆಗಾಗ ನೀರು ಚಿಮುಕಿಸುತ್ತಿದ್ದಳೆಂದಿದ್ದಾರೆ. ಗುಬ್ಬಿ ಗೋಸಲ ಚನ್ನ ಬಸವೇಶ್ವರರಿಗೆ ಭೀಮನ ಅಮವಾಸ್ಯೆ ಪ್ರಯುಕ್ತ ಲಾವಂಚದ ಅಲಂಕಾರವನ್ನು ಇದೇ ಆಗಸ್ಟ್ 14 ರಂದು ಮಾಡಿದ್ದರು. ತುಮಕೂರಿನಲ್ಲಿ ಶನಿದೇವರಿಗೂ ಲಾವಂಚದ ಬೇರಿನ ಅಲಂಕಾರ ಮಾಡಿ ಪೂಜಿಸುತ್ತಾರೆ.ಉಡುಪಿ ಜಿಲ್ಲೆಯ ದೇವಸ್ಥಾನ ವೊಂದರಲ್ಲಿ ಲಾವಂಚದ ಬೇರು ಪ್ರಸಾದ ರೂಪದಲ್ಲಿ ದೊರಕುವುದಂತೆ.ಭಟ್ಕಳದ 'ಉಶಿರಾ' ಕಂಪನಿ ದಶಕಗಳಿಂದ ಲಾವಂಚದ ಕರ ಕುಶಲ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದೆ.

ದೇವರ ಕಲಾಕೃತಿ, ಯಕ್ಷಗಾನ ಮುಖವಾಡ, ಹೂದಾನಿ,ಹಾರ,ಚಾಪೆ,ವ್ಯಾನಿಟಿ ಬ್ಯಾಗ್, ಪರ್ಸ್,ಮಕ್ಕಳ ಆಟಿಕೆ, ಕುರ್ಚಿ,ಮಂಚವನ್ನೂ ಲಾವಂಚದ ಬೇರಿನಿಂದ ತಯಾರಿಸುತ್ತಾರೆ. ಇದರ ಬೇರಿನ ಟೊಪ್ಪಿಯಂತೂ ಎಲ್ಲರಿಗೂ ಅಚ್ಚುಮೆಚ್ಚು. ಸ್ವಲ್ಪ ನೀರು ಚಿಮುಕಿಸಿ ತಲೆಗೇರಿಸಿದರೆ ಶೀತಲ ಪೆಟ್ಟಿಗೆ ತಲೆಗಿರಿಸಿಂದತೆಯೇ ಸರಿ.ಶೀತ ಸಮಸ್ಯೆ ಇರುವವರು ಕಿವಿನೋವು, ಅಸ್ತಮಾ ಇರುವವರು ಲಾವಂಚದಿಂದ ದೂರವಿದ್ದರೆ ಒಳಿತು.

ಇಷ್ಟೆಲ್ಲ ಹೇಳಿದರೂ ಲಾವಂಚದ ಮುಖ್ಯ ಉಪಯೋಗವನ್ನು ನಾನಿನ್ನೂ ಹೇಳಿಯೇ ಇಲ್ಲ ಗೊತ್ತಾ?ನಮ್ಮ ಕಾಲಬುಡವನ್ನೇ ನಾವು ಮೈಸೂರು ಪಾರ್ಕ್‌ನಂತೆ ಕತ್ತರಿಸುತ್ತಿದ್ದೇವೆ. ಸರಣಿ ಭೂಕುಸಿತ, ಉಕ್ಕಿದ ಪ್ರವಾಹಗಳಿಗೆ ಹಳ್ಳ,ಕೊಳ್ಳ,ನದಿ, ಝರಿಗಳು ದಿಕ್ಕು ಬದಲಿಸುತ್ತಿವೆ.ಅಂತರ್ಜಲ ಪಾತಾಳ ಸೇರಿದೆ.ಮಣ್ಣಿನ ಸವೆತ ಯಾರ ಜಾಗವನ್ನು ಇನ್ನಾರಿಗೋ ತೋರಿಸುತ್ತಿದೆ.ಇವೆಲ್ಲದರ ರಕ್ಷಣೆಯನ್ನು ಈ ಲಾವಂಚವೇ ಮಾಡಬಲ್ಲದು ಗೊತ್ತಾ? ಅದು ಹೇಗೆಂದರೆ ಲಾವಂಚದ ಬೇರುಗಳು ಮಣ್ಣನ್ನು ಹಿಡಿದಿಟ್ಟುಕೊಳ್ಳುವ ಗುಣ ಹೊಂದಿದೆ. ಮಣ್ಣಿನ ಸವಕಳಿ ತಡೆಯುವ ಬಹೂಪಯೋಗಿ ಸಸ್ಯ ಲಾವಂಚ.ಅಂತರ್ಜಲ ಮರು ಪೂರಣವನ್ನೂ ಮಾಡುತ್ತದೆ.ಹುಲ್ಲಿನಲ್ಲಿ ಪ್ರೊಟೀನ್ ಮತ್ತು ಕೊಬ್ಬು ಇರುವುದರಿಂದ ದನಕರುಗಳಿಗೆ ಉತ್ತಮ ಮೇವನ್ನೂ ನೀಡುತ್ತದೆ.ಒಣಗಿಸಿ ದಾಸ್ತಾನು ಮಾಡಿಕೊಳ್ಳಬಹುದು.ಕಡಿಮೆ ವೆಚ್ಚ, ಪರಿಣಾಮ ಹೆಚ್ಚು.ಗದ್ದೆಯ ಬದುಗಳಿಗೆ,ನೀರ ಹರಿವಿನ ಅಂಚುಗಳಿಗೆ ಎಲ್ಲಿ ಬೇಕೆಂದಲ್ಲಿ ಈ ಲಾವಂಚ ನೆಟ್ಟು ಪ್ರಯೋಜನ ಪಡೆಯಬಹುದು.ಒಮ್ಮೆ ನೆಟ್ಟರೆ ಸಾಕು.ಕೆಲವೇ ತಿಂಗಳಲ್ಲಿ ಬೆಳೆದು ಪೊದೆಯಾಗಿ ಹಬ್ಬಿ ರಕ್ಷಣೆ ನೀಡುತ್ತದೆ.ಬೇರುಗಳು ಖನಿಜಗಳಿಂದ ಸಮೃದ್ಧವಾಗಿರುತ್ತವೆ.ಔಷಧಿಗಾಗಿ, ಸುಗಂಧ ದ್ರವ್ಯಕ್ಕಾಗಿ, ಸೌಂದರ್ಯವರ್ಧಕವಾಗಿ ಬಳಕೆಗೆ ಅಲ್ಲವಾದರೂ ಹಿತ್ತಲಲ್ಲಿ ಒಂದು ಲಾವಂಚದ ಸಸಿ ಇರಲಿ.. ಏನಂತೀರಾ?

**ವಿಜಯಾ ಬಿ ಶೆಟ್ಟಿ, ಸಾಲೆತ್ತೂರು, ಬಂಟ್ವಾಳ**

## ರಸಪ್ರಶ್ನೆಗಳು

● ರಾಜಸ್ಥಾನದ ನದಿಗಳು ಸಮುದ್ರವನ್ನು ಏಕೆ ತಲುಪುವುದಿಲ್ಲ?

**ಉತ್ತರ** - ರಾಜಸ್ಥಾನದ ಅನೇಕ ನದಿಗಳು ಸಮುದ್ರಕ್ಕೆ ಯಾವುದೇ ಮಾರ್ಗವನ್ನು ಹೊಂದಿಲ್ಲ ಮತ್ತು ಮರಳಿನ ಮರುಭೂಮಿಗಳು ಅಥವಾ ಉಪ್ಪುನೀರಿನ ಸರೋವರಗಳಲ್ಲಿ ಕಣ್ಮರೆಯಾಗುತ್ತವೆ ಎಂದು ನಂಬಲಾಗಿದೆ.

● ಭಾರತದ ಮೂರು ಉದ್ದದ ನದಿಗಳು ಯಾವುವು?

**ಉತ್ತರ** - ದೇಶದ ಮೂರು ಉದ್ದದ ನದಿಗಳು ಸಿಂಧೂ, ಬ್ರಹ್ಮಪುತ್ರ ಮತ್ತು ಗಂಗಾ.

● ಭಾರತದ ಮರುಭೂಮಿ ನದಿಗಳ ಹೆಸರುಗಳು ಯಾವುವು?

**ಉತ್ತರ** - ದೇಶದಲ್ಲಿನ ಗಮನಾರ್ಹ ಮರುಭೂಮಿ ನದಿಗಳಲ್ಲಿ ಲುನಿ, ಮಚ್ಚು, ರೂಪೆನ್, ಸರಸ್ವತಿ, ಬನಾಸ್ ಮತ್ತು ಘಗ್ಗರ್‌ಸೇರಿವೆ.

● ಭಾರತದ ಕರಾವಳಿ ನದಿಗಳ ಬಗ್ಗೆ ಗಮನಾರ್ಹವಾದದ್ದು ಏನು?

**ಉತ್ತರ** - ದೇಶದ ಹೆಚ್ಚಿನ ಕರಾವಳಿ ನದಿಗಳು ಚಿಕ್ಕದಾಗಿವೆ.ಸುಮಾರು 600 ಇಂತಹ ಸಣ್ಣ ನದಿಗಳಿವೆ, ಪ್ರಾಥಮಿಕವಾಗಿ ಪಶ್ಚಿಮ ಕರಾವಳಿಯಲ್ಲಿ ಕಂಡುಬರುತ್ತವೆ.

● ವಿಶ್ವದ ಪ್ರಮುಖ ನದಿಗಳಲ್ಲಿ ಯಾವ ಭಾರತೀಯ ನದಿಯನ್ನು ಪರಿಗಣಿಸಲಾಗುತ್ತದೆ?

**ಉತ್ತರ** - ಸಿಂಧೂ ನದಿಯು ವಿಶ್ವದ ಪ್ರಮುಖ ನದಿಗಳಲ್ಲಿ ಒಂದಾಗಿದೆ.

● ಬ್ರಹ್ಮಪುತ್ರ ನದಿ ಯಾವ ಹೆಸರಿನಲ್ಲಿ ಭಾರತವನ್ನು ಪ್ರವೇಶಿಸುತ್ತದೆ?

**ಉತ್ತರ** - ಬ್ರಹ್ಮಪುತ್ರ ನದಿ 'ದಿಹಾಂಗ್' ಹೆಸರಿನಲ್ಲಿ ಭಾರತವನ್ನು ಪ್ರವೇಶಿಸುತ್ತದೆ.

● ಯಾವ ನದಿ ವ್ಯವಸ್ಥೆಯು ಬಂಗಾಳಕೊಲ್ಲಿಗೆ ಹರಿಯುತ್ತದೆ?

**ಉತ್ತರ** -ಗಂಗಾ ಮತ್ತು ಬ್ರಹ್ಮಪುತ್ರ (ಗಂಗಾ, ಬ್ರಹ್ಮಪುತ್ರ, ಮೇಘನಾ) ಗಳ ಸಂಯೋಜಿತ ಡೆಲ್ಟಾ.

● 'ಬಿಹಾರದ ಜೀವನಾಡಿ' ಎಂದು ಕರೆಯಲ್ಪಡುವ ನದಿ ಯಾವುದು?

**ಉತ್ತರ** - ಕೋಸಿ ನದಿಯನ್ನು 'ಬಿಹಾರದ ಜೀವನಾಡಿ' ಎಂದು ಕರೆಯಲಾಗುತ್ತದೆ.

● ಕೃಷ್ಣ ನದಿಯ ಪ್ರಾಥಮಿಕ ಮೂಲ ಎಲ್ಲಿದೆ?

**ಉತ್ತರ** - ಮಹಾಬಲೇಶ್ವರ (ಮಹಾರಾಷ್ಟ್ರ).

● ಭೂಮಿಯ ಮೇಲಿನ ಅತ್ಯಂತ ಕಠಿಣವಾದ ನೈಸರ್ಗಿಕ ವಸ್ತು ಯಾವುದು?

**ಉತ್ತರ** - ವಜ್ರವನ್ನು ಭೂಮಿಯ ಮೇಲಿನ ಅತ್ಯಂತ ಕಠಿಣವಾದ ನೈಸರ್ಗಿಕ ವಸ್ತುವೆಂದು ಪರಿಗಣಿಸಲಾಗುತ್ತದೆ.

● ಯಾವ ಹಣ್ಣನ್ನು 'ಹಣ್ಣುಗಳ ರಾಜ' ಎಂದು ಕರೆಯಲಾಗುತ್ತದೆ?

**ಉತ್ತರ** - ಮಾವಿನಹಣ್ಣನ್ನು ಹಣ್ಣುಗಳ ರಾಜ ಎಂದು ಕರೆಯಲಾಗುತ್ತದೆ.

● ಭೂಮಿಯ ಮೇಲೆ ಎಷ್ಟು ಖಂಡಗಳಿವೆ?

**ಉತ್ತರ** - ಭೂಮಿಯ ಮೇಲೆ 7 (ಏಳು) ಖಂಡಗಳಿವೆ.

● ವಿಶ್ವದ ಅತಿದೊಡ್ಡ ಖಂಡ ಯಾವುದು?

**ಉತ್ತರ** -ಏಷ್ಯಾ ಅತಿದೊಡ್ಡ ಖಂಡ.

● ಚಂದ್ರನ ಮೇಲೆ ಮೊದಲು ಕಾಲಿಟ್ಟ ವ್ಯಕ್ತಿ ಯಾರು?

**ಉತ್ತರ** -ನೀಲ್ ಆರ್ಮ್‌ಸ್ಟ್ರಾಂಗ್

● ವಿಶ್ವದ ಅತಿ ಉದ್ದದ ನದಿ ಯಾವುದು?

**ಉತ್ತರ** -ನೈಲ್ ನದಿ

● ಭೂಮಿಯ ಮೇಲಿನ ಅತಿದೊಡ್ಡ ಸಾಗರ ಯಾವುದು?

**ಉತ್ತರ** - ಪೆಸಿಫಿಕ್ ಮಹಾಸಾಗರ

● ಯಾವ ಗ್ರಹವನ್ನು ಕೆಂಪು ಗ್ರಹ ಎಂದು ಕರೆಯಲಾಗುತ್ತದೆ?

**ಉತ್ತರ** -ಮಂಗಳ

● ವಿಶ್ವದ ಅತ್ಯಂತ ಚಿಕ್ಕ ಖಂಡ ಯಾವುದು?

**ಉತ್ತರ** -ಆಸ್ಟ್ರೇಲಿಯಾ

● ಭಾರತವು ಯಾವ ದೇಶದೊಂದಿಗೆ ತನ್ನ ಅತಿ ಉದ್ದದ ಅಂತರರಾಷ್ಟ್ರೀಯ ಗಡಿಯನ್ನು ಹಂಚಿಕೊಳ್ಳುತ್ತದೆ?

**ಉತ್ತರ** - ಭಾರತವು ಬಾಂಗ್ಲಾದೇಶದೊಂದಿಗೆ ತನ್ನ ಅತಿ ಉದ್ದದ ಅಂತರರಾಷ್ಟ್ರೀಯ ಗಡಿಯನ್ನು ಹಂಚಿಕೊಂಡಿದೆ, ಇದರ ಉದ್ದ 4,096.7 ಕಿ.ಮೀ. ಆಗಿದೆ.

● ಭಾರತವು ಯಾವ ದೇಶದೊಂದಿಗೆ ತನ್ನ ಅತಿ ಕಡಿಮೆ ಗಡಿಯನ್ನು ಹಂಚಿಕೊಂಡಿದೆ?

**ಉತ್ತರ** - ಭಾರತವು ಅಫ್ಘಾನಿಸ್ತಾನದೊಂದಿಗೆ ತನ್ನ ಅತಿ ಕಡಿಮೆ ಗಡಿಯನ್ನು ಹಂಚಿಕೊಂಡಿದೆ, ಇದರ ಉದ್ದ 106 ಕಿ.ಮೀ. ಆಗಿದೆ.

● ಭಾರತ ಮತ್ತು ಚೀನಾ ನಡುವಿನ ಗಡಿಯ ಉದ್ದ ಎಷ್ಟು?

**ಉತ್ತರ** -ಭಾರತ ಮತ್ತು ಚೀನಾ ನಡುವಿನ ಗಡಿಯ ಉದ್ದ 3,488 ಕಿ.ಮೀ.

● ಭಾರತವು ಯಾವ ದೇಶಗಳೊಂದಿಗೆ 3,000 ಕಿ.ಮೀ. ಗಿಂತ ಹೆಚ್ಚು ಗಡಿಯನ್ನು ಹಂಚಿಕೊಂಡಿದೆ?

**ಉತ್ತರ** - ಭಾರತವು ಬಾಂಗ್ಲಾದೇಶ (4,096.7 ಕಿ.ಮೀ), ಚೀನಾ (3,488 ಕಿ.ಮೀ) ಮತ್ತು ಪಾಕಿಸ್ತಾನ (3,323 ಕಿ.ಮೀ) ನೊಂದಿಗೆ 3,000 ಕಿ.ಮೀ. ಗಿಂತ ಹೆಚ್ಚು ಗಡಿಯನ್ನು ಹಂಚಿಕೊಂಡಿದೆ.

● ನೇಪಾಳ ಮತ್ತು ಭೂತಾನ್ ಜೊತೆ ಭಾರತದ ಗಡಿಯ ಉದ್ದ ಎಷ್ಟು?

**ಉತ್ತರ** - ಭಾರತವು ನೇಪಾಳದೊಂದಿಗೆ 1,751 ಕಿ.ಮೀ ಮತ್ತು ಭೂತಾನ್ ಜೊತೆ 699 ಕಿ.ಮೀ. ಗಡಿಯನ್ನು ಹಂಚಿಕೊಂಡಿದೆ.

● ಮೋನಾಲಿಸಾವನ್ನು ಚಿತ್ರಿಸಿದವರು ಯಾರು?

**ಉತ್ತರ** - ಲಿಯೊನಾರ್ಡೊ ಡಾ ವಿನ್ಸಿ

## ಒಗಟುಗಳು

1. ಕೈಗಳಿದ್ದರೂ ಚಪ್ಪಾಳೆ ತಟ್ಟಲು ಸಾಧ್ಯವಾಗದಿರುವುದು ಯಾವುದು?
ಉತ್ತರ: ಗಡಿಯಾರ
2. ಹಲವು ಹಲ್ಲುಗಳನ್ನು ಹೊಂದಿದ್ದರೂ ಕಚ್ಚಲು ಸಾಧ್ಯವಾಗದ ವಸ್ತು ಯಾವುದು?
ಉತ್ತರ: ಬಾಚಣಿಗೆ
3.ಕೇವಲ ಹೆಸರು ಹೇಳುವುದರಿಂದಲೇ ಹಾಳಾಗುವಷ್ಟು ದುರ್ಬಲವಾದದ್ದು ಯಾವುದು?
ಉತ್ತರ: ಮೌನ
4. ದಿನಕ್ಕೆ 25 ಬಾರಿ ಕ್ಷೌರ ಮಾಡಿದರೂ ಗಡ್ಡ ಬಿಟ್ಟಿರುವವರು ಯಾರು?
ಉತ್ತರ: ಕ್ಷೌರಿಕ
5. ನನಗೆ ಮೂರು ಅಕ್ಷರಗಳ ಪದ ತಿಳಿದಿದೆ. ಎರಡು ಸೇರಿಸಿ ಕಡಿಮೆ ಅಕ್ಷರಗಳು ಇರುತ್ತವೆ.
ಉತ್ತರ: 'ಕೆಲವು' ಎಂಬ ಪದ.
6. ನೀವು ವೇಗವಾಗಿ ಓಡಿದಷ್ಟೂ ಹಿಡಿಯಲು ಕಷ್ಟವಾಗುವ ವಸ್ತು ಯಾವುದು?
ಉತ್ತರ: ನಿಮ್ಮ ಉಸಿರು
7.ಪ್ರತಿ ರಾತ್ರಿ ನನಗೆ ಏನು ಮಾಡಬೇಕೆಂದು ಹೇಳಲಾಗುತ್ತದೆ,ಮತ್ತು ಪ್ರತಿ ಬೆಳಿಗ್ಗೆ ನನಗೆ ಹೇಳಿದ್ದನ್ನು ಮಾಡುತ್ತೇನೆ. ಆದರೆ ನಾನು ಇನ್ನೂ ನಿಮ್ಮ ಗದರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾನು ಏನು?
ಉತ್ತರ: ಅಲಾರಾಂ ಗಡಿಯಾರ
8.ಒಣಗಿಸುವಾಗ ಏನು ಒದ್ದೆಯಾಗುತ್ತದೆ?
ಉತ್ತರ: ಒಂದು ಟವಲ್
9.ನಾನು ನಿನ್ನನ್ನು ಯಾವಾಗಲೂ ಹಿಂಬಾಲಿಸುತ್ತೇನೆ ಮತ್ತು ನಿನ್ನ ಪ್ರತಿಯೊಂದು ನಡೆಯನ್ನೂ ನಕಲಿಸುತ್ತೇನೆ, ಆದರೆ ನೀನು ನನ್ನನ್ನು ಮುಟ್ಟಲು ಅಥವಾ ಹಿಡಿಯಲು ಸಾಧ್ಯವಿಲ್ಲ. ನಾನು ಯಾರು?
ಉತ್ತರ: ನಿಮ್ಮ ನೆರಳು
10. ಜನರು ನನ್ನನ್ನು ತಿನ್ನಲು ಖರೀದಿಸುತ್ತಾರೆ ಆದರೆ ಎಂದಿಗೂ ತಿನ್ನುವುದಿಲ್ಲ. ನಾನು ಯಾರು?
ಉತ್ತರ: ತಟ್ಟೆಗಳು ಮತ್ತು ಕಟ್ಲರಿ
11.ನಾನು ಚಿಕ್ಕವನಿದ್ದಾಗ ಎತ್ತರವಾಗಿರುತ್ತೇನೆ ಮತ್ತು ವಯಸ್ಸಾದಾಗ ಕುಳ್ಳನಾಗಿರುತ್ತೇನೆ.ನಾನು ಯಾರು?
ಉತ್ತರ: ಒಂದು ಮೇಣದ ಬತ್ತಿ
12. ನನಗೆ ಕಾಲುಗಳಿಲ್ಲ, ಕೈಗಳಿಲ್ಲ, ರೆಕ್ಕೆಗಳಿಲ್ಲ, ಆದರೆ ನಾನು ಆಕಾಶಕ್ಕೆ ಏರುತ್ತೇನೆ. ನಾನು ಏನು?
ಉತ್ತರ: ಹೊಗೆ
13.ತಯಾರಕರು ಅದನ್ನು ಬಯಸುವುದಿಲ್ಲ. ಖರೀದಿದಾರರು ಅದನ್ನು ಬಳಸುವುದಿಲ್ಲ. ಬಳಕೆದಾರರಿಗೆ ಅದು ತಿಳಿದಿಲ್ಲ. ನಾನು ಯಾರು?
ಉತ್ತರ: ಶವಪೆಟ್ಟಿಗೆ

## ಭಾರತೀಯ ಸಂಸತ್ತನ್ನು ಯಾವಾಗ ರಚಿಸಲಾಯಿತು?



ಭಾರತದ ಸಂವಿಧಾನ ಜಾರಿಗೆ ಬಂದ ನಂತರ ಭಾರತೀಯ ಸಂಸತ್ತನ್ನು ರಚಿಸಲಾಯಿತು. ಸಂವಿಧಾನವು ಜನವರಿ 26, 1950 ರಂದು ಜಾರಿಗೆ ಬಂದಿತು ಮತ್ತು ಮೊದಲ ಸಾರ್ವತ್ರಿಕ ಚುನಾವಣೆ 1951-52 ರಲ್ಲಿ ನಡೆಯಿತು. ಇದರ ಉದ್ಘಾಟನಾ ಅಧಿವೇಶನವು ಮೇ 13, 1952 ರಂದು ನವದೆಹಲಿಯ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ನಡೆಯಿತು; ಇದರಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಎರಡರ ಮೊದಲ ಅಧಿವೇಶನಗಳು ಸೇರಿವೆ.

**ಭಾರತೀಯ ಸಂಸತ್ತು ಎಂದರೇನು?**

ಭಾರತೀಯ ಸಂಸತ್ತು ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆಯನ್ನು ಒಳಗೊಂಡಿದೆ, ಇವು ಒಟ್ಟಾಗಿ ದೇಶದ ಕಾನೂನು ರಚನೆ ಪ್ರಕ್ರಿಯೆಯನ್ನು ನಡೆಸುತ್ತವೆ.

ಸಂಸತ್ತು ಸರ್ಕಾರದ ನೀತಿಗಳು ಮತ್ತು ಕಾರ್ಯಗಳನ್ನು ಪರಿಶೀಲಿಸುತ್ತದೆ ಮತ್ತು ಮಾರ್ಗದರ್ಶನ ಮಾಡುತ್ತದೆ.

ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಹೊಸ ಕಾನೂನುಗಳನ್ನು ಜಾರಿಗೆ ತರುವುದು ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡುವುದು ಸಂಸತ್ತಿನ ಪ್ರಾಥಮಿಕ ಕಾರ್ಯವಾಗಿದೆ.

ರಾಷ್ಟ್ರೀಯ ಬಜೆಟ್ ಮತ್ತು ಸರ್ಕಾರಿ ವೆಚ್ಚಗಳನ್ನು ಅನುಮೋದಿಸುವುದು ಸಂಸತ್ತಿನ ಜವಾಬ್ದಾರಿಯಾಗಿದೆ.

ಸಾರ್ವಜನಿಕರಿಗೆ ಸಂಬಂಧಿಸಿದ ವಿಷಯಗಳು ಮತ್ತು ರಾಷ್ಟ್ರೀಯ ಹಿತಾಸಕ್ತಿಯ ವಿಷಯಗಳ ಕುರಿತು ಸಂಸತ್ತು ಮುಕ್ತ ಚರ್ಚೆಗಳನ್ನು ನಡೆಸುತ್ತದೆ.

ದೇಶದೊಳಗೆ ಪ್ರಜಾಪ್ರಭುತ್ವವನ್ನು ಸಕ್ರಿಯ ಮತ್ತು ಕ್ರಿಯಾತ್ಮಕವಾಗಿಡುವಲ್ಲಿ ಸಂಸತ್ತು ಪಾತ್ರ ವಹಿಸುತ್ತದೆ.

## ಗಾದೆಮಾತುಗಳು

◆ಊರು ನೋಡಿ ಬಾ ಅಂದರೆ ತೋರಣ ಕಟ್ಟಿ ಬಂದ.
◆ಊರು ಬಾವಿಗೆ ಬಿದ್ದರೂ,ಊರ ಬಾಯಿಗೆ ಬೀಳಬಾರದು
◆ಊರು ಸುಟ್ಟರೂ ಹನುಮಂತರಾಯ ಹೊರಗೆ
◆ಊರು ಸೂರೆ ಹೋದ ಮೇಲೆ ಕೋಟೆ ಬಾಗಿಲು ಹಾಕಿದರಂತೆ
◆ ಊರು ಹೋಗು ಅನ್ನುತ್ತೆ; ಕಾಡು ಬಾ ಅನ್ನುತ್ತೆ
◆ಊರೆಲ್ಲ ದೋಚಿಕೊಂಡು ಹೋದಮೇಲೆ ದೊಡ್ಡಿ (ಕೋಟೆ) ಬಾಗಿಲು ಹಾಕಿದರಂತೆ.
◆ಎಂಜಲ ತಿಂದರೂ ಅಂಜದೆ ತಿನ್ನು
◆ಎಂಜಲು ಕೈಯಲ್ಲಿ ಕಾಗೆ ಓಡಿಸದ ಬುದ್ಧಿ
◆ಎಂಟು ವರ್ಷಕ್ಕೆ ನನ್ನ ಮಗ ದಂಟಾದ
◆ಎಂಟು ಹೊನ್ನು ಘನವಾದ ನಂಟು ತಂತು
◆ಎಂಥೆಂಥ ದೇವರಿಗೇ ಅಂತರಾಟ ಆಗಿರುವಾಗ ಕಾಲ್ಮುರುಕ ದೇವರಿಗೆ ಕೈಲಾಸವೇ
◆ಎಚ್ಚರ ತಪ್ಪಿ ಮಾತನಾಡಬಾರದು, ಹುಚ್ಚನಂತೆ ವರ್ತಿಸಬಾರದು.
◆ಎಟ್ಪ್ (ಹಟಮಾರಿ) ಗಂಡಗೆ ಖೊಟ್ಟಿ ಹೆಂಡತಿ
◆ಎಡಗಣ್ಣು ಹೊಡೆದರೆ ನಾರಿಗೆ ಶುಭ.
◆ಎಡದ ನೆತ್ತಿಗೆ ಬಡಿದರೆ ಬಲದ ನೆತ್ತಿಗೆ ತಾಕಿತು
◆ಎಡವಿದ ಕಾಲೇ ಎಡವುದು ಹೆಚ್ಚು.
◆ಎಣ್ಣೆ ಚೆಲ್ಲಿದವನೂ ಅತ್ತ, ಕಾಯಿ ಚೆಲ್ಲಿದವನೂ ಅತ್ತ.
◆ಎಣ್ಣೆ ತಣ್ಣಗಾದರೆ ಬೆಣ್ಣೆಯ ಹಾಗೆ ಇದ್ದೀತೆ?
◆ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡಂತೆ.
◆ಎಣ್ಣೆ ಬರುವಾಗ ಗಾಣ ಮುರೀತು.
◆ಎತ್ತ ಹೋದರೂ ಬಿಡದು ಒತ್ತಿ ಕಾಡುವ ವಿಧಿ
◆ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ.
◆ಎತ್ತು ಈಯಿತು ಅಂದರೆ ಕೊಟ್ಟಿಗೆಗೆ ಕಟ್ಟು ಅಂದರಂತೆ
◆ಎತ್ತು ಏರಿಗೆಳೀತು, ಕೋಣ ನೀರಿಗೆಳೀತು.
◆ಎತ್ತು ಚಲೋದಾದರೆ ಇದ್ದ ಊರಲ್ಲೇ ಗಿರಾಕಿ.
◆ಎತ್ತು ಮಾರಿದವಗೆ ಹಗ್ಗದ ಆಸೆಯೇ
◆ಗಾಳಿ ಬಂದಾಗ ತೂರಿಕೋ
◆ ದುಡ್ಡೇ ದೊಡ್ಡಪ್ಪ.
◆ ಜಾಣನಿಗೆ ಮಾತಿನೇ ಪೆಟ್ಟು,ದಡ್ಡನಿಗೆ ದೊಣ್ಣೆ ಪೆಟ್ಟು.
◆ ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ.
◆ ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತದೆಯೇ?
◆ ಉಗುರಿನಲ್ಲಿ ಹೋಗೋ ಚಿಗುರಿಗೆ ಕೊಡಲಿ ಯಾಕೆ.
◆ ಮನೆಗೆ ಮಾರಿ, ಊರಿಗೆ ಉಪಕಾರಿ.
1◆ ಹುಣಸೆ ಮುಪ್ಪಾದರೂ ಹುಳಿ ಮುಪ್ಪೇ?

## ರೈತ ಮತ್ತು ಹುಲಿ

ಒಂದಾನೊಂದು ಕಾಲದಲ್ಲಿ ದೊಡ್ಡ ಹುಲಿಯೊಂದಿತ್ತು.ಅದು ಕಾಡುಪ್ರಾಣಿಗಳ ರಾಜನಾಗಿತ್ತು. ಕಪ್ಪು ಚರ್ಮದ, ಬೆಂಕಿಯಂತಹ ಕಣ್ಣುಗಳ ಮತ್ತು ಚೂರಿಯಂತಹ ಹರಿತ ಹಲ್ಲುಗಳ ಈ ಹುಲಿ, ಕಾಡಿನ ಪ್ರಾಣಿಗಳಲ್ಲಿ ನಡುಕ ಹುಟ್ಟಿಸುತ್ತಿತ್ತು. ಹಲವಾರು ಪ್ರಾಣಿಗಳನ್ನು ಕೊಂದು ತಿನ್ನುತ್ತಿತ್ತು.

ಅದೊಂದು ದಿನ ಬೆಳಗ್ಗೆ ಜಿಂಕೆಯನ್ನು ಕೊಂದು ತಿಂದ ಹುಲಿ ಸುತ್ತಾಡಲು ಹೊರಟಿತು.ತನ್ನನ್ನು ಕಾಣುತ್ತಲೇ ಇತರ ಪ್ರಾಣಿಗಳು ಓಡುವುದನ್ನು ಕಂಡು ಅದರ ಸೊಕ್ಕು ಹೆಚ್ಚುತ್ತಿತ್ತು. ಆಗ ಹುಲಿಗೆ ಅಲ್ಲೊಂದು ದೃಶ್ಯ ಕಂಡಿತು; ಅದೇನೆಂದು ಅದಕ್ಕೆ ಅರ್ಥವಾಗಲಿಲ್ಲ. ಅಲ್ಲಿನ ಪರ್ವತದ ಬುಡದಲ್ಲಿದ್ದ ಗದ್ದೆಯಲ್ಲಿ ಕೋಣವೊಂದು ಸದ್ದಿಲ್ಲದೆ ನೇಗಿಲನ್ನು ಎಳೆಯುತ್ತಿತ್ತು.ಅದನ್ನು ಬಿದಿರಿನ ಕೋಲಿನಿಂದ ಬಡಿಯುತ್ತಾ, ಬೊಬ್ಬೆ ಹಾಕುತ್ತಾ ಯುವಕನೊಬ್ಬ ಹಿಂಬಾಲಿಸುತ್ತಿದ್ದ.

ಇದನ್ನು ಕಂಡು ಹುಲಿಗೆ ಗೊಂದಲವಾಯಿತು. ಯಾಕೆಂದರೆ ಅದರ ಕಾಡಿನ ಸಾಮ್ರಾಜ್ಯದಲ್ಲಿ ಯಾರೂ ಅದರೊಂದಿಗೆ ಆ ರೀತಿ ನಡೆದುಕೊಳ್ಳುವುದಿಲ್ಲ. ರೈತ ಮತ್ತು ಕೋಣ ವಿರಮಿಸಲು ನಿಲ್ಲುವ ವರೆಗೆ ಇದನ್ನು ನೋಡುತ್ತಾ ಹುಲಿ ಅಲ್ಲೇ ನಿಂತಿತ್ತು. ನಂತರ ಕೋಣನ ಹತ್ತಿರ ಬಂದ ಹುಲಿ ಕೇಳಿತು, 'ನನ್ನ ಗೆಳೆಯಾ, ಇದೇನಿದು! ಆ ಸಣ್ಣ ಮನುಷ್ಯ ನಿನಗೆ ಹಾಗೆ ಬಡಿಯುತ್ತಾ ಬೊಬ್ಬೆ ಹಾಕುವಾಗ ನೀನು ಯಾಕೆ ಸುಮ್ಮನಿದ್ದೆ? ನೀನು ದೊಡ್ಡ ಪ್ರಾಣಿ ಮತ್ತು ಶಕ್ತಿಶಾಲಿಯಾಗಿ ಕಾಣಿಸುತ್ತಿ. ಖಡ್ಗದಷ್ಟು ಹರಿತವಾದ ಚೂಪಾದ ನಿನ್ನ ಕೊಂಬುಗಳಿಂದ ನೀನು ಆ ಮನುಷ್ಯನನ್ನು ಯಾವಾಗ ಬೇಕಾದರೂ ಕೊಂದು ಬಿಡಬಹುದು.ನೀನ್ಯಾಕೆ ಅವನಿಗೆ ಶರಣಾಗಿದ್ದಿ ಅನ್ನೋದು ನನಗೆ ಅರ್ಥವಾಗುತ್ತಲೇ ಇಲ್ಲ.'

ಹುಲಿಯನ್ನು ನೇರವಾಗಿ ನೋಡಿದ ಕೋಣ ದುಃಖದಿಂದ ಹೇಳಿತು, 'ಅವನೇನೋ ಸಣ್ಣ ಮನುಷ್ಯ. ಆದರ ಅವನಲ್ಲಿ ಬುದ್ಧಿವಂತಿಕೆ ಇದೆಯೆಂಬುದು ನಿನಗೆ ತಿಳಿದಿಲ್ಲವೇ?'

'ಏನೆಂದೆ?ಬುದ್ಧಿವಂತಿಕೆ ಅಂದೆಯಾ? ಅದೇನದು' ಎಂದು ಕೇಳಿತು ಹುಲಿ.ಕೋಣಕ್ಕೆ ಕಿರಿಕಿರಿಯಾಯಿತು.ಯಾಕೆಂದರೆ ಬುದ್ಧಿವಂತಿಕೆ ಎಂದರೇನೆಂದು ಅದಕ್ಕೂ ತಿಳಿದಿರಲಿಲ್ಲ. ಆದರೆ ಇದನ್ನು ಒಪ್ಪಿಕೊಳ್ಳಲು ಕೋಣ ತಯಾರಿರಲಿಲ್ಲ. ಆದ್ದರಿಂದ ಕೋಣ ಹೇಳಿತು, 'ನೀನೇ ಹೋಗಿ ಅದೇನೆಂದು ಮನುಷ್ಯನನ್ನು ಕೇಳು.'

ಬಿದಿರಿನ ಕೊಳವೆಯೊಂದನ್ನು ಬಾಯಿಗಿರಿಸಿ ಸೇದುತ್ತಿದ್ದ ರೈತನ ಬಳಿಗೆ ನಡೆದು ಬಂದ ಹುಲಿ ಕೇಳಿತು, 'ನಿನ್ನಲ್ಲಿ ಬುದ್ಧಿವಂತಿಕೆ ಇದೆಯೆಂದು ಕೋಣ ಹೇಳಿತು. ಹೌದೇನು?'

'ಹೌದು,ಅದು ಸತ್ಯ' ಎಂದ ರೈತ. ಆಗ ಹುಲಿ ಪ್ರಶ್ನಿಸಿತು,'ಅದೇನದು? ನನಗೆ ದಯವಿಟ್ಟು ಅದನ್ನು ತೋರಿಸುತ್ತೀಯಾ?

ರೈತನ ಉತ್ತರ,'ನಿನಗೆ ಅದನ್ನು ತೋರಿಸಬಹುದಾಗಿತ್ತು. ಆದರೆ ಅದು ಗದ್ದೆಯಲ್ಲಿ ಕಳೆದು ಹೋಗಬಹುದೆಂದು ಹೆದರಿ ಅದನ್ನು ಇವತ್ತು ಬೆಳಗ್ಗೆ ಮನೆಯಲ್ಲೇ ಇಟ್ಟು ಬಂದೆ.'

ಈಗ ಹುಲಿ ಕೇಳಿತು, 'ಮನೆಗೆ ಹೋಗಿ ಅದನ್ನು ತರುತ್ತೀಯಾ? ನನಗೆ ನಿಜವಾಗಿಯೂ ಅದನ್ನು ನೋಡಬೇಕಾಗಿದೆ.'

'ಖಂಡಿತವಾಗಿ ಅದನ್ನು ಮನೆಯಿಂದ ತರುತ್ತೇನೆ' ಎಂದು ಕೆಲವು ಹೆಜ್ಜೆ ನಡೆದು ಹೋದ ರೈತ.ನಂತರ ಗಕ್ಕನೆ ನಿಂತು,ವಾಪಾಸು ಬಂದ. 'ನಾನು ಈಗ ಹೋಗಲಾಗದು.ಯಾಕೆಂದರೆ, ನಾನು ದೂರ ಹೋದಾಗ ನೀನು ಕೋಣವನ್ನು ಕೊಲ್ಲುತ್ತಿ ಎಂದು ಹೆದರಿಕೆಯಾಗುತ್ತಿದೆ' ಎಂದ.

'ಕೋಣವನ್ನು ಕೊಲ್ಲುವುದಿಲ್ಲವೆಂದು ನಾನು ಮಾತು ಕೊಡುತ್ತೇನೆ. ಯಾಕೆಂದರೆ ಬೆಳಗ್ಗೆ ಒಂದು ಜಿಂಕೆಯನ್ನು ತಿಂದು ನನ್ನ ಹೊಟ್ಟೆ ತುಂಬಿದೆ. ಹಾಗಾಗಿ ನೀನು ಚಿಂತೆ ಮಾಡಬೇಡ' ಎಂದಿತು ಹುಲಿ.

ಒಂದು ಕ್ಷಣ ಯೋಚಿಸಿದ ರೈತ ಹೇಳಿದ, 'ಸರಿ, ಆ ಮರಕ್ಕೆ ನಿನ್ನಲು ಕಟ್ಟಲು ಒಪ್ಪಿದರೆ ನಾನು ಮನೆಗೆ ಹೋಗಿ ಬರುತ್ತೇನೆ.ಆಗ ನೀನು ಕೋಣವನ್ನು ತಿನ್ನುತ್ತಿ ಎಂಬ ಚಿಂತೆ ನನಗೆ ಇರೋದಿಲ್ಲ.'

ಬುದ್ಧಿವಂತಿಕೆಯನ್ನು ಕಾಣಲು ಕಾತರವಾಗಿದ್ದ ಹುಲಿ ಈ ಸಲಹೆಯನ್ನು ಒಪ್ಪಿತು. ಹುಲಿಯನ್ನು ಹತ್ತಿರದ ಮರಕ್ಕೆ ಹಗ್ಗದಿಂದ ಬೇಗನೇ ಕಟ್ಟಿದ ರೈತ. ಅನಂತರ ಹುಲಿಯ ಸುತ್ತಲೂ ಒಣ ಎಲೆ ಮತ್ತು ಕಟ್ಟಿಗೆ ಪೇರಿಸಿದ ರೈತ,ಅವಕ್ಕೆ ಬೆಂಕಿ



ಕೊಟ್ಟು ಹೇಳಿದ,'ಈಗ ನೋಡು, ಇಲ್ಲಿದೆ ನನ್ನ ಬುದ್ಧಿವಂತಿಕೆ.'

ಬೆಂಕಿಯ ಜ್ವಾಲೆಗಳು ಎತ್ತರಕ್ಕೆ ಏರಿದಂತೆ ಬಿಸಿಯೂ ಏರಿತು. ಆದರೆ ಹುಲಿಗೆ ಅಲುಗಾಡಲಿಕ್ಕೂ ಆಗಲಿಲ್ಲ.ಬೆಂಕಿಯಿಂದಾಗಿ ಹುಲಿ ಸಂಕಟ ಪಟ್ಟಿತು ಮತ್ತು ಅಸಹಾಯಕವಾಗಿ ಒದ್ದಾಡಿತು. ಅದನ್ನು ನೋಡಿದ ಕೋಣ ಬಿದ್ದು ಬಿದ್ದು ನಗುವಾಗ,ಒಂದು ಕಲ್ಲಿನ ಮೇಲೆ ಕಾಲಿಟ್ಟು ಜಾರಿ ಬಿತ್ತು. ಅದರಿಂದಾಗಿ ಅದರ ಬಾಯಿಯ ಮೇಲ್ಭಾಗದ ಹಲ್ಲುಗಳು ಮುರಿದವು.

ಹುಲಿಯ ಸುತ್ತ ಬಿಗಿದಿದ್ದ ಹಗ್ಗ ಸುಟ್ಟ ನಂತರವೇ ಹುಲಿಗೆ ಅಲ್ಲಿಂದ ಪಾರಾಗಲು ಸಾಧ್ಯವಾಯಿತು. ನೋವಿನಿಂದ ಗರ್ಜಿಸಿದ ಹುಲಿ, ಅಲ್ಲಿಂದ ತಕ್ಷಣವೇ ಓಡಿ ಕಾಡಿನೊಳಗೆ ಹೋಯಿತು.

ರೈತ ಹಾಕಿದ ಬೆಂಕಿಯಿಂದಾಗಿ ಚರ್ಮ ಸುಟ್ಟ ಕಾರಣ, ಹುಲಿಯ ಕುಟುಂಬದವರಿಗೆಲ್ಲ ಹುಟ್ಟುವಾಗ ಕಪ್ಪು ಮತ್ತು ಕಂದು ಪಟ್ಟೆಗಳ ಚರ್ಮ ಇರುತ್ತದೆ ಮತ್ತು ಹಲ್ಲು ಮುರಿದುಕೊಂಡ ಕೋಣನ ಕುಟುಂಬದವರಿಗೆಲ್ಲ ಹುಟ್ಟುವಾಗ ಬಾಯಿಯ ಮೇಲ್ಭಾಗದ ಹಲ್ಲುಗಳು ಇರುವುದಿಲ್ಲ.

## ಗಾದೆ ಮಾತುಗಳು

1) ಎಲ್ಲರ ಮನೆ ದೋಸೇನೂ ತೂತೆ .
2) ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು.
3)ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ.
4) ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.
5)ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.
6)ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ಕೊಂಡು ನೋಡಿಕೊಂಡ
7)ಕಾಮಾಲೆ ಕಣ್ಣಿಗೆ ಜಗವೆಲ್ಲ ಹಳದಿ.
8)ದುಡಿಮೆಯೇ ದೇವರು
9)ನಾಯಿ ಬೊಗಳಿದರೆ ನಾಗಲೋಕ ಹಾಳೆ.
10)ನಾಳೆ ಎಂಬುವನ ಮನೆ ಹಾಳು .
11)ತಿರುಕನ ಕನಸು ನಿಜ ಅಲ್ಲ.

# ಅಜೆಕಾರು ಕಲಾಭಿಮಾನಿ ಬಳಗ ಮುಂಬಯಿಯ ರಜತ ಪರ್ವ ; ಮುಂಬಯಿ ಯಕ್ಷಗಾನ ಸಮ್ಮೇಳನ - 2026; ಯಕ್ಷರಕ್ಷಾ ಸಾಧಕ ಪುರಸ್ಕಾರ ಸಮಾರಂಭ

# ಯಕ್ಷಗಾನದ ಉಳಿವಿನಲ್ಲಿ ಮತ್ತು ಬೆಳವಣಿಗೆಯಲ್ಲಿ ಅಜೆಕಾರು ಬಾಲಕೃಷ್ಣ ಶೆಟ್ಟಿಯವರ ಶ್ರಮ ಅಪಾರ - ಪ್ರಕಾಶ್ ಭಂಡಾರಿ


ಡಾ| ಸುರೇಶ್ ರಾವ್ ಕಲಾ ಗೌರವ ಯಕ್ಷರಕ್ಷಾ ಪ್ರಶಸ್ತಿಯನ್ನು ಸ್ವೀಕರಿಸಿದಾಗ


ಎಳತ್ತೂರುಗುತ್ತು ದಯಾನಂದ ಶೆಟ್ಟಿ ಕಲಾಗೌರವ ಯಕ್ಷರಕ್ಷಾ ಪ್ರಶಸ್ತಿಯನ್ನು ಸ್ವೀಕರಿಸಿದಾಗ


ಪದ್ಮನಾಭ ಶೆಟ್ಟಿ ದಂಪತಿ ಕಲಾಗೌರವ ಯಕ್ಷರಕ್ಷಾ ಪ್ರಶಸ್ತಿಯನ್ನು ಸ್ವೀಕರಿಸಿದಾಗ


ಯಕ್ಷರಕ್ಷಾ ಸಾಧಕ ಪ್ರಶಸ್ತಿಯನ್ನು ಸ್ವೀಕರಿಸಿದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರು


ಯಕ್ಷರಕ್ಷಾ ಸಾಧಕ ಪ್ರಶಸ್ತಿಯನ್ನು ಸ್ವೀಕರಿಸಿದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರು

(ಚಿತ್ರ, ವರದಿ : ಶ್ರೀಧರ್ ಉಚ್ಚಿಲ್)

ಮುಂಬಯಿ, ಅ. 4– ನನಗೂ ಬಾಲಕೃಷ್ಣ ಶೆಟ್ಟಿಯವರಿಗೂ ಕಳೆದ ಇಪ್ಪತ್ತೈದು ವರ್ಷಗಳಿಂದ ಆತ್ಮೀಯ ಸಂಬಂಧವಿದೆ. ನಮ್ಮ ಚಿಣ್ಣರ ಬಿಂಬದ ಮಕ್ಕಳಿಗೆ ಯಕ್ಷಗಾನ ತರಬೇತಿಯನ್ನು ನೀಡಿ ಅವರಲ್ಲಿ ಯಕ್ಷಗಾನ ಕಲೆಯನ್ನು ಬೆಳೆಸಿ, ಯಕ್ಷಗಾನ ಗುರು ಸ್ಥಾನದಲ್ಲಿದ್ದು ಅನೇಕ ಕಲಾವಿದರನ್ನು ಸೃಷ್ಟಿಸಿ, ಯಕ್ಷ ರಂಗಕ್ಕೆ ನೀಡಿದ ಹಿರಿಮೆಗೆ ಪಾತ್ರರಾದವರಿದ್ದಾರೆ. ಕೇವಲ ಮಕ್ಕಳಿಗೆ ಮಾತ್ರವಲ್ಲ ಅದೆಷ್ಟೋ ಹಿರಿಯರಿಗೆ, ಯುವ ವರ್ಗಕ್ಕೆ ಯಕ್ಷಗಾನದ ತಿರುಳನ್ನು ತಿಳಿ ಹೇಳುವ ಮೂಲಕ ಯಕ್ಷಗಾನದ ಉಳಿವಿನಲ್ಲಿ ಮತ್ತು ಬೆಳವಣಿಗೆಯಲ್ಲಿ ಅಜೆಕಾರು ಬಾಲಕೃಷ್ಣ ಶೆಟ್ಟಿ ಬಹಳಷ್ಟು ಶ್ರಮ ವಹಿಸಿದ್ದಾರೆ. ಅದೆಷ್ಟೋ ಕಲಾವಿದರಿಗೆ ಸ್ಥಾನವನ್ನು ನೀಡಿ ಅವರ ಪ್ರತಿಭೆಗೆ ಪ್ರೇರಣೆಯನ್ನು ನೀಡಿದವರಿದ್ದಾರೆ. ಇಂದು ಕೂಡ ತಮ್ಮ ರಜತ ಮಹೋತ್ಸವದ ಸಂದರ್ಭದಲ್ಲಿ ಕೇವಲ ಯಕ್ಷಗಾನ ಮಾತ್ರವಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸೇವಾ ನಿರತರಾಗಿರುವವರನ್ನು ಗೌರವಾನ್ವಿತವಾಗಿ ಸನ್ಮಾನಿಸಿದ್ದಾರೆ. ಈ ಸನ್ಮಾನದಲ್ಲಿ ಭಾಗವಹಿಸಿ, ಸಾಧಕರನ್ನು ಸನ್ಮಾನಿಸಲು ಸಿಕ್ಕಿದ ಅವಕಾಶ ನನ್ನ ಭಾಗ್ಯ ಎಂದು ಭಾವಿಸುತ್ತೇನೆ. ಅವರಿಂದ ಇನ್ನಷ್ಟು ಕಲಾ ಸೇವೆ, ಯಕ್ಷಗಾನವನ್ನು ಉಳಿಸಿ ಬೆಳೆಸುವ ಕಾರ್ಯ ನಡೆಯಲಿ ಎಂದು ನಿವೃತ್ತ ಪೊಲೀಸ್ ಅಧಿಕಾರಿ, ಚಿಣ್ಣರ ಬಿಂಬದ ರೂವಾರಿ ಪ್ರಕಾಶ್ ಭಂಡಾರಿ ಅಭಿಮಾನದ ನುಡಿಗಳನ್ನಾಡಿದರು.

ಅವರು ಬಂಟರ ಭವನದಲ್ಲಿ ನಿರ್ಮಿತ ಕಲ್ಯಾಡಿ ವಿಠಲ ಶೆಟ್ಟಿ ಪ್ರಾಂಗಣದಲ್ಲಿ ಛಂದೋಬದ್ಧ ಡಾ. ಎನ್. ನಾರಾಯಣ ಶೆಟ್ಟಿ ಶಿಮಂತೂರು ನಿರ್ಮಿತ ಸಭಾಂಗಣ ಹಾಗು ಡಾ. ಆರ್. ಕೆ. ಶೆಟ್ಟಿ ನಿರ್ಮಿತ ಯಕ್ಷಕಲಾ ವೇದಿಕೆಯಲ್ಲಿ ವಿವಿಧ ಯಕ್ಷಗಾನ ಗೋಷ್ಠಿ, ಯಕ್ಷಗಾನ, ತಾಳಮದ್ದಳೆ ಪ್ರದರ್ಶನದಿಂದ ಕೂಡಿದ ಯಕ್ಷಗಾನ ಸಮ್ಮೇಳನ; ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ತುಳು-ಕನ್ನಡಿಗರಿಗೆ ಯಕ್ಷರಕ್ಷ ಕಲಾ ಗೌರವ, ಯಕ್ಷರಕ್ಷಾ ಪ್ರಶಸ್ತಿ ಪ್ರದಾನ, ಯಕ್ಷಗಾನ ಸಂಘಟನಾ ಕಲಾ ಗೌರವ ಸಮಾರಂಭದೊಂದಿಗೆ ಅ. 3ರ ಶನಿವಾರ ಸಂಜೆ ಜರಗಿದ ನಾಮಾಂಕಿತ ಕಲಾ ಸಂಘಟಕ, ಯಕ್ಷಗಾನ ಗುರು ಬಾಲಕೃಷ್ಣ ಶೆಟ್ಟಿ ಅಜೆಕಾರು ಅವರ ಅಜೆಕಾರು ಕಲಾಭಿಮಾನಿ ಬಳಗ (ರಿ.) ಮುಂಬಯಿಯ 25ನೇ ವರ್ಷದ ರಜತ ಸಂಭ್ರಮಾಚರಣೆ, ಮುಂಬಯಿ ಯಕ್ಷಗಾನ ಸಮ್ಮೇಳನ - 2026 ಭವ್ಯ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ವಹಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ಕನ್ನಡಿಗ ಕಲಾವಿದರ ಪರಿಷತ್ ಮಹಾರಾಷ್ಟ್ರದ ಅಧ್ಯಕ್ಷ ಡಾ. ಸುರೇಂದ್ರ ಕುಮಾರ್ ಹೆಗ್ಡೆ ಮಾತನಾಡುತ್ತಾ, 'ಅಜೆಕಾರು ಬಾಲಕೃಷ್ಣ ಶೆಟ್ಟಿ ಹುಟ್ಟು ಹಾಕಿ 25 ವರ್ಷದ ಸಂಭ್ರಮದಲ್ಲಿರುವ ಅಜೆಕಾರು ಕಲಾಭಿಮಾನಿ ಬಳಗ ಇಂದು ಪ್ರಬುದ್ಧವಾಗಿ ಬೆಳೆದ ಸಂಸ್ಥೆಯಾಗಿದೆ. ಯಕ್ಷರಂಗದ ಬೆಳವಣಿಗೆಯಲ್ಲಿ ಅದ್ವಿತೀಯ ಸಾಧನೆಗೈದ ಸಂಸ್ಥೆಯಾಗಿದೆ. ಓರ್ವ ಯಕ್ಷಗಾನ ಕಲಾವಿದನಾಗಿ, ಆರ್ಥಿಕವಾಗಿ ಸಮರ್ಥರಲ್ಲದಿದ್ದರೂ ಅನೇಕರನ್ನು ಕಲಾ ಪ್ರೋತ್ಸಾಹಕರ ಸಹಾಯ-ಸಹಕಾರವನ್ನು ಪಡೆದು, ಕಲೆಯನ್ನು ಉಳಿಸಿ, ಕಲಾವಿದರಿಗೆ ಪ್ರೇರಣೆಯನ್ನು ನೀಡುತ್ತಾ ಬಂದ ಅಜೆಕಾರು ಬಾಲಕೃಷ್ಣ ಶೆಟ್ಟಿಯವರ ಸಾಧನೆ ಶ್ಲಾಘನೀಯ. ಸಾವಿರಾರು ಹಿರಿಯ, ಕಿರಿಯ ಕಲಾಸಕ್ತರಿಗೆ ಯಕ್ಷಗಾನದ ಹೆಜ್ಜೆಯನ್ನು ಕಲಿಸಿ, ಕಲಾವಿದರನ್ನಾಗಿಸಿದ ಹಿರಿಮೆ ಅವರ ಪಾಲಿಗಿದೆ. ಇಂದು ಚಿಣ್ಣರ ಬಿಂಬದಲ್ಲಿ ಸುಮಾರು ಏಳು ಸಾವಿರ ವಿದ್ಯಾರ್ಥಿಗಳಿದ್ದು ಅದರಲ್ಲಿ ಸುಮಾರು ಐದು ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಯಕ್ಷಗಾನ ಕ್ಷೇತ್ರದಲ್ಲಿ ತಮ್ಮನ್ನು ತಾವು ಸಕ್ರಿಯರಾಗಿಸಿಕೊಂಡಿದ್ದರೆ ಅದರ ಸಂಪೂರ್ಣ ಶ್ರೇಯಸ್ಸು ಯಕ್ಷಗಾನ ಗುರು ಸ್ಥಾನದಲ್ಲಿರುವ ಬಾಲಕೃಷ್ಣ ಅಜೆಕಾರು ಅವರಿಗೆ ಸಲ್ಲುವಂತಿದೆ. 'ಇಂದೀಗ ಎರಡು ದಿನದ ಈ ಯಕ್ಷಗಾನ ಸಮ್ಮೇಳನವನ್ನು ಆಯೋಜಿಸಿ ಮತ್ತೊಂದು ಸಾಧನಾತ್ಮಕ ಕಾರ್ಯವನ್ನು ಮಾಡಿದ್ದಾರೆ. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಗುರುತಿಸಿ ಅವರನ್ನು ಸನ್ಮಾನಿಸಿದ್ದಾರೆ. 'ಇದೆಲ್ಲವೂ ಕೂಡ ಅವರ ಅತ್ಯುತ್ತಮ ಕಲಾ ಸೇವೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ನುಡಿಯುತ್ತಾ ಅವರ ಕಲಾ ಸೇವೆ ನಿರಂತರವಾಗಿರಲಿ. ಮಹಾರಾಷ್ಟ್ರ ಕಲಾವಿದರ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಎಂದರು.

ಈ ಸಮಾರಂಭದ ವೇದಿಕೆಯಲ್ಲಿ ಗೌರವ ಅತಿಥಿಗಳಾಗಿ ಬಂಟರ ಸಂಘ ಮುಂಬಯಿಯ ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿ ಕಾರ್ಯಾಧ್ಯಕ್ಷ ಗಿರೀಶ್ ಶೆಟ್ಟಿ ಇನ್ನ, ಕಲಾ ಪೋಷಕ ಸತೀಶ್ ಶೆಟ್ಟಿ ಅಜೆಕಾರು (ಭೂತಪಾದಲು), ಗೀತಾಂಬಿಕಾ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಅಧ್ಯಕ್ಷ ಸತೀಶ್ ಶೆಟ್ಟಿ ಕೊಟ್ರಪಾಡಿ, ಯಕ್ಷ ಕಲಾರಂಗ ಕಾರ್ಕಳದ ಅಧ್ಯಕ್ಷ ವಿಜಯ ಶೆಟ್ಟಿ ಕಾರ್ಕಳ, ಕಲಾ ಗೌರವ ಪುರಸ್ಕೃತ ಬಿ.ಎಸ್.



ಕಾರ್ಯಕ್ರಮದ ಯಶಸ್ಸಿನ ಹಿನ್ನಲೆಯಲ್ಲಿ ಹೆಚ್ಚಿನ ಸಹಾಯ, ಸಹಕಾರ ನೀಡಿದವರು ಗೌರವವನ್ನು ಸ್ವೀಕರಿಸಿದಾಗ

ಯಕ್ಷಗಾನ ಕಲೆಗೆ ಮಹತ್ತರ ಕೊಡುಗೆಯನ್ನು ನೀಡುವ ದ.ಕನ್ನಡದ ಪುಣ್ಯ ಕ್ಷೇತ್ರವಾದ ಕಟೀಲಿನ ಪರಮ ಪಾವನ ಪುಣ್ಯ ಭೂಮಿಯಲ್ಲಿ ಹುಟ್ಟಿ ಬೆಳೆದವನಾಗಿರುವುದರಿಂದ ಯಕ್ಷಗಾನಕ್ಕೂ ನನಗೂ ಒಂದು ರೀತಿಯ ನಿಕಟ ಸಂಬಂಧವಿದೆ. ಯಕ್ಷಗಾನದ ಬಗ್ಗೆ ಅಪಾರ ಅಭಿಮಾನ ಗೌರವವಿದೆ. ಈ ಹಿನ್ನಲೆಯಲ್ಲಿ ಇಂದು ಈ ರಜತ ಪರ್ವದ ಸಂಭ್ರಮಾಚರಣೆಯ ಯಕ್ಷಗಾನ ಸಮ್ಮೇಳನದ ವೇದಿಕೆಯಲ್ಲಿ ನನಗೆ ಯಕ್ಷರಕ್ಷ ಕಲಾ ಗೌರವವನ್ನು ಸ್ವೀಕರಿಸುವ ಯೋಗ ಭಾಗ್ಯ ದಕ್ಕಿದೆ. ಈ ಸನ್ಮಾನ ಕಟೀಲು ಶ್ರೀ ದುರ್ಗಾಪರಮೇಶ್ವರಿಯ ಮತ್ತು ಗೋಕುಲ ಗೋಪಾಲ ಕೃಷ್ಣನ ಪ್ರಸಾದವೆಂದು ಸ್ವೀಕರಿಸಿದ್ದೇನೆ. **- ಡಾ| ಸುರೇಶ್ ರಾವ್**
**(ಮಾಜಿ ಅಧ್ಯಕ್ಷ : ಬಿ.ಎಸ್.ಕೆ.ಬಿ. ಎಸೋಸಿಯೇಶನ್ ಮುಂಬಯಿ)**


ಪ್ರಕಾಶ್ ಭಂಡಾರಿ ಗೌರವಿಸಲ್ಪಟ್ಟಾಗ


ಡಾ. ಸುರೇಂದ್ರ ಕುಮಾರ್ ಹೆಗ್ಡೆ ಗೌರವಿಸಲ್ಪಟ್ಟಾಗ

ಕೆ.ಬಿ ಎಸೋಸಿಯೇಶನ್ ಮುಂಬಯಿಯ ಮಾಜಿ ಅಧ್ಯಕ್ಷ ಡಾ| ಸುರೇಶ್ ರಾವ್, ನವೋದಯ ಕನ್ನಡ ಸೇವಾ ಸಂಘ (ರಿ.) ಥಾಣೆಯ ಅಧ್ಯಕ್ಷ ಎಳತ್ತೂರುಗುತ್ತು ದಯಾನಂದ ಶೆಟ್ಟಿ, ಕಲಾ ಪೋಷಕ ಪದ್ಮನಾಭ ಶೆಟ್ಟಿ ವರ್ಲಿ, ಕಾರ್ಯಕ್ರಮದ ರೂವಾರಿ ಬಾಲಕೃಷ್ಣ ಶೆಟ್ಟಿ ಅಜೆಕಾರು ಮೊದಲಾದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಬಿ.ಎಸ್.ಕೆ.ಬಿ. ಎಸೋಸಿಯೇಶನ್ ಮುಂಬಯಿಯ ಮಾಜಿ ಅಧ್ಯಕ್ಷ ಡಾ| ಸುರೇಶ್ ರಾವ್, ಕಲಾ ಪೋಷಕ ಪದ್ಮನಾಭ ಶೆಟ್ಟಿ ವರ್ಲಿ ಅವರನ್ನು ಪತ್ನಿ ದಿವ್ಯಾ ಶೆಟ್ಟಿ ಜೊತೆಯಲ್ಲಿ ಹಾಗೇ ನವೋದಯ ಕನ್ನಡ ಸೇವಾ ಸಂಘ ಥಾಣೆ ಮತ್ತು ನವೋದಯ ಇಂಗ್ಲೀಷ್ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜು ಥಾಣೆಯ ಕಾರ್ಯಾಧ್ಯಕ್ಷ ಎಳತ್ತೂರುಗುತ್ತು ದಯಾನಂದ ಎಸ್. ಶೆಟ್ಟಿಯವರಿಗೆ ಪೇಟ ತೊಡಿಸಿ, ಶಾಲು ಹೊದಿಸಿ, ಹೂಗುಚ್ಛ, ನೆನಪಿನ ಕಾಣಿಕೆಯನ್ನು ನೀಡಿ ಅವರ ಸೇವೆಗೆ ಪೂರಕವಾಗಿ ಕಲಾ ಗೌರವ ರಜತ ಯಕ್ಷರಕ್ಷಾ ಪ್ರಶಸ್ತಿಯನ್ನು ನೀಡಿ ಆದರ ಪೂರ್ವಕವಾಗಿ ಪುರಸ್ಕರಿಸಲಾಯಿತು.

ಮತ್ತು ದಾಮೋದರ ಶೆಟ್ಟಿ ಇರುವೈಲು (ಯಕ್ಷಗಾನ ಕಲಾವಿದ), ಪ್ರಶಾಂತ್ ಶೆಟ್ಟಿ (ಯಕ್ಷಗಾನ ಕಲಾವಿದ), ಮಹೇಂದ್ರ ಶೆಟ್ಟಿ ನಂದ್ರೋಳ್ಳಿ (ಯಕ್ಷಗಾನ ಭಾಗವತ), ಅಶೋಕ್ ಕುಮಾರ್ ಕೊಡ್ಯಡ್ಕ (ನಾಟಕ ಕಲಾವಿದ), ಪ್ರಿಯಾ ಸರೋಜಾ (ನಾಟಕ ಕಲಾವಿದ), ಮನೋಹರ್ ಎಸ್. ಕುಂದರ್ (ಯಕ್ಷಗಾನ ಛಾಯಾಚಿತ್ರ ಗ್ರಾಹಕ), ಗುಣಪಾಲ ಉಡುಪಿ (ನಾಟಕ ಕಲಾವಿದ), ಮನೋಹರ್ ಶೆಟ್ಟಿ ನಂದಳಿಕೆ (ನಾಟಕ

ನಾನು ತವರೂರನ್ನು ತೊರೆದು ಮುಂಬಯಿಗೆ ಬಂದು ಹೋಟೇಲಿನಲ್ಲಿ ದುಡಿದು ರಾತ್ರಿ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿ, ಮುಂದೆ ಉದ್ಯೋಗ ದಕ್ಕಿದ ಸಮಯದಲ್ಲಿ ಏನಾದರೂ ಸಮಾಜ ಪರ ಸೇವೆಯನ್ನು ಮಾಡಬೇಕು ಎನ್ನುವ ಉದ್ದೇಶದಿಂದ 2008ರಲ್ಲಿ ನವೋದಯ ಕನ್ನಡ ಸೇವಾ ಸಂಘ ಮತ್ತು ಅದರ ಆಶ್ರಯದ ಶಿಕ್ಷಣ ಸಂಸ್ಥೆಯನ್ನು ಸೇರಿಕೊಂಡೆ. ಮುಂದೆ ಈ ಸಂಸ್ಥೆಯಲ್ಲಿ ವಿವಿಧ ಹುದ್ದೆಯನ್ನು ವಹಿಸಿ ಕಳೆದ 6 ವರ್ಷದಿಂದ ಅಧ್ಯಕ್ಷನಾಗಿ ಈ ಸಂಘವನ್ನು ಮತ್ತು ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸುವ ಯೋಗ ಭಾಗ್ಯ ದಕ್ಕಿದೆ. ನಮ್ಮ ಈ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ ನಮ್ಮ ತವರೂರ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳು ಜರಗುತ್ತಿವೆ. ವಿಶೇಷವಾಗಿ ಯಕ್ಷಗಾನಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಇದರ ಹಿಂದೆ ನನ್ನ ಒಬ್ಬನ ಶ್ರಮವಲ್ಲ, ನಮ್ಮ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರ ಒಮ್ಮತದ ಸಹಕಾರದಿಂದ ನಡೆಯುತ್ತಾ ಬಂದಿದೆ. ಹಾಗೇ ನನ್ನ ಈ ಹದಿನಾರು ವರ್ಷದ ಸಮಾಜಪರ ಸೇವಾ ಕಾರ್ಯಗಳಲ್ಲಿ ಈವರೆಗೂ ಸನ್ಮಾನ ಸಿಕ್ಕಿರಲಿಲ್ಲ. ಇಂದು ನನ್ನ ಈ ಅಳಿಲ ಸೇವೆಗೆ ದಕ್ಕಿದ ಮೊದಲ ಸನ್ಮಾನವಾಗಿದೆ. ಅಜೆಕಾರು ಬಾಲಕೃಷ್ಣ ಶೆಟ್ಟಿಯವರ ಮುಖಾಂತರ ಯಕ್ಷರಕ್ಷಾ ಕಲಾಸೇವಾ ಪ್ರಶಸ್ತಿ ಪುರಸ್ಕಾರವನ್ನು ಸ್ವೀಕರಿಸಿದ್ದೇನೆ. ಇದು ನನ್ನ ತಂದೆ-ತಾಯಿಯ, ಗುರು-ಹಿರಿಯರ ಆಶೀರ್ವಾದದ ಫಲವೆಂದು ಭಾವಿಸುತ್ತೇನೆ.
**- ಎಳತ್ತೂರು ಗುತ್ತು ದಯಾನಂದ ಎಸ್. ಶೆಟ್ಟಿ**
**(ಅಧ್ಯಕ್ಷ : ನವೋದಯ ಕನ್ನಡ ಸೇವಾ ಸಂಘ (ರಿ.) ಥಾಣೆ)**

ಅಜೆಕಾರು ಕಲಾಭಿಮಾನಿ ಬಳಗದ ಆಶ್ರಯದಲ್ಲಿ ಅಜೆಕಾರು ಬಾಲಕೃಷ್ಣ ಶೆಟ್ಟಿಯವರ ಮುಂದಾಳತ್ವದಲ್ಲಿ ಜರಗುವ ಈ ಕಾರ್ಯಕ್ರಮ ಯಕ್ಷಗಾನ ಸಮ್ಮೇಳನ ಅಲ್ಲ. ಇದೊಂದು ಜಾತ್ರೆ ಎಂದೇ ಹೇಳುವಂತಿದೆ. ಇಂತಹ ಉತ್ಸಾಹಭರಿತ ವಾತಾವರಣದ ಕಾರ್ಯಕ್ರಮ, ಕಲೆಯನ್ನು ಪೋಷಿಸುವ ಕಾರ್ಯ ನಿರಂತರ ನಡೆಯುತ್ತಿರಲಿ. ಇಂದಿನ ಈ ಸನ್ಮಾನದಿಂದ ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿದೆ ಎಂದು ಭಾವಿಸುತ್ತೇನೆ. **- ಪದ್ಮನಾಭ ಶೆಟ್ಟಿ ವರ್ಲಿ (ಕಲಾ ಪೋಷಕ)**

ನಿರ್ದೇಶಕ), ಮನೋಹರ್ ಎಸ್. ಕುಂದರ್ (ಯಕ್ಷಗಾನ ಛಾಯಾಗ್ರಾಹಕ), ಅಶೋಕ್ ಕಾರ್ನಾಡ್ (ರಂಗ ಕಲಾವಿದ), ನಾಗೇಶ್ ಪೊಳಲಿ (ಯಕ್ಷಗಾನ ಕಲಾವಿದ), ಸಂತೋಷ್ ದೇವಾಡಿಗ (ಯಕ್ಷಗಾನ ಸ್ತ್ರೀ ಪಾತ್ರಧಾರಿ), ಮಧುಸೂದನ್ ಪಾಲನ್ (ಮದ್ದಳೆ ವಾದಕ), ರಮೇಶ್ ಮರೋಳಿ (ಪತ್ರಕರ್ತ 'ಕರ್ನಾಟಕ ಮಲ್ಲ'), ಗೀತಾ ಎಲ್. ಭಟ್ (ಯಕ್ಷಗಾನ ಕಲಾವಿದೆ), ನಾರಾಯಣ ಶೆಟ್ಟಿ ಕುಂಬ್ಳೆ (ಯಕ್ಷಗಾನ ಕಲಾವಿದ), ಜಯಲಕ್ಷ್ಮೀ ದೇವಾಡಿಗ (ಯಕ್ಷಗಾನ ಭಾಗವತೆ), ಸವಿತಾ ಶೆಟ್ಟಿ (ಲೇಖಕಿ), ಸುಜಲಾ ಅಜಿತ್ ಶೆಟ್ಟಿ (ಯಕ್ಷಗಾನ ಕಲಾವಿದೆ), ಭಾಸ್ಕರ್ ಪೂಜಾರಿ ಉಡುಪಿ (ಯಕ್ಷಗಾನ ಕಲಾವಿದ) ಮೊದಲಾದ ವಿವಿಧ ಕ್ಷೇತ್ರದಲ್ಲಿ ಮಹತ್ತರ ಸೇವಾ ನಿರತರಾಗಿರುವ ಗಣ್ಯ ಸಾಧಕರುಗಳಿಗೆ ಅತಿಥಿ ಗಣ್ಯರ ಹಸ್ತದಿಂದ ಶಾಲು ಹೊದಿಸಿ, ಹೂ ಗುಚ್ಛ, ನೆನಪಿನ ಕಾಣಿಕೆ ತಲಾ ಹತ್ತು ಸಾವಿರ ನಗದು ಹಣದೊಂದಿಗೆ ರಜತ ಯಕ್ಷರಕ್ಷಾ ಸಾಧಕ ಪ್ರಶಸ್ತಿಯನ್ನು ನೀಡಿ ಸತ್ಕರಿಸಲಾಯಿತು.

ಅದೇ ರೀತಿ ಗುರುನಾರಾಯಣ ಯಕ್ಷಗಾನ ಮಂಡಳಿ ಸಾಂತಾಕ್ರೂಜ್, ಗೋಕುಲ ಕಲಾವೃಂದ ಬಿ.ಎಸ್.ಕೆ.ಬಿ ಎಸೋಸಿಯೇಶನ್ ಮುಂಬಯಿ, ದುರ್ಗಾಪರಮೇಶ್ವರಿ ಕಲಾಮಿತ್ರ ಯಕ್ಷಗಾನ ಮಂಡಳಿ ಸಾಕಿನಾಕ, ಶ್ರೀ ಶನೀಶ್ವರ ಯಕ್ಷ ಕಲಾವೇದಿಕೆ ಭಾಂಡೂಪ್ ಭಟ್ಟಿಪಾಡ, ಮಣಿಕಂಠ ಯಕ್ಷಕಲಾ ಕೇಂದ್ರ ಮುಂಬಯಿ, ಶ್ರೀ ಸಚ್ಚಿದಾನಂದ ಸರಸ್ವತಿ ಕೃಪಾಪೋಷಿತ ಯಕ್ಷಗಾನ ಮಂಡಳಿ, ಗೀತಾಂಬಿಕಾ ಕೃಪಾಪೋಷಿತ ಯಕ್ಷಗಾನ ಮಂಡಳಿ ಘಾಟ್ಕೋಪರ್ ಮುಂಬಯಿ, ಯಕ್ಷಪ್ರಿಯ ಮೀರಾರೋಡ್, ಶ್ರೀ ಮಹಾವಿಷ್ಣು ಬಂಟ ಯಕ್ಷ ಕಲಾ ವೇದಿಕೆ ಕುರ್ಲಾ ಮುಂಬಯಿ, ಅಜೆಕಾರು ಕಲಾಭಿಮಾನಿ ಬಳಗ ಭಾಂಡೂಪ್ ಘಟಕ, ಜನಪ್ರಿಯ ಯಕ್ಷಗಾನ ಮಂಡಳಿ ಕುರ್ಲಾ, ಅಯ್ಯಪ್ಪ ಯಕ್ಷಕಲಾ ಪ್ರತಿಷ್ಠಾನ ಮುಂಬಯಿ, ನವಚೇತನ ಫೌಂಡೇಶನ್ (ರಿ.) ನಾಸಿಕ್, ವಿಕ್ರೋಲಿ ಕನ್ನಡ ಸಂಘ, ನವೋದಯ ಕನ್ನಡ ಸೇವಾ ಸಂಘ (ರಿ.) ಥಾಣೆ ಈ ಎಲ್ಲಾ ಸಂಘ-ಸಂಸ್ಥೆಗಳಿಗೆ ಯಕ್ಷಗಾನ ಬೆಳವಣಿಗೆಯ ಹಿನ್ನಲೆಯಲ್ಲಿ ರಜತ ಗೌರವಾರ್ಪಣೆಯೊಂದಿಗೆ ಗೌರವಿಸಲಾಯಿತು.


**ಆಶೀರ್ವಚನದ ನುಡಿ:**
ಅಜೆಕಾರು ಬಾಲಕೃಷ್ಣ ಶೆಟ್ಟಿ ಕಳೆದ 25 ವರ್ಷಗಳಿಂದ ಯಕ್ಷಗಾನ ಕಲೆಗೆ ಸಲ್ಲಿಸುತ್ತಾ ಬಂದಿರುವ ಸೇವೆ ಅಪಾರ. ಸಮಾಜದಿಂದ ಏನು ಪಡೆದಿದ್ದೇವೆ ಎನ್ನುವುದಕ್ಕಿಂತ ಸಮಾಜಕ್ಕೆ ನಾವು ಏನು ಕೊಟ್ಟಿದ್ದೇವೆ ಎನ್ನುವಂತದ್ದು ಮುಖ್ಯ. ಈ ನಿಟ್ಟಿನಲ್ಲಿ ಅಜೆಕಾರು ಬಾಲಕೃಷ್ಣ ಶೆಟ್ಟಿ ಅಜೆಕಾರು ಕಲಾಭಿಮಾನಿ ಬಳಗ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ, ಒಂದು ಉತ್ತಮ ವೇದಿಕೆಯನ್ನು ನಿರ್ಮಾಣ ಮಾಡಿ ಅದೆಷ್ಟೋ ಕಲಾವಿದರನ್ನು ಈ ರಂಗಕ್ಕೆ ನೀಡಿದವರಿದ್ದಾರೆ. ಈ ಮುಂಬಯಿ ಮಹಾನಗರದಲ್ಲಿ ಅಜೆಕಾರು ಬಾಲಕೃಷ್ಣ ಶೆಟ್ಟಿಯವರಷ್ಟು ಯಕ್ಷಗಾನ, ತಾಳಮದ್ದಳೆಯ ಕಲಾ ಪ್ರದರ್ಶನವನ್ನು ಆಯೋಜಿಸಿರುವ ಕಲಾವಿದರು ಯಾರೂ ಇಲ್ಲವೆಂದೇ ಹೇಳಬಹುದು. ಅವರ ಈ ಸೇವೆ ನಿರಂತರವಾಗಿರಲಿ ಕಲಾಮಾತೆ ಸರಸ್ವತಿಯ ಮತ್ತು ಶ್ರೀ ಮೂಕಾಂಬಿಕಾ ದೇವಿಯ ಅನುಗ್ರಹ ಅವರೊಂದಿಗೆ ಸದಾ ಇರಲಿ.
**-ಧರ್ಮದರ್ಶಿ ಡಾ. ಅಣ್ಣಿ ಸಿ. ಶೆಟ್ಟಿ (ಅಧ್ಯಕ್ಷ : ಶ್ರೀ ಮೂಕಾಂಬಿಕಾ ದೇವಾಲಯ ಘನ್ಸೋಲಿ)**

ಕಾರ್ಯಕ್ರಮದ ಯಶಸ್ವಿಯ ಹಿಂದೆ ಮಹತ್ತರ ಸೇವೆಯನ್ನು ಸಲ್ಲಿಸಿದವರನ್ನು ಶಾಲು ಹೊದಿಸಿ, ನೆನಪಿನ ಕಾಣಿಕೆಯೊಂದಿಗೆ ಗೌರವಿಸಲಾಯಿತು. ಅಜೆಕಾರು ಕಲಾಭಿಮಾನಿ ಬಳಗ ಮುಂಬಯಿಯ ಸಂಸ್ಥಾಪಕ, ಕಾರ್ಯಕ್ರಮದ ರೂವಾರಿ ಅಜೆಕಾರು ಬಾಲಕೃಷ್ಣ ಶೆಟ್ಟಿ ಅತಿಥಿ ಗಣ್ಯರನ್ನು ಸ್ವಾಗತಿಸಿದರು ಮತ್ತು ಅತಿಥಿ ಗಣ್ಯರನ್ನು ಶಾಲು ಹೊದಿಸಿ, ಹೂ ಗುಚ್ಛ ನೆನಪಿನ ಕಾಣಿಕೆಯೊಂದಿಗೆ ಗೌರವಿಸಿದರು. ಯಕ್ಷಗಾನ ಸಮ್ಮೇಳನ ಸಮಿತಿಯ ಕಾರ್ಯದರ್ಶಿ ಅಶೋಕ್ ಪಕ್ಕಳ, ಹಾಗೇ ಜೊತೆ ಕಾರ್ಯದರ್ಶಿ ಕರ್ನೂರು ಮೋಹನ್ ರೈ, ಉಪ ಸಮಿತಿಯ ಸದಸ್ಯೆ ಅಮೃತಾ ಶೆಟ್ಟಿ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

ಯಕ್ಷರಕ್ಷ ಸಾಧಕ ಪ್ರಶಸ್ತಿ ಪ್ರದಾನ ಸಮಾರಂಭದ ಬಳಿಕ ಯಕ್ಷ ಕಣ್ಮಣಿಗಳನ್ನು ಸ್ಮರಿಸುವ ಸಂಸ್ಮರಣೆ ಕಾರ್ಯಕ್ರಮವು ಜರಗಿತು. ಯಕ್ಷಗಾನ ಕಲಾವಿದ ಹರೀಶ್ ಭಟ್ ಬೊಳಂತಿಮೊಗರು ಸಂಸ್ಮರಣಾ ನುಡಿಯನ್ನು ಮಂಡಿಸಿದರು. ನಂತರ ಯಕ್ಷ ಸಂಜೀವ ಯಕ್ಷಗಾನ ಕೇಂದ್ರ (ರಿ.) ಉಡುಪಿ ಅವರಿಂದ ಬನ್ನಂಜೆ ಸಂಜೀವ ಸುವರ್ಣ ನಿರ್ದೇಶನದಲ್ಲಿ 'ಚಕ್ರವ್ಯೂಹ' ಬಡಗು ತಿಟ್ಟಿನ ಯಕ್ಷಗಾನವು ಪ್ರದರ್ಶಿಸಲ್ಪಟ್ಟಿತು.

ಬೆಳಿಗ್ಗೆ ಉದ್ಘಾಟಿಸಲ್ಪಟ್ಟು ಚಾಲನೆ ಪಡೆದು ಬೆಳಗ್ಗಿನಿಂದ ರಾತ್ರಿವರೆಗೆ ವಿಭಿನ್ನ ಕಾರ್ಯಕ್ರಮದೊಂದಿಗೆ ಜರಗಿದ ಯಕ್ಷಗಾನ ಸಮ್ಮೇಳ -2026 ಈ ವಿಜೃಂಭಣೆಯ ಕಾರ್ಯಕ್ರಮದಲ್ಲಿ ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಊಟ, ಸಂಜೆ ಚಾ-ತಿಂಡಿ, ರಾತ್ರಿಯ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಎಲ್ಲಾ ಕಾರ್ಯಕ್ರಮದ ಯಶಸ್ವಿಯ ಹಿನ್ನಲೆಯಲ್ಲಿ ಅಜೆಕಾರು ಬಾಲಕೃಷ್ಣ ಶೆಟ್ಟಿ ಹಾಗೂ ಯಕ್ಷಗಾನ ಸಮ್ಮೇಳ -2026 ಸಮಿತಿಯ ಪ್ರಧಾನ ಸಲಹೆಗಾರರಾದ ಡಾ. ಎಂ. ಪ್ರಭಾಕರ ಜೋಶಿ, ಪ್ರಧಾನ ಕಾರ್ಯದರ್ಶಿ ಅಶೋಕ ಪಕ್ಕಳ, ಪ್ರಧಾನ ಸಂಚಾಲಕ ಪ್ರೊ. ಭಾಸ್ಕರ ರೈ ಕುಕ್ಕುವಳ್ಳಿ, ಸಂಘಟನಾ ಕಾರ್ಯದರ್ಶಿಗಳಾದ ಕರ್ನೂರು ಮೋಹನ ರೈ ಮತ್ತು ನವೀನ್ ಶೆಟ್ಟಿ ಇನ್ನ ಬಾಳಿಕೆ, ಕಾರ್ಯದರ್ಶಿಗಳಾದ ದೀಪಿತ್ ಎಸ್. ಕೆ. ಪೆರಾಡಿ, ಸತೀಶ್ ಶೆಟ್ಟಿ ಕೊಟ್ರಪ್ಪಾಡಿ, ಸಿ.ಎ. ಸುರೇಂದ್ರ ಶೆಟ್ಟಿ, ರೇಷ್ಮಾ ಶೆಟ್ಟಿ, ಕೋಶಾಧಿಕಾರಿಗಳಾದ ಆಶಾ ಬಿ. ಶೆಟ್ಟಿ, ಅಮೃತಾ ಎ. ಶೆಟ್ಟಿ, ಮೀರಾ ಟಿ. ಶೆಟ್ಟಿ, ಶಾಲಿನಿ ಶೆಟ್ಟಿ, ನಂದಾ ಶೆಟ್ಟಿ, ಕಾರ್ಯಕ್ರಮ ಸಮಿತಿ ಸದಸ್ಯರಾದ ದಯಾಸಾಗರ ಚೌಟ, ಶ್ರುತಿ ಪೂಜಾರಿ, ಆರ್ಥಿಕ ಸಮಿತಿ ಸದಸ್ಯರು, ಸ್ವಾಗತ ಸಮಿತಿ ಸದಸ್ಯರು, ವೇದಿಕೆ ಸಹಾಯಕ ಸಮಿತಿ ಸದಸ್ಯರು, ಅತಿಥಿ ಸತ್ಕಾರ ಸಮಿತಿ ಸದಸ್ಯರು, ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದು ಶ್ರಮಿಸಿದ್ದರು.

# ಸಿರಿನಾಡ ವೆಲ್ಫೇರ್ ಎಸೋಸಿಯೇಶನ್‌ನ 24ನೇ ವಾರ್ಷಿಕ ಮಹಾಸಭೆ : ಸಮಾಜಪರ ಕಾರ್ಯಕ್ರಮಗಳೊಂದಿಗೆ ರಜತ ಮಹೋತ್ಸವವನ್ನು ಆಚರಿಸೋಣ - ಆರ್. ಕೆ. ಸುವರ್ಣ




ಡೊಂಬಿವಲಿ, ಅ. 4– ಕಳೆದ 24 ವರ್ಷಗಳಿಂದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಮನೆ ಮಾತಾಗಿರುವ ಸಿರಿನಾಡ ಸಂಘವು ರಜತ ಮಹೋತ್ಸವದ ಹೊಸ್ತಿಲಲ್ಲಿ ನಿಂತಿದೆ ಎನ್ನಲು ಹೆಮ್ಮೆಯಾಗುತ್ತಿದೆ. ಬೆರಳೆಣಿಕೆಯ ಸದಸ್ಯರಿಂದ ಪ್ರಾರಂಭವಾಗಿರುವ ಈ ಸಂಸ್ಥೆಯು ಬಹುಸಂಖ್ಯಾ ಸದಸ್ಯರನ್ನು ಹೊಂದಿದ್ದು, ಸದಸ್ಯರ, ಪದಾಧಿಕಾರಿಗಳ, ಕಾರ್ಯಕಾರಿ ಸಮಿತಿಯ ಸದಸ್ಯರ, ಸಲಹೆಗಾರರ, ಕೊಡುಗೈ ದಾನಿಗಳ ಸಹಕಾರದಿಂದ ಸಂಘವು ಸಮಾಜಪರ ಕಾರ್ಯಗಳನ್ನು ನಡೆಸಲು ಸಾಧ್ಯವಾಯಿತು. ಸಂಘದ ಉಪ ವಿಭಾಗಗಳಾದ ಮಹಿಳಾ ವಿಭಾಗ, ಯುವ ವಿಭಾಗಗಳು ಪ್ರಧಾನ ಸಮಿತಿಗೆ ಬೆನ್ನೆಲುಬಾಗಿ ನಿಂತಿದೆ. ಉಪ ವಿಭಾಗಗಳ ಕಾರ್ಯವೈಖರಿ ಪ್ರಶಂಶನೀಯ. ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯವಾದ ಸಮಯವನ್ನು ವಿನಿಯೋಗಿಸಿದ ಸದಸ್ಯ ಬಾಂಧವರಿಗೆ ಕೃತಜ್ಞತೆಗಳು. ಮೊದಲು ನೀಡಿದ ಸಹಕಾರದಂತೆ ರಜತ ಮಹೋತ್ಸವದ ಆಚರಣೆಯ ಸಂದರ್ಭದಲ್ಲೂ ಸಹಕರಿಸಬೇಕು. ಮಹೋತ್ಸವವನ್ನು ತಮ್ಮೆಲ್ಲರ ಸಹಕಾರದಿಂದ ಸಮಾಜಪರ ಕಾರ್ಯಕ್ರಮಗಳೊಂದಿಗೆ ಆಚರಿಸೋಣ ಎಂದು ಸಿರಿನಾಡ ವೆಲ್ಫೇರ್ ಎಸೋಸಿಯೇಶನ್‌ನ ಅಧ್ಯಕ್ಷ ಆರ್. ಕೆ. ಸುವರ್ಣ ನುಡಿದರು.

ಅವರು ಸಂಘದ 24ನೇ ವಾರ್ಷಿಕ ಮಹಾಸಭೆಯ ಸಭಾ ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ವಾರ್ಷಿಕ ಮಹಾಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರ ಸಮ್ಮುಖದಲ್ಲಿ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಅಜೆಕಾರು ಜಯ ಶೆಟ್ಟಿ, ಸಲಹೆಗಾರರಾದ ಡಾ. ಇಂದ್ರಾಳಿ ದಿವಾಕರ ಶೆಟ್ಟಿಯವರನ್ನು ರಜತ ಮಹೋತ್ಸವದ ಕಾರ್ಯಾಧ್ಯಕ್ಷರನ್ನಾಗಿ ಮಾಡಿದ ಆಯ್ಕೆಯನ್ನು ಪ್ರಕಟಿಸಿದರು. ಉಪಾಧ್ಯಕ್ಷರನ್ನಾಗಿ ರಾಜೀವ ಭಂಡಾರಿ, ವಸಂತ ಸುವರ್ಣ ಅವರನ್ನು ಆಯ್ಕೆ ಮಾಡಲಾಯಿತು.

ಕಾರ್ಯಾಧ್ಯಕ್ಷರಾಗಿ ಆಯ್ಕೆಯಾದ ಡಾ. ಇಂದ್ರಾಳಿ ದಿವಾಕರ ಶೆಟ್ಟಿ ಮಾತನಾಡಿ, ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬೇಕೆಂಬ ಉದ್ದೇಶದಿಂದ ಪ್ರಾರಂಭವಾದ ಈ ಸಂಸ್ಥೆಯು ಉದ್ದೇಶದಂತೆ ಹಲವಾರು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದೆ. ಕಳೆದ 24 ವರ್ಷಗಳಿಂದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಆರ್. ಕೆ. ಸುವರ್ಣರ ಕಾರ್ಯವೈಖರಿ ಪ್ರಶಂಶನೀಯ. ಹಾಗೆಯೇ ಅವರಿಗೆ ಬೆಂಗಾವಲಾಗಿ ಕಾರ್ಯ ನಿರ್ವಹಿಸುತ್ತಿರುವ ಪದಾಧಿಕಾರಿಗಳು ಹಲವಾರು ವರ್ಷಗಳಿಂದ ತಮ್ಮ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಘದಲ್ಲಿ ಪದವಿ ಮುಖ್ಯವಲ್ಲ ಕೆಲಸ ಮುಖ್ಯ. ಉದರ ಪೋಷಣೆಗಾಗಿ ಜನ್ಮ ಭೂಮಿಯನ್ನು ತೊರೆದು ಈ ಮಾಯನಗರಿಯನ್ನು ಕರ್ಮಭೂಮಿಯನ್ನಾಗಿರಿಸಿದ ನಾವು ಸಂಘಟಿತರಾಗಿ ವಿವಿಧ ಸಂಘ-ಸಂಸ್ಥೆಗಳ ಮುಖೇನ ಸಮಾಜ ಸೇವೆಗೈಯುತ್ತಿದ್ದೇವೆ. ಹುಟ್ಟು-ಸಾವಿನ ನಡುವೆ ಏನಾದರೂ ಸಾಧಿಸಿದರೆ ಅದು ಅಚ್ಚಳಿಯದೆ ಉಳಿಯುತ್ತದೆ. ಅಚ್ಚಳಿಯದೆ ಉಳಿಯುವ ಕಾರ್ಯ ನಮ್ಮದಾಗಬೇಕು. ರಜತ ಮಹೋತ್ಸವದ ಸರಣಿ ಕಾರ್ಯಕ್ರಮಗಳು ನಡೆಯುತ್ತಿದ್ದು ಇನ್ನಷ್ಟು ಸಮಾಜಪರ ಕಾರ್ಯಕ್ರಮಗಳು ಜರಗಬೇಕಿದೆ. ಅದಕ್ಕಾಗಿ ರೂಪು-ರೇಷೆಗಳನ್ನು ತಯಾರಿಸೋಣ ಎಂದರು.

ರಜತ ಮಹೋತ್ಸವದ ಉಪಾಧ್ಯಕ್ಷರಾಗಿ ಆಯ್ಕೆಯಾದ ರಾಜೀವ ಭಂಡಾರಿ ಮಾತನಾಡಿ, ನೀವು ಮಾಡುವ ಸಮಾಜಪರ ಕಾರ್ಯಗಳಿಗೆ ನನ್ನ ಸದಾ ಬೆಂಬಲವಿದೆ. ಸದಸ್ಯರೆಲ್ಲರು ಒಮ್ಮತದಿಂದ ಕಾರ್ಯ ನಿರ್ವಹಿಸಿದರೆ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ. ರಜತ ಮಹೋತ್ಸವವನ್ನು ಸಂಘಟಿತರಾಗಿ ವಿಜೃಂಭಣೆಯಿಂದ ಆಚರಿಸೋಣ ಎಂದರು.

ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಉದಯ ಶೆಟ್ಟಿ ಮಾತನಾಡಿ, ಮಹಿಳಾ ವಿಭಾಗವು ತಮ್ಮ ಜವಾಬ್ದಾರಿಯನ್ನು ಯೋಗ್ಯವಾಗಿ ನಿರ್ವಹಿಸುತ್ತಿದ್ದು ಎಲ್ಲರ ಸಹಕಾರದಿಂದ 'ಆಟಿಡೊಂಜಿ ದಿನ'ವನ್ನು ಆಚರಿಸಿದ್ದೇವೆ. ಇನ್ನೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಪ್ರಧಾನ ಸಮಿತಿ ಹಾಗೂ ಸಲಹೆಗಾರರ ಸಲಹೆ ಸೂಚನೆಯ ಮೇರೆಗೆ ಒಳ್ಳೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ರಜತ ಮಹೋತ್ಸವವನ್ನು ಒಗ್ಗಟ್ಟಿನಿಂದ ಯಶಸ್ವಿಗೊಳಿಸೋಣ ಎಂದರು.

ವಾರ್ಷಿಕ ಮಹಾಸಭೆಯ ಸಭಾ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಡೊಂಬಿವಲಿ ಪಶ್ಚಿಮದ ಬ್ಯಾಂಕ್ವೆಟ್ ಸಭಾಗೃಹದಲ್ಲಿ ತುಳುವೆರೆ ಕಲಾ ಮಂಗಳೂರು (ರಿ.) ಇದರ ಮುಂಬಯಿ ವಲಯದ ಕಾರ್ಯಾಧ್ಯಕ್ಷೆ ನಮ್ಮ ಸಂಸ್ಥೆಯ ಮಹಿಳಾ ವಿಭಾಗದ ಕಾರ್ಯದರ್ಶಿ ಪ್ರಫುಲ್ಲಾ ಡಿ. ಶೆಟ್ಟಿ ಇತ್ತೀಚೆಗೆ ಊರಿನಲ್ಲಿರುವ ತಮ್ಮ ಬಳಗದ 23 ಮಂದಿ ಕವಿಗಳನ್ನು ಮುಂಬಯಿಗೆ ಬರಮಾಡಿಸಿ ಇಲ್ಲಿಯ ಒಂದಿಷ್ಟು ತುಳು ಭಾಷೆಯ ಕವಿಗಳನ್ನು ಒಟ್ಟುಗೂಡಿಸಿ 40 ಕವಿಗಳ ಸಮಾಗಮದಲ್ಲಿ ಅದ್ದೂರಿಯ ತುಳು ಕಲಾತೋಚ್ಚಯ ಕಾರ್ಯಕ್ರಮವನ್ನು ನಡೆಸಿದರು. ತುಳುವಿನಲ್ಲಿ ಬರೆದ 'ಪೊಲ್ಲಕ್ಕನ ಅಜಕೆ' ಪುಸ್ತಕವನ್ನು ಬಿಡುಗಡೆಗೊಳಿಸಿದ ಸಾಧನೆಯನ್ನರಿತು ಅಧ್ಯಕ್ಷರು, ಪದಾಧಿಕಾರಿಗಳು, ಸಲಹೆಗಾರರು ಸದಸ್ಯರ ಸಮ್ಮುಖದಲ್ಲಿ ಗೌರವಿಸಲಾಯಿತು.

ಸಿರಿನಾಡ ವೆಲ್ಫೇರ್ ಎಸೋಸಿಯೇಶನ್‌ನ ವಾರ್ಷಿಕ ಮಹಾಸಭೆಯು ಸೆ. 27ರ ಆದಿತ್ಯವಾರದಂದು ಡೊಂಬಿವಲಿ ಪಶ್ಚಿಮದ ಕ್ಷಿತಿಜ ಮತಿಮಂದ ಶಾಲೆಯಲ್ಲಿ ಬೆಳಿಗ್ಗೆ ನಡೆಯಿತು. ವೇದಿಕೆಯಲ್ಲಿ ಉಪಸ್ಥಿತರಿದ್ದ ಪದಾಧಿಕಾರಿಗಳು ದೀಪ ಪ್ರಜ್ವಲನೆ ಹಾಗೂ ಜಯಶೀಲ ಶೆಟ್ಟಿ, ಸುನೀತಾ ಪಾಲನ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸಂಘದ ಉಪಾಧ್ಯಕ್ಷ ಅಶೋಕ್ ಅಮೀನ್ ಸ್ವಾಗತಿಸಿದರು. ಸಂಘದ ಗೌರವ ಪ್ರಧಾನ ಕಾರ್ಯಜರ್ಶಿ ಅಜೆಕಾರು ಜಯ ಶೆಟ್ಟಿ ಗತವರ್ಷದ ವಾರ್ಷಿಕ ಮಹಾಸಭೆಯ ವರದಿಯನ್ನು ಓದಿದರು. ವರದಿಯನ್ನು ರಾಜೆಂದ್ರ ಶೆಟ್ಟಿಯವರ ಸೂಚನೆ ವಿಠಲ ಶೆಟ್ಟಿಯವರ ಅನುಮೋದನೆಯ ಮೇರೆಗೆ ಮಂಜೂರು ಮಾಡಲಾಯಿತು.

ಕೋಶಾಧಿಕಾರಿ ಸದಾಶಿವ ಸಾಲ್ಯಾನ್ 2025-2026ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರವನ್ನು ಸಭೆಯಲ್ಲಿ ಮಂಡಿಸಿದರು. ಲೆಕ್ಕ ಪತ್ರವನ್ನು ಸದಾನಂದ ಆಚಾರ್ಯರ ಸೂಚನೆ, ಕುಟ್ಟಿ ಶೆಟ್ಟಿಯವರ ಅನುಮೋದನೆಯ ಮೇರೆಗೆ ಅಂಗೀಕರಿಸಲಾಯಿತು. ಲೆಕ್ಕ ಪರಿಶೋಧಕರನ್ನಾಗಿ ನವೀನ್ ದೇಡಿಯಾ ಆ್ಯಂಡ್ ಕಂಪೆನಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಆಂತರಿಕ ಲೆಕ್ಕ ಪರಿಶೋಧಕರನ್ನಾಗಿ ವಿಠ್ಠಲ್ ಅಮೀನ್‌ರವರನ್ನು ಪ್ರಫುಲ್ಲಾ ಶೆಟ್ಟಿಯವರ ಸೂಚನೆಯ ಮೇರೆಗೆ ಆಯ್ಕೆ ಮಾಡಲಾಯಿತು.

ರಜತ ಮಹೋತ್ಸವದ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾದ ಡಾ. ಇಂದ್ರಾಳಿ ದಿವಾಕರ ಶೆಟ್ಟಿ, ಉಪಾಧ್ಯಕ್ಷರಾಗಿ ಆಯ್ಕೆಯಾದ ರಾಜೀವ ಭಂಡಾರಿಯವರನ್ನು ಪುಷ್ಪ ಗೌರವದೊಂದಿಗೆ ಗೌರವಿಸಲಾಯಿತು. ಆಂತರಿಕ ಲೆಕ್ಕ ಪರಿಶೋಧಕರಾಗಿ ಆಯ್ಕೆಯಾದ ವಿಠ್ಠಲ್ ಅಮೀನ್‌ರವರ ಅನುಪಸ್ಥಿತಿಯಲ್ಲಿ ಅವರ ಪತ್ನಿ ಸುಜಾತಾ ಅಮೀನ್‌ರವರನ್ನು ಗೌರವಿಸಲಾಯಿತು.

ಸಭಿಕರ ಪರವಾಗಿ ರಾಜೆಂದ್ರ ಶೆಟ್ಟಿ, ಉದಯಾನಂದ ಕರುಣಾಕರ್, ಪ್ರಫುಲ್ಲಾ ಶೆಟ್ಟಿ ಸಂದರ್ಭೋಚಿತವಾಗಿ ಮಾತನಾಡಿ, ರಜತ ಮಹೋತ್ಸವಕ್ಕೆ ಶುಭ ಕೋರಿದರು. ವೇದಿಕೆಯಲ್ಲಿ ಉಪಾಧ್ಯಕ್ಷ ಅಶೋಕ್ ಅಮೀನ್, ಗೌರವ ಪ್ರಧಾನ ಕಾರ್ಯದರ್ಶಿ ಅಜೆಕಾರು ಜಯ ಶೆಟ್ಟಿ, ಕೋಶಾಧಿಕಾರಿ ಸದಾಶಿವ ಸಾಲ್ಯಾನ್, ಜೊತೆ ಕೋಶಾಧಿಕಾರಿ ಕೆ. ಕೆ. ಸಾಲ್ಯಾನ್, ಯುವ ವಿಭಾಗದ ಉಪಾಧ್ಯಕ್ಷ ಗುರುರಾಜ್ ಸುವರ್ಣ ಉಪಸ್ಥಿತರಿದ್ದರು. ಇತ್ತೀಚೆಗೆ ನಿಧನರಾದ ಯಶೋಧಾ ಕೋಟ್ಯಾನ್, ಜಯ ಹಂಡ, ಯಜ್ಞೇಶ್ ಶೆಟ್ಟಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಭಾ ಕಾರ್ಯಕ್ರಮದ ನಿರೂಪಣೆಯನ್ನು ವಿನೋದ್ ಕರ್ಕೇರ ನಿರ್ವಹಿಸಿದರೆ, ಅಜೆಕಾರು ಜಯ ಶೆಟ್ಟಿ ವಂದಿಸಿದರು.

Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane,Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Printed here and published at 215, Narayan Udyog Bhavan, Industrial Estate, Dr. Babasaheb Ambedkar Road, Punyanagarikar Murlidhar alias Baba Shingote Chowk, Lalbaug, Mumbai–400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com

# 3ನೇ ಏಕದಿನ : ಹೋಪ್ ಶತಕದಾಟ ; ವಿಂಡೀಸ್ ಎದುರು ಸೋತರೂ ಸರಣಿ ಗೆದ್ದ ಭಾರತ




ಮುಲ್ಲಾನ್‌ಪುರ , ಅ.4 - ಕೆ ಎಲ್ ರಾಹುಲ್ ಶತಕದ ಹೊರತಾಗಿಯೂ ಶಾಯ್ ಹೋಪ್ ಅವರ ಭರ್ಜರಿ ಶತಕದ ಬಲದಿಂದ ವೆಸ್ಟ್ ಇಂಡೀಸ್ ತಂಡ, ಮೂರನೇ ಹಾಗೂ ಏಕದಿನ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತದ ಎದುರು 5 ವಿಕೆಟ್‌ಗಳ ಗೆಲುವು ಪಡೆಯಿತು. ಆ ಮೂಲಕ ಆರಂಭಿಕ ಎರಡು ಪಂದ್ಯಗಳಲ್ಲಿ ಸೋಲು ಅನುಭವಿಸಿದ್ದ ವಿಂಡೀಸ್‌ಗೆ ಕೊನೆಯ ಪಂದ್ಯದ ಗೆಲುವು ಸಮಾಧಾನ ತಂದಿತು. ಆದರೆ, ಕೊನೆಯವರೆಗೂ ಕಠಿಣ ಹೋರಾಟ ನಡೆಸಿದ್ದ ಭಾರತ ಅಂತಿಮವಾಗಿ ಸೋಲು ಒಪ್ಪಿಕೊಳ್ಳಬೇಕಾಯಿತು. ಆದರೂ ಆರಂಭಿಕ ಎರಡು ಪಂದ್ಯಗಳ ಗೆಲುವಿನ ಆಧಾರ ಮೇಲೆ ಟೀಮ್ ಇಂಡಿಯಾ ಏಕದಿನ ಸರಣಿಯನ್ನು 2-0 ಅಂತರದಲ್ಲಿ ಗೆದ್ದುಕೊಂಡಿತು. ಶನಿವಾರ ಇಲ್ಲಿನ ಮಹಾರಾಜ ಯದವೀಂದ್ರ ಸಿಂಗ್ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಭಾರತ ನೀಡಿದ್ದ 352 ರನ್‌ಗಳ ಗುರಿಯನ್ನು ಹಿಂಬಾಲಿಸಿದ ವೆಸ್ಟ್ ಇಂಡೀಸ್ ತಂಡ, ನಾಯಕ ಶಾಯ್ ಹೋಪ್ ಅವರ ಶತಕದ ಬಲದಿಂದ, 48.2 ಓವರ್‌ಗಳಿಗೆ 5 ವಿಕೆಟ್‌ಗಳ ನಷ್ಟಕ್ಕೆ 352 ರನ್ ಗಳಿಸಿ ಗೆಲುವಿನ ದಡ ಸೇರಿತು. ಹೋಪ್ ಶತಕದ ಜೊತೆಗೆ ಆಮಿರ್ ಜಂಗೋ 67 ರನ್ ಹಾಗೂ ಕಿಮೋ ಪಾಲ್ 44 ರನ್‌ಗಳ ಕೊಡುಗೆಯನ್ನು ನೀಡಿದರು.

**ಹೋಪ್ ಭರ್ಜರಿ ಶತಕ :** ಇನಿಂಗ್ಸ್ ಆರಂಭಿಸಿದ ಶಾಯ್ ಹೋಪ್ ಕೊನೆಯವರೆಗೂ ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಮಾಡಿದರು. ಇನಿಂಗ್ಸ್‌ನ ಉದ್ದಕ್ಕೂ 143 ಎಸೆತಗಳಲ್ಲಿ ಅಜೇಯ 162 ರನ್‌ಗಳನ್ನು ಕಲೆ ಹಾಕಿ, ವಿಂಡೀಸ್ ತಂಡವನ್ನು ಗೆಲುವಿನ ದಡ ಸೇರಿಸಿದರು. ಅವರ ಮ್ಯಾಚ್ ವಿನ್ನಿಂಗ್ ಇನಿಂಗ್ಸ್‌ನಲ್ಲಿ ಮೂರು ಸಿಕ್ಸರ್ ಹಾಗೂ 17 ಬೌಂಡರಿಗಳು ಸೇರಿವೆ. ಕಳೆದ ಪಂದ್ಯದಲ್ಲಿಯೂ ಶತಕ ಸಿಡಿಸಿದ್ದ ಹೋಪ್, ಇದೀಗ ಈ ಪಂದ್ಯದಲ್ಲಿಯೂ ಶತಕ ಸಿಡಿಸಿ ವಿಂಡೀಸ್ ಗೆಲುವಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು.

ಭಾರತ ತಂಡದ ಬೌಲರ್‌ಗಳು ಪ್ರಮುಖ ಬ್ಯಾಟ್ಸ್‌ಮನ್ ಹಂತ ಹಂತವಾಗಿ ಕಟ್ಟಿ ಹಾಕಿದರೂ ಹೋಪ್ ಅವರನ್ನು ಔಟ್ ಮಾಡಲು ಸಾಧ್ಯವಾಗಲಿಲ್ಲ. ಒಂದು ವೇಳೆ ಹೋಪ್ ಅವರನ್ನು ಔಟ್ ಮಾಡಿದ್ದರೆ, ಪಂದ್ಯದ ಫಲಿತಾಂಶ ವಿಭಿನ್ನವಾಗಿರುತ್ತಿತ್ತು. ಭಾರತ ಪರ ಸಿರಾಜ್ , ಗುರ್ನೂರ್‌ಬ್ರಾರ್, ಕುಲದೀಪ್ ಮತ್ತು ನಮನ್ ಧೀರ್‌ತಲಾ ಒಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಿಸಿಕೊಂಡ ಭಾರತ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಇನ್ ಫಾರ್ಮ್ ಬ್ಯಾಟರ್ ನಾಯಕ ಶುಭಮನ್ ಗಿಲ್(1) ಹಾಗೂ ವಿರಾಟ್ ಕೊಹ್ಲಿ(0) ಅವರನ್ನು ಜೇಡನ್ ಸೀಲ್ಸ್ ಅವರು ಮೂರನೇ ಓವರ್‌ನಲ್ಲಿ 3 ಮತ್ತು 4 ನೇ ಎಸೆತಗಳಲ್ಲಿ ಔಟ್ ಮಾಡಿದ್ದರು. ಆ ಮೂಲಕ ಭಾರತ ತಂಡಕ್ಕೆ ಸೀಲ್ಸ್ ಆರಂಭಿಕ ಆಘಾತವನ್ನು ನೀಡಿದ್ದರು. ಆದರೆ, ರೋಹಿತ್ ಶರ್ಮಾ ಹಾಗೂ ಋತುರಾಜ್ ಗಾಯಕ್ವಾಡ್ ಮೂರನೇ ವಿಕೆಟ್‌ಗೆ 137 ರನ್‌ಗಳ ಜೊತೆಯಾಟವನ್ನು ಆಡಿ ತಂಡವನ್ನು ಅಪಾಯದಿಂದ ಪಾರು ಮಾಡಿದರು.

**ರೋಹಿತ್ ಶರ್ಮಾ ಭರ್ಜರಿ ಬ್ಯಾಟಿಂಗ್**

ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ರೋಹಿತ್ ಶರ್ಮಾ ಈ ಪಂದ್ಯದಲ್ಲಿಯೂ ಉತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರು. ಅವರು ಆಡಿದ 85 ಎಸೆತಗಳಲ್ಲಿ ಮೂರು ಸಿಕ್ಸರ್ ಹಾಗೂ 10 ಬೌಂಡರಿಗಳೊಂದಿಗೆ 92 ರನ್ ಗಳಿಸಿದರು. ಆ ಮೂಲಕ ಶತಕದಂಚಿನಲ್ಲಿದ್ದರು. ಅವರು ಶತಕ ಸಿಡಿಸುವುದು ಬಹುತೇಕ ಖಚಿತ ಎಂದೇ ಭಾವಿಸಲಾಗಿತ್ತು. ಆದರೆ, ಅವರನ್ನು ಕಿಮೋ ಪಾಲ್ 25ನೇ ಓವರ್‌ನಲ್ಲಿ ಔಟ್ ಮಾಡಿದರು. ಕೇವಲ 8 ರನ್‌ನಿಂದ ಶತಕ ವಂಚಿತರಾಗಿ ರೋಹಿತ್ ಪೆವಿಲಿಯನ್‌ಗೆ ಮರಳಿದರು.

**ಗಾಯಕ್ವಾಡ್ ಅರ್ಧಶತಕ..** ಮಧ್ಯಮ ಕ್ರಮಾಂಕದಲ್ಲಿ ದೀರ್ಘಾವಧಿ ಬ್ಯಾಟ್ ಮಾಡಿದ ಋತುರಾಜ್ ಗಾಯಕ್ವಾಡ್ ಅವರು ಕೂಡ ಅರ್ಧಶತಕವನ್ನು ಗಳಿಸಿದರು. ಅವರು ಆಡಿದ 69 ಎಸೆತಗಳಲ್ಲಿ 57 ರನ್‌ಗಳನ್ನು ಕಲೆ ಹಾಕಿದರು. ಗಾಯಕ್ವಾಡ್ ಔಟ್ ಆದ ಬಳಿಕ ನಮನ್ ಧೀರ್ 21 ಎಸೆತಗಳಲ್ಲಿ 30 ರನ್ ಗಳಿಸಿ ಔಟ್ ಆದರು. ನಿತೀಶ್ ರೆಡ್ಡಿ ಕೇವಲ 9 ರನ್‌ಗೆ ವಿಕೆಟ್ ಒಪ್ಪಿಸಿದರು.

**ಕೆಎಲ್ ರಾಹುಲ್ 9ನೇ ಶತಕ:** ಕಳೆದ ಎರಡು ಪಂದ್ಯಗಳಲ್ಲಿ ಬ್ಯಾಟಿಂಗ್‌ಗೆ ಅವಕಾಶ ಕಳೆದುಕೊಂಡಿದ್ದ ಕನ್ನಡಿಗ ಕೆಎಲ್ ರಾಹುಲ್, ಮೂರನೇ ಪಂದ್ಯದಲ್ಲಿ ಸಿಕ್ಕ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡರು. ಅವರು ಕೊನೆಯವರೆಗೂ ಒಂದು ಕಡೆ ಗಟ್ಟಿಯಾಗಿ ನಿಂತು ಬ್ಯಾಟ್ ಮಾಡಿದರು. ಅವರು ಆಡಿದ 87 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 10 ಬೌಂಡರಿಗಳೊಂದಿಗೆ ಅಜೇಯ 129 ರನ್‌ಗಳನ್ನು ಗಳಿಸಿದರು.


DANTAVALI® GUM MASSAGE POWDER

ಮಹಾರಾಷ್ಟ್ರದಲ್ಲಿ ದಂತಾವಲಿಯ ಉತ್ತಮ ನೆಟ್‌ವರ್ಕ್!
ಈಗ ನಿಮ್ಮ ಊರಲ್ಲೂ ಲಭ್ಯ ಮತ್ತು ನಿಮ್ಮ ಸಮೀಪ ಕೂಡಾ




ತಂಬಾಕಿನ ಕಾರಣ ಬಾಯಿಯ ಸಮಸ್ಯೆಯೇ?

ಬಾಯಿಯು ಸಂಪೂರ್ಣ ತೆರೆಯಲು ಸಹಾಯ ಮಾಡುತ್ತದೆ
ಬಾಯಿಯ ದುರ್ಗಂಧ ದೂರ ಮಾಡಲು ಸಹಾಯ ಮಾಡುತ್ತದೆ
ಹಲ್ಲು ನೋವು ಕಡಿಮೆ ಮಾಡಲು ಸಹಾಯ ಮಾಡುತ್ತದೆ
ದುರ್ಬಲ ವಸಡುಗಳನ್ನು ಗಟ್ಟಿ ಮಾಡಲು ಸಹಾಯ ಮಾಡುತ್ತದೆ

ಮಹಾರಾಷ್ಟ್ರದಲ್ಲಿ ಅಧಿಕೃತ ಸ್ಟಾಕಿಸ್ಟ್

NSD Enterprise 9833449448
Unjha Trading Co. 9823795251
Gautam Labdhi Marketing 9819276743
STL Pharma Pvt. Ltd. 9819926626
Bharat Agency 9869472807

ಭಾರತದಲ್ಲಿ ವಿಶ್ವಾಸಾರ್ಹ ಆಯುರ್ವೇದ ಉತ್ಪಾದನಗಳೊಂದಿಗೆ ಬಲವಾದ ಮಾರಾಟ ಜಾಲ.
ನಿಮ್ಮ ಪ್ರದೇಶದಲ್ಲಿ DANTAVALI ಲಭ್ಯತೆಗಾಗಿ ನಮ್ಮನ್ನು ಸಂಪರ್ಕಿಸಿರಿ.

POWERED BY AGARWAL GROUP
OWNED BY PAGE PRASHANT AGARWAL GROUP OF ENTERPRISES
ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿರಿ
ಸ್ಟಾಕಿಸ್ಟ್ ಆಗಲು ಸಂಪರ್ಕಿಸಿರಿ
MP & CG 77010 10250
MH 77010 10249
GJ 77010 10248
RJ & Others 77010 10247


## 33ನೇ ಪುಣ್ಯಸ್ಮರಣೆ



ಲಿಂಗೈಕ್ಯ: 05.10.1993

**ದಿ. ಸಾವಿತ್ರಿದೇವಿ ಬಸಪ್ಪ ಹೆಬ್ಬಳ್ಳಿ**

ನಯ, ವಿನಯ, ಸದ್ಗುಣಗಳ ಸಾಕಾರಮೂರ್ತಿಯಾಗಿದ್ದು, ಎಲ್ಲರೊಳಗೊಂದಾಗಿ ಬದುಕನ್ನು ಶ್ರೀಗಂಧದ ಪರಿಮಳವನ್ನು ಬೀರಿ ಇದೀಗ ನಮ್ಮೊಂದಿಗೆ ಇಲ್ಲವಾಗಿ ವರ್ಷ 33 ಕಳೆದರೂ, ನಿಮ್ಮನ್ನು ಕ್ಷಣ ಕ್ಷಣ ನೆನಪಿಸುತ್ತಾ, ನಮ್ಮನ್ನಗಲಿದ ನಿಮ್ಮ ದಿವ್ಯ ಚೇತನಕ್ಕೆ ಶ್ರೀ ಮಂಜುನಾಥ ಸ್ವಾಮಿಯು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,

**ಶ್ರೀ ರಾಮುಶೇಠ್ ಬಿ. ಹೆಬ್ಬಳ್ಳಿ, ಮಕ್ಕಳು ಮತ್ತು ಪರಿವಾರ**

M.S. Builders, Dombivli
Sharada Manjunatha Builders, Ambernath
Smt. Savitridevi Basappa Hebballi
Marathi Vidyalaya, Dombivli (W)
Shri Basav Seva Mandal, Dombivli
Veershaiv Lingayat Samaj, Ambernath

## 1st Year Remembrance



Birth: 15-06-1943

Death : 05-10-2025

**Mundkur Angadiguthu Melmane**

**Smt. Prema Bhoja Shetty (Maiyu)**

(W/o Nandikoor Adve Late Shri Bhoja A. Shetty)
(D/o Late Shri Gudda Shetty and Late Smt. Devaki Shetty (Chikki)
*13, Great Western Bldg, Opp. Lion Gate, Fort, Mumbai*

ಜೀವನದ ಮೌಲ್ಯಗಳಿಗೆ ಬದ್ಧರಾಗಿ, ಎಲ್ಲರ ಪ್ರೀತಿ ಗೌರವಕ್ಕೆ ಪಾತ್ರರಾಗಿ, ಕುಟುಂಬ ಸಂಸಾರಕ್ಕೆ ಆಧಾರಸ್ಥಂಭವಾಗಿದ್ದು, ಸಹೃದಯತೆಯ ಬಾಳನ್ನು ಬಾಳಿ ನಮ್ಮನ್ನಗಲಿ ಇಂದಿಗೆ ವರುಷ ಒಂದು ಕಳೆದಿದೆ. ನಿಮ್ಮ ದಿವ್ಯಾತ್ಮದ ಚಿರಶಾಂತಿಗಾಗಿ ಪರಮಾತ್ಮನಲ್ಲಿ ಪ್ರಾರ್ಥಿಸುತ್ತಾ ಸದಾ ಸ್ಮರಿಸುತ್ತಿರುವೆವು.

You have always been our source of inspiration and guidance.
Your presence will always remain in our hearts and thoughts.
May your departed soul rest in peace.

Deeply Missed & Fondly Remembered By :

Shri Shailesh B. Shetty (Son)
Smt. Sujatha S. Shetty (Daughter-in-law)
Shri Sandesh B. Shetty (Son)
Smt. Sharmila S. Shetty (Daughter-in-law)
Smt. Prasanna S. Shetty (Daughter)
Shri Shankar N. Shetty (Son-in-law)
Nityan, Diya, Krishni (Grandchildren)
Relatives & Friends

## ಪ್ರಥಮ ಪುಣ್ಯಸ್ಮರಣೆ



**Smt. Sudha Kishore Shetty**

(Attur Kemral Kojapdy Balike)
(Anand Nagar, Dahisar East)

ಜನನ: 18/01/1969 ನಿಧನ : 05/10/2025

ಸಂಸಾರಕ್ಕೆ ಬೆಳಕಾಗಿ, ಮಾರ್ಗದರ್ಶಕರಾಗಿ, ಸರಳ-ಸಾತ್ವಿಕ ಜೀವನ ನಡೆಸಿ, ನಮಗೆಲ್ಲಾ ಧನ್ಯತೆಯ ಬಾಳನ್ನು ಕರುಣಿಸಿ, ತಾವು ಭಗವಂತನ ಪಾದ ಸೇರಿ ವರುಷ ಒಂದು ಸಂದರೂ ನಿಮ್ಮನ್ನು ಸದಾ ಸ್ಮರಿಸುವ,

Mr. Kishore Shetty (Husband)
Mr. Akshay K. Shetty (Son)
Mrs. Swechha A. Shetty (Daughter-in-law)
And Relatives

## Heartfelt Condolences



Born : 19.01.1947

Death : 26.09.2026

**Shri Barkur Dharmaraj Shetty (B. D. Shetty)**

(Doyen of Chemical Industries)

ಆದರ್ಶ, ವಾತ್ಸಲ್ಯ, ಪರೋಪಕಾರ,ದಯಾಪರತೆ, ಮಾನವೀಯತೆ ಮತ್ತು ಶ್ರೇಷ್ಠ ಜೀವನ ಮೌಲ್ಯಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡ ತಾವು, ಸರಳ ಸಜ್ಜನಿಕೆ, ಉದಾತ್ತ, ಮಾನವೀಯ ಗುಣ, ಕರ್ತವ್ಯನಿಷ್ಠೆ, ಶ್ರೇಷ್ಠ ಸಂಸ್ಕಾರ ಸಂಸ್ಕೃತಿಯನ್ನು ಮೈಗೂಡಿಸಿಗೊಂಡು ಸಮಾಜಕ್ಕೆ ಆದರ್ಶಮಯಿಯಾಗಿ, ಅಪ್ಪಟ ಶಿಕ್ಷಣ ಪ್ರೇಮಿ, ಸಹೃದಯಿಯಾದ ತಾವು ನಮ್ಮ ಸಂಸ್ಥೆಯ ಉನ್ನತ ಶಿಕ್ಷಣ ಸಂಸ್ಥೆಗೆ ಸಕಾಲದಲ್ಲಿ ದೇಣಿಗೆಯನ್ನಿತ್ತು ಸಹಕರಿಸಿದ ತಾವು ಎಲ್ಲರನ್ನು ಅಗಲಿ ಭಗವಂತನ ಪಾದಕಮಲದಲ್ಲಿ ಐಕ್ಯರಾಗಿದ್ದೀರಿ. ನಮ್ಮನ್ನಗಲಿದ ತಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿ, ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುವ,

BBA

President,
Office Bearers, MC Members
Past Presidents & Members

**BOMBAY BUNTS ASSOCIATION**

## Shradhanjali



DOB : 19-01-1947

DOD : 26-09-2026

**Shri Barkur Dharmaraj Shetty (B.D. Shetty)**

Barkur Dodmane
Co-Founder: Indian Bunts Chamber of Commerce & Industry
Founder : M/s. Unitop Chemicals Pvt. Ltd.)

ಓರ್ವ ಪ್ರತಿಷ್ಠಿತ ಕೈಗಾರಿಕೋದ್ಯಮಿಯಾಗಿ ಗುರುತಿಸಿಕೊಂಡಿರುವುದರ ಜೊತೆಗೆ, ಸಮಾಜಪರ ಚಿಂತನಶೀಲಾ, ಪರೋಪಕಾರಿ ವ್ಯಕ್ತಿತ್ವದ ಶ್ರೇಷ್ಠ ಸಮಾಜ ಸೇವಕರಾಗಿ, ಪ್ರಚಾರವನ್ನು ಬಯಸದ ಕೊಡುಗೈದಾನಿಯಾಗಿ, ನಿಷ್ಠಾವಂತ ಶಿಕ್ಷಣ ಪ್ರೇಮಿಯಾಗಿ, ಸತ್ಯ, ಧರ್ಮ, ನಿಷ್ಠೆ, ಸರಳ, ಸಜ್ಜನ ಸ್ವಭಾವವನ್ನು ಬದುಕಿನುದ್ದಕ್ಕೂ ಮೈಗೂಡಿಸಿಕೊಂಡು, ಎಲ್ಲರಿಗೂ ಮಾರ್ಗದರ್ಶಕರಾಗಿ, ಆದರ್ಶಯುತವಾದ ಜೀವನದೊಂದಿಗೆ ಎಲ್ಲರ ಪ್ರೀತಿ, ವಿಶ್ವಾಸ ಗೌರವಾಭಿಮಾನಕ್ಕೆ ಪಾತ್ರರಾಗಿ ಮಾನವೀಯತೆಗೆ ಅನ್ವರ್ಥವಾಗಿ ಬಾಳಿ, ಬದುಕಿದ ತಾವು ಇದೀಗ ಶ್ರೀ ಹರಿಯ ಪಾದಕಮಲಗಳಲ್ಲಿ ಐಕ್ಯರಾದಿರಿ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ,

ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುವ..

**Shri PRASAD P. SHETTY**

Founder & Managing Partner

GROWMORE FINANCIAL SERVICES

**GROWMORE FINANCIAL SERVICES**

A/101, Saiashish, B.R. Road, Vaishali Nagar,
Mulund (West), Mumbai - 400 080.